

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ


ಮೇ 8 ಭಾನುವಾರ 2022

ಸಂಪುಟ: 43 | ಸಂಚಿಕೆ: 22 | ಪುಟಗಳು: 10

₹4

ದೂರವಾಣಿ: 2496520, 2496521, 2496526, 2496527, 2496528,
ಜಾಹೀರಾತು: 2496522, 2496523, ನಗರ ಕಚೇರಿಗಳು: ಕೆ.ಆರ್. ಸರ್ಕಲ್,
ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695


ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com
website: www.mysurumithra.com



ಯಾರೇ ಆರೋಪ ಮಾಡಿದರೂ ಸೂಕ್ತ ದಾಖಲೆ ನೀಡಬೇಕು

• ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಖಡಕ್ ವಾರ್ನಿಂಗ್
• ವಿಪಕ್ಷಗಳು ಮಾತ್ರವಲ್ಲ ಸ್ವಪಕ್ಷದವರ ಆರೋಪಗಳಿಂದ ದಿಕ್ಕೆಟ್ಟ ಸಿಎಂ

ಬೆಂಗಳೂರು, ಮೇ 7(ಕೆಎಂಶಿ)– ಸರ್ಕಾರದ ವಿರುದ್ಧದ ಆರೋಪಗಳಿಗೆ, ಆರೋಪ ಮಾಡುವವರು ಸೂಕ್ತ ದಾಖಲೆ ಒದಗಿಸಬೇಕು ಎಂದು ಮುಖ್ಯಮಂತ್ರಿ ಬಸವ ರಾಜ ಬೊಮ್ಮಾಯಿ ಇಂದಿಲ್ಲಿ ಹೇಳಿದ್ದಾರೆ.



ಪ್ರತಿಪಕ್ಷಗಳ ಮುಖಂಡರಲ್ಲದೇ ಸ್ವಪಕ್ಷದವರಿಂದಲೂ ಆರೋಪ ಕೇಳಿಬಂದಿರುವ ಹಿನ್ನೆಲೆಯಲ್ಲಿ ಮುಖ್ಯ ಮಂತ್ರಿ, ಅಗತ್ಯ ದಾಖಲೆ ಹಾಗೂ ಪುರಾವೆಯೊಂದಿಗೆ ಹೇಳಿಕೆ ನೀಡಬೇಕು. ಹೇಳಿಕೆಗೆ ಸೂಕ್ತ ದಾಖಲೆ ಒದ ಗಿಸುವುದು ಜವಾಬ್ದಾರಿ ಎಂದಿದ್ದಾರೆ. ಶಾಸಕ ಬಸನಗೌಡ ಪಾಟೀಲ್ ಯತ್ನಾಳ್ ಅವರು, ಎರಡೂವರೆ ಸಾವಿರ ಕೋಟಿ ನೀಡಿದರೆ, ಮುಖ್ಯ ಮಂತ್ರಿ ಸ್ಥಾನ ನೀಡುವ ವಿಚಾರ ಪ್ರಸ್ತಾಪಿಸಿದ್ದರು. ಈ ಪ್ರಸ್ತಾ ಪದ ಬೆನ್ನಲ್ಲೇ ಮುಖ್ಯಮಂತ್ರಿ, ▶ 8ನೇ ಪುಟಕ್ಕೆ

ಮೇ 10 ಅಥವಾ 11ಕ್ಕೆ ಸಚಿವ ಸಂಪುಟ ಪುನರ್ರಚನೆ?


ಬೆಂಗಳೂರು: ಸಚಿವ ಸಂಪುಟ ವಿಸ್ತರಣೆ ಸಂಬಂಧ ದೆಹಲಿಯಿಂದ ವರಿಷ್ಠರ ಕರೆ ಬಂದ ಕೂಡಲೇ ಹೋಗು ತ್ತೇನೆ. ನಾನು ಯಾವಾಗ ಬರಲು ಹೇಳಿದರೂ ಹೋಗಲು ಸಿದ್ಧವಾಗಿದ್ದೇನೆ ಎಂದು ಸಿಎಂ ಬೊಮ್ಮಾಯಿ ಹೇಳಿದರು.

ಮೇ 10ರಂದು ದೆಹಲಿಯಲ್ಲಿ ಹೂಡಿಕೆದಾರರ ಸಮಾವೇಶವಿದ್ದು, ಅದರಲ್ಲಿ ಭಾಗವಹಿಸಲು ಅಧಿಕೃತ ಕಾರ್ಯಕ್ರಮಕ್ಕೆ ಸಿಎಂ ಬೊಮ್ಮಾಯಿ ದೆಹಲಿಗೆ ಹೋಗು ತ್ತಿದ್ದಾರೆ. ಅಂದೇ ವರಿಷ್ಠರ ಜೊತೆ ಚರ್ಚಿಸಿ ಸಂಪುಟ ಪುನರ್ರಚನೆಗೆ ಮುಹೂರ್ತ ಫಿಕ್ಸ್ ಆಗಲಿದೆಯೇ ಎಂಬ ಮಾತುಗಳು ಜೋರಾಗಿದೆ. ಮೇ 11ರಂದು ಸಿಎಂ ಬೆಂಗಳೂರಿಗೆ ವಾಪಸ್ಸಾಗಲಿದ್ದಾರೆ. ಅಂದು ಬೆಳಗ್ಗೆ 11 ಗಂಟೆಗೆ ನಿಗದಿಯಾಗಿದ್ದ ಸಚಿವ ಸಂಪುಟ ಸಭೆ ಅಂದೇ ಸಂಜೆ 4 ಗಂಟೆಗೆ ಮುಂದೂಡಿಕೆಯಾಗಿದೆ.

ಸಿಎಂ ಬದಲಾವಣೆ ಮಾತೇ ಇಲ್ಲ

ದೆಹಲಿಯಿಂದ ಯಾವುದೇ ಲಿಸ್ಟ್ ತಂದಿಲ್ಲ

ಹುಬ್ಬಳ್ಳಿ: ರಾಜ್ಯದಲ್ಲಿ ಮತ್ತೆ ಮುಖ್ಯಮಂತ್ರಿ ಬದ ಲಾವಣೆ ಮಾತೇ ಇಲ್ಲ, ಇದೆಲ್ಲಾ ಊಹಾಪೋಹ ಎಂದು ಕೇಂದ್ರ ಸಚಿವ ಪ್ರಹ್ಲಾದ್ ಜೋಶಿ ತಿಳಿಸಿ ದ್ದಾರೆ. ಹುಬ್ಬಳ್ಳಿಯಲ್ಲಿ ಮಾತನಾಡಿದ ಅವರು, ಬೆಂಗಳೂರು ವಿಮಾನ ನಿಲ್ದಾಣದಲ್ಲಿ ಸಿಎಂ ಮತ್ತು ನನ್ನ ಭೇಟಿ ಸಹಜ. ಅದಕ್ಕೆ ಯಾವುದೇ ಅರ್ಥ ಕಲ್ಪಿಸುವ ಅಗತ್ಯ ಇಲ್ಲ ಎಂದು ಹೇಳಿದ್ದಾರೆ. ನಾನು ದೆಹಲಿಯಿಂದ ಸಾಮಾನ್ಯನಾಗಿ ಬಂದಿದ್ದೇನೆ. ಯಾವುದೇ ಲಿಸ್ಟ್ ತಂದಿಲ್ಲ. ಮುಂದಿನ ಚುನಾವಣೆವರೆಗೂ ಬೊಮ್ಮಾಯಿ ಮುಖ್ಯಮಂತ್ರಿ ಆಗಿ ಇರುತ್ತಾರೆ. ಮಾಧ್ಯಮಗಳಲ್ಲಿ ಮಾತ್ರ ಮುಖ್ಯಮಂತ್ರಿ ಬದಲಾವಣೆ ▶ 8ನೇ ಪುಟಕ್ಕೆ



ಬಂಡಿಪಾಳ್ಯ ಎಪಿಎಂಸಿ ಏಜೆಂಟ್ ಕ್ಯಾಪ್ಸಿಕಮ್ ರವಿ ಹತ್ಯೆ ಪ್ರಕರಣ ಬಯಲು

ಆರೋಪಿಗಳ ಬಂಧನ: ವೈಷಮ್ಯಕ್ಕೆ ಕಗ್ಗೊಲೆ



ಗೌತಮ್ | ಕಿರಣ್ | ಲೋಹಿತ್ | ಮಹೇಶ್ | ಸತ್ಯನಾರಾಯಣ

ಮೈಸೂರು, ಮೇ 7 (ಆರ್‌ಕೆ)– ಮೈಸೂರಿನ ಬಂಡಿಪಾಳ್ಯ ಎಪಿಎಂಸಿ ಏಜೆಂಟ್ ಕ್ಯಾಪ್ಸಿಕಮ್ ರವಿಯನ್ನು ಬರ್ಬರವಾಗಿ ಹತ್ಯೆಗೈದು ಪರಾರಿಯಾಗಿದ್ದ ಐವರು ಆರೋಪಿಗಳನ್ನು ಬಂಧಿಸುವಲ್ಲಿ ಮೈಸೂರು ದಕ್ಷಿಣ ಗ್ರಾಮಾಂತರ ಪೊಲೀಸರು ಯಶಸ್ವಿಯಾಗಿದ್ದಾರೆ.



ಕ್ಯಾಪ್ಸಿಕಮ್ ರವಿ

ಕ್ಯಾಪ್ಸಿಕಮ್ ರವಿಯನ್ನು ಹತ್ಯೆಗೈದ ಎಪಿಎಂಸಿಯ ಲೋಡರ್ಸ್ ಕಾಂಟ್ರಾಕ್ಟರ್‌ಗಳಾಗಿ ಕಾರ್ಯನಿರ್ವಹಿ ಸುತ್ತಿದ್ದ ಮೈಸೂರಿನ ಕೈಲಾಸಪುರಂ ನಿವಾಸಿಗಳಾದ ಗೌತಮ್ ಅಲಿಯಾಸ್ ಅಪಿಕ(27), ಲೋಹಿತ್ ಅಲಿ ಯಾಸ್ ಲೋಹಿ(28), ಮಹೇಶ (28) ಮತ್ತು ಇವರಿಗೆ ಸಹಕರಿಸಿದ ಲೋಡರ್‌ಗಳಾದ ಆಲನಹಳ್ಳಿ ಬಳಿಯ ಮಾಲತಿ ನಗರದ ಕಿರಣ್ ಅಲಿಯಾಸ್ ಕಪ್ಪೆ (27) ಹಾಗೂ ಸತ್ಯ ನಾರಾಯಣ ಅಲಿಯಾಸ್ ಲೂಸ್ (31) ಬಂಧಿತರು.

ಮೇ 3ರಂದು ಸಂಜೆ ರವಿಯನ್ನು ಕೊಲೆ ಮಾಡಿದ ಆರೋಪಿಗಳು, ನಂತರ ಮೊಬೈಲ್ ಸ್ವಿಚ್ ಆಫ್ ಮಾಡಿ ಕೊಂಡು ಬೆಂಗಳೂರಿನ ಹೊರವಲಯದ ಲಾಡ್ಜ್ ವೊಂದರಲ್ಲಿ ಅಡಗಿದ್ದರು. ಇವರುಗಳ ಬಗ್ಗೆ ಮಾಹಿತಿ ಸಂಗ್ರಹಿಸಿದ್ದ ಪೊಲೀಸರು ಅಲ್ಲಿಗೆ ತೆರಳುವ ಮುನ್ನವೇ ಇವರೆಲ್ಲಾ ಶುಕ್ರವಾರ ಮುಂಜಾನೆ ಗೂಡ್ಸ್ ವಾಹನ ವೊಂದರಲ್ಲಿ ಮೈಸೂರು ತಾಲೂಕಿನ ಗ್ರಾಮವೊಂದರ ಪರಿಚಯಸ್ಥರ ಫಾರಂಹೌಸ್‌ನಲ್ಲಿ ಆಶ್ರಯ ಪಡೆ ದಿದ್ದರು ಎಂದು ಹೇಳಲಾಗಿದೆ.

ಶುಕ್ರವಾರ ರಾತ್ರಿ ಆರೋಪಿಗಳು ವರುಣಾ ನಾಲೆ ಬಳಿ ಜಮೀನೊಂದರಲ್ಲಿ ಮದ್ಯ ಸೇವಿಸುತ್ತ, ಪಾರ್ಟಿ ಮಾಡು ತ್ತಿದ್ದಾರೆಂಬ ಮಾಹಿತಿ ಬಾತ್ಮೀದಾರರಿಂದ ದೊರೆತ ತಕ್ಷಣ ದಾಳಿ ನಡೆಸಿದ ಮೈಸೂರು ದಕ್ಷಿಣ ಗ್ರಾಮಾಂತರ ಠಾಣೆ ಇನ್ಸ್‌ಪೆಕ್ಟರ್ ವಿ.ಎನ್.ಶಶಿಕುಮಾರ್ ನೇತೃತ್ವದ ತಂಡ ಎಲ್ಲಾ ಐವರು ಆರೋಪಿ ಗಳನ್ನು ಬಂಧಿಸುವಲ್ಲಿ ಯಶಸ್ವಿಯಾಯಿತು. ▶ 8ನೇ ಪುಟಕ್ಕೆ

ರಾಜ್ಯದಲ್ಲಿ ಕೈಗಾರಿಕೆ ಸ್ಥಾಪಿಸುವವರಿಗೆ ಭೂಮಿ ನೀಡಲು 50 ಸಾವಿರ ಎಕರೆ ಭೂಸ್ವಾಧೀನ

• ಕೈಗಾರಿಕಾ ಸಚಿವ ಮುರುಗೇಶ್ ನಿರಾಣಿ ಭರವಸೆ • ಜಿಲ್ಲೆಗಳ ಉತ್ಪನ್ನ ಆಧರಿಸಿ ಉದ್ಯಮ ಸ್ಥಾಪನೆ

ಬೆಂಗಳೂರು, ಮೇ 7(ಕೆಎಂಶಿ)– ರಾಜ್ಯದಲ್ಲಿ ಕೈಗಾ ರಿಕೆಗಳನ್ನು ಸ್ಥಾಪಿಸಲು ಮುಂದೆ ಬರುವ ಉದ್ಯಮಿಗಳಿಗೆ ಕೂಡಲೇ ಭೂ ಮಂಜೂರು ಮಾಡಲು ಅನುಕೂಲ ವಾಗುವಂತೆ ರಾಜ್ಯಾದ್ಯಂತ 50 ಸಾವಿರ ಎಕರೆ ಜಮೀನನ್ನು ಭೂ ಸ್ವಾಧೀನಪಡಿಸಿಕೊಳ್ಳಲಾಗಿದೆ ಎಂದು ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವ ಮುರುಗೇಶ್ ಆರ್.ನಿರಾಣಿ ಹೇಳಿದ್ದಾರೆ.



ಖಾಸಗಿ ಹೋಟೆಲ್‌ನಲ್ಲಿ ನಡೆದ ಭಾರತೀಯ ಉತ್ಪಾ ದನಾ ಪ್ರದರ್ಶನದ ಕರ್ಟನ್ ರೈಸರ್ ಉದ್ಘಾಟಿಸಿ ಅವರು ಮಾತನಾಡಿದರು. ನವೆಂಬರ್ 2ರಿಂದ 4ರವರೆಗೆ ಬೆಂಗ ಳೂರಿನಲ್ಲಿ ಜಾಗತಿಕ ಹೂಡಿಕೆದಾರರ ಸಮಾವೇಶ ನಡೆಯ ಲಿದೆ ಎಂದರು. ದೇಶ–ವಿದೇಶಗಳಿಂದ ಉದ್ಯಮಿಗಳು ಆಗಮಿಸಲಿದ್ದಾರೆ. ಇದಕ್ಕಾಗಿಯೇ ರಾಜ್ಯಾದ್ಯಂತ ಇಲಾಖೆ ಯಿಂದ 50 ಸಾವಿರ ಎಕರೆ ಜಮೀನನ್ನು ಭೂ ಸ್ವಾಧೀನ ಪಡಿಸಿಕೊಂಡಿದ್ದೇವೆ. ಕೇಂದ್ರ ಸರ್ಕಾರದ ಬಹುನಿರೀಕ್ಷಿತ ಆತ್ಮನಿರ್ಭರ ಭಾರತ ಯೋಜನೆಗೆ ಅನುಗುಣವಾಗಿ ರಾಜ್ಯದ 2 ಮತ್ತು 3ನೇ ಹಂತದ ನಗರಗಳಲ್ಲಿ ಕೈಗಾರಿಕೆ ಗಳ ಸ್ಥಾಪನೆಗೆ ಉತ್ತೇಜಿಸಲಾಗುವುದು. ಅಲ್ಲದೆ, ಶೀಘ್ರ ದಲ್ಲೇ ರಾಜ್ಯ ಸರ್ಕಾರವು ಒಂದು ಜಿಲ್ಲೆ ಒಂದು ಉತ್ಪನ್ನ ನೀತಿಯನ್ನು ಜಾರಿಗೆ ತರಲಿದೆ ಎಂದು ಹೇಳಿದರು.

ಉತ್ಪಾದನೆ ಆಧರಿಸಿ ಉದ್ಯಮ: ಒಂದು ಜಿಲ್ಲೆ ಒಂದು ಉತ್ಪಾದನೆ ನೀತಿಯಿಂದ ಪ್ರತಿ ಜಿಲ್ಲೆಗೆ ಒಂದು ಉತ್ಪನ್ನ ವನ್ನು ಗುರುತಿಸಲಾಗುತ್ತದೆ. ಈ ▶ 8ನೇ ಪುಟಕ್ಕೆ

> ▶ ರಾಜ್ಯದಲ್ಲಿ ಬಂಡವಾಳ ಹೂಡಿಕೆ ಮಾಡುವ ಉದ್ಯಮಿಗಳಿಗೆ ಅಗತ್ಯ ಭೂಮಿ, ನೀರು, ರಸ್ತೆ ಸೇರಿದಂತೆ ವಿಶ್ವ ದರ್ಜೆಯ ಮೂಲ ಸೌಕರ್ಯಗಳನ್ನು ಒದಗಿಸಲಾಗುವುದು. ಕೈಗಾರಿಕೆಗಳು ಹೆಚ್ಚು ಸ್ಥಾಪನೆಯಾದರೆ ಉದ್ಯೋಗಗಳು ಸೃಷ್ಟಿಯಾಗ ಲಿವೆ. ಇದರಿಂದ ಸ್ಥಳೀಯರಿಗೆ ಉದ್ಯೋಗ ದೊರೆತು ನಿರುದ್ಯೋಗ ನಿವಾರಣೆಯಾಗಲಿದೆ.
>
> –ಮುರುಗೇಶ್ ಆರ್.ನಿರಾಣಿ, ಕೈಗಾರಿಕಾ ಸಚಿವ







ಯತ್ನಾಳ್‌ಗೆ ನೋಟಿಸ್

ತುಮಕೂರು, ಮೇ7– 2,500 ಕೋಟಿ ರೂ.ಗೆ ಕರ್ನಾಟಕ ಸಿಎಂ ಹುದ್ದೆ ಆಫರ್ ಕೊಟ್ಟಿದ್ದರು ಎಂಬ ಹೇಳಿಕೆ ನೀಡಿರುವ ಶಾಸಕ ಬಸನಗೌಡ ಪಾಟೀಲ್ ಯತ್ನಾಳ್‌ಗೆ ಶಿಸ್ತು ಸಮಿತಿ ನೋಟಿಸ್ ನೀಡಿದೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ನಳಿನ್ ಕುಮಾರ್ ಕಟೀಲ್ ತಿಳಿಸಿದ್ದಾರೆ. ಮುಖ್ಯಮಂತ್ರಿ ಸ್ಥಾನ ನೀಡಲು 2500 ಕೋಟಿ ರೂ. ಹಣ ಕೇಳಿದ್ದಾಗಿ ಹೇಳಿಕೆ ನೀಡಿರುವ ಯತ್ನಾಳ್ ಅವರಿಗೆ ನೋಟಿಸ್ ನೀಡಿ ವಿವರ ಪಡೆಯಲಾಗು ವುದು. ಅನಗತ್ಯ ಹೇಳಿಕೆ ನೀಡುವ ಯತ್ನಾಳ್ ಅವರಿಗೆ ಈವರೆಗೂ ಎರಡು ನೋಟಿಸ್ ಕೊಟ್ಟು ವಿವರಣೆ ಪಡೆದುಕೊಳ್ಳಲಾಗಿದೆ. ಈ ಬಾರಿಯೂ ಕೇಂದ್ರ ಶಿಸ್ತು ಸಮಿತಿ ಮೂಲಕ ನೋಟಿಸ್ ನೀಡಲಾಗುವುದು. ಈ ಬಗ್ಗೆ ವರಿಷ್ಠರಿಗೆ ದೂರು ನೀಡಲಾಗಿದೆ. ಅವರಿಂದ ವಿವರಣೆ ಪಡೆದ ಬಳಿಕ ಮುಂದಿನ ಕ್ರಮ ಜರುಗಿಸಲಾಗುವುದು ಎಂದು ಸ್ಪಷ್ಟಪಡಿಸಿದ್ದಾರೆ.



ಪಿಎಸ್‌ಐ ನೇಮಕಾತಿ ಹಗರಣ

ಮತ್ತೊಬ್ಬ ಪೊಲೀಸ್ ಅಧಿಕಾರಿ ಸಿಐಡಿ ವಶಕ್ಕೆ

ಕಲಬುರಗಿ,ಮೇ7–ಪಿಎಸ್‌ಐ ನೇಮಕಾತಿ ಅಕ್ರಮ ಪ್ರಕರಣ ಸಂಬಂಧ ಕೆಎಸ್‌ಆರ್‌ಪಿ ಕಲಬುರಗಿಯ ಸಹಾಯಕ ಕಮಾಂಡೆಂಟ್ ಆಗಿ ಕಾರ್ಯ ನಿರ್ವಹಿಸುತ್ತಿರುವ ವೈಜಿನಾಥ ರೇವೂರ್ ಅವರನ್ನು 3ನೇ ಹೆಚ್ಚುವರಿ ಜೆಎಂಎಫ್‌ಸಿ ನ್ಯಾಯಾಲಯ 7 ದಿನಗಳ ಕಾಲ ಸಿಐಡಿ ಕಸ್ಟಡಿಗೆ ನೀಡಿದೆ. ವೈಜನಾಥ್ ರೇವೂರ್ ಅವರನ್ನು ತಮ್ಮ ವಶಕ್ಕೆ ಪಡೆದಿದ್ದ ಸಿಐಡಿ ಅಧಿಕಾರಿ ಗಳು ಶುಕ್ರವಾರ ಸಂಜೆ ಹಾಗೂ ಇಂದು ವಿಚಾರಣೆ ನಡೆಸಿ ನಂತರ ಜೆಎಂ ಎಫ್‌ಸಿ ನ್ಯಾಯಾಲಯದ ಮುಂದೆ ಹಾಜರುಪಡಿಸಿದ್ದು ನ್ಯಾಯಾಲಯ ವೈಜನಾಥ್ ಅವರನ್ನು ಏಳು ದಿನಗಳ ಕಾಲ ಸಿಐಡಿ ವಶಕ್ಕೆ ನೀಡಿದೆ.

ಮೈಸೂರು ಬಳಿಯ ಕಡಕೊಳದಲ್ಲಿ ವಿದ್ಯುತ್ ಚಾರ್ಜಿಂಗ್ ಕೇಂದ್ರ ಉದ್ಘಾಟನೆ

ಜೂನ್ ವೇಳೆಗೆ ರಾಜ್ಯದಲ್ಲಿ ಸಾವಿರ ವಿದ್ಯುತ್ ಚಾರ್ಜಿಂಗ್ ಕೇಂದ್ರ ಸ್ಥಾಪನೆ

ಎಲೆಕ್ಟ್ರಿಕ್ ವಾಹನಗಳ ಬಳಕೆ ಉತ್ತೇಜಿಸಲು ಈ ಕ್ರಮ: ಇಂಧನ ಸಚಿವ ಸುನೀಲ್‌ಕುಮಾರ್

• ದೇಶದಲ್ಲಿ ವಿದ್ಯುತ್ ಚಾಲಿತ ವಾಹನಗಳ ಪರ್ವ ಆರಂಭ • ಸೆಸ್ಕ್‌ನಿಂದಲೇ 707 ವಿದ್ಯುತ್ ಚಾರ್ಜಿಂಗ್ ಕೇಂದ್ರ ಸ್ಥಾಪನೆ • ಪರಿಸರ ಮಾಲಿನ್ಯ ತಡೆಯಲು ವಿದ್ಯುತ್ ಚಾಲಿತ ವಾಹನಗಳ ಬಳಕೆಗೆ ಕ್ರಮ • ಕೈಗೆಟಕುವ ದರದಲ್ಲಿ ಇ-ವಾಹನ ಮಾರಾಟ ಮಾಡಬೇಕು

ಮೈಸೂರು, ಮೇ 7(ಎಂಟಿವೈ)–ಇಂಧನ ಅವ ಲಂಬಿತ ವಾಹನಗಳ ಬಳಕೆ ಕಡಿಮೆ ಮಾಡಿ, ಪರಿಸರ ಮಾಲಿನ್ಯ ತಡೆಗಟ್ಟುವ ಸಲುವಾಗಿ ಎಲೆ ಕ್ಟ್ರಿಕ್ ವಾಹನಗಳ ಬಳಕೆ ಉತ್ತೇಜಿಸಲು ಸರ್ಕಾರ ಕ್ರಮ ಕೈಗೊಂಡಿದ್ದು, ಜೂನ್ ಅಂತ್ಯದ ವೇಳೆಗೆ ರಾಜ್ಯದಾದ್ಯಂತ ಒಂದು ಸಾವಿರ ವಿದ್ಯುತ್ ಚಾಲಿತ ವಾಹನಗಳ ವಿದ್ಯುತ್ ಚಾರ್ಜಿಂಗ್ ಕೇಂದ್ರ ವನ್ನು ಸ್ಥಾಪಿಸಲಾಗು ವುದು ಎಂದು ಇಂಧನ ಸಚಿವ ವಿ.ಸುನೀಲ್ ಕುಮಾರ್ ತಿಳಿಸಿದ್ದಾರೆ.

> ಇ–ಬೈಕ್‌ಗಳಲ್ಲಿ ಬೆಂಕಿ ಕಾಣಿಸಿಕೊಂಡ ಘಟನೆಗಳ ಕುರಿತು ಗ್ರಾಹಕರು ತಲೆಕೆಡಿಸಿ ಕೊಳ್ಳುವ ಅಗತ್ಯ ವಿಲ್ಲ. ತಾಂತ್ರಿಕ ದೋಷ, ಸಣ್ಣ ನ್ಯೂನತೆಯಿಂದ ಹೀಗೆ ಆಗಿದ್ದು, ಅದನ್ನು ಕಂಪನಿಗಳು ಸರಿಪಡಿಸಲಿವೆ.
>
> –ಜಯವಿಭವಸ್ವಾಮಿ, ಸೆಸ್ಕ್ ಎಂಡಿ.

ಮೈಸೂರು–ನಂಜನ ಗೂಡು ಮುಖ್ಯ ರಸ್ತೆ ಕಡಕೊಳದಲ್ಲಿರುವ ಕೆಇಬಿ ಇಂಜಿನಿಯರ್ ಗಳ ಸಂಘದ ಆವರಣ ದಲ್ಲಿ ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ(ಸೆಸ್ಕ್) ನಿರ್ಮಿ ಸಿರುವ ವಿದ್ಯುತ್ ಚಾರ್ಜಿಂಗ್ ಕೇಂದ್ರ ಉದ್ಘಾಟಿಸಿದ ಬಳಿಕ ವಿದ್ಯುತ್ ಚಾಲಿತ ತಂತ್ರಜ್ಞಾನದ ಕುರಿತ ರಾಷ್ಟ್ರೀಯ ವಿಚಾರ ಸಂಕಿರಣಕ್ಕೆ ಚಾಲನೆ ನೀಡಿ, ಮಾತನಾಡಿದರು. ▶ 6ನೇ ಪುಟಕ್ಕೆ




ವಿದ್ಯುತ್ ಚಾಲಿತ ವಾಹನಗಳ ಚಾರ್ಜಿಂಗ್ ಕೇಂದ್ರಕ್ಕೆ ಚಾಲನೆ ನೀಡಿದ ಸಚಿವ ವಿ.ಸುನೀಲ್‌ಕುಮಾರ್.

ಟ್ರಾನ್ಸ್‌ಫಾರ್ಮರ್ ದುರಸ್ತಿ ಅಭಿಯಾನ

ರಾಜ್ಯಾದ್ಯಂತ ಮೇ 5ರಿಂದ 20ರವರೆಗೆ ಕೆಟ್ಟು ಹೋದ ವಿದ್ಯುತ್ ಪರಿವರ್ತಕಗಳನ್ನು(ಟಿಸಿ) ದುರಸ್ತಿ ಹಾಗೂ ನಿರ್ವಹಣೆಯ ವಿಶೇಷ ಅಭಿಯಾನ ಆರಂಭಿಸಲಾಗಿದೆ. ಕೇವಲ 24 ಗಂಟೆಯಲ್ಲೇ ಈ ಅಭಿಯಾನದಲ್ಲಿ ಶೇ.80ರಷ್ಟು ಪ್ರಗತಿ ಸಾಧಿಸಲಾಗಿದೆ. ಸೆಸ್ಕ್ ವ್ಯಾಪ್ತಿಯಲ್ಲೇ 8,700 ಟಿಸಿ ಬದಲಿಸಲಾಗಿದೆ. ಕೆಟ್ಟಿರುವ ಟಿಸಿಗಳ ಬದಲಾವಣೆಯಷ್ಟೇ ಅಲ್ಲ, ಅವುಗಳು ಹಾಳಾಗದಂತೆ ಮುನ್ನೆಚ್ಚರಿಕೆ ವಹಿಸಿ ನಿರ್ವಹಣೆ ಮಾಡಲು ಅಭಿಯಾನ ಕೈಗೊಂಡಿದ್ದು, 15 ದಿನಗಳ ಕಾಲ ಟಿಸಿಯಲ್ಲಿನ ಲೋಪದೋಷವನ್ನು ದುರಸ್ತಿ ಮಾಡಿಸಿ ಅವುಗಳು ಸುಸ್ಥಿತಿಯಲ್ಲಿ ಇರುವಂತೆ ಅಗತ್ಯ ಕ್ರಮ ವಹಿಸಲಾಗುವುದು.

–ಸುನೀಲ್‌ಕುಮಾರ್, ಇಂಧನ ಸಚಿವ.



ಭೋಟಾ ಪಾಕಿಸ್ತಾನ್ ಘೋಷಣೆ ಕೂಗಿದವರ ವಿರುದ್ಧ ಕಠಿಣ ಕ್ರಮಕ್ಕೆ ಪ್ರಮೋದ್ ಮುತಾಲಿಕ್ ಆಗ್ರಹ



ಮೈಸೂರು,ಮೇ7(ಆರ್‌ಕೆ)–ನಂಜನಗೂಡು ತಾಲೂಕು ಕೌಲಂದೆ ಗ್ರಾಮದಲ್ಲಿ ಭೋಟಾ ಪಾಕಿಸ್ತಾನ್ ಘೋಷಣೆ ಕೂಗಿದ ಆರೋಪಿಗಳ ವಿರುದ್ಧ ಕಠಿಣ ಕಾನೂನು ಕ್ರಮ ಕೈಗೊಳ್ಳಬೇಕೆಂದು ಶ್ರೀರಾಮ ಸೇನೆ ಮುಖ್ಯಸ್ಥ ಪ್ರಮೋದ್ ಮುತಾಲಿಕ್ ಒತ್ತಾಯಿಸಿದ್ದಾರೆ.

ಈ ಸಂಬಂಧ ಎಸ್ಪಿ ಆರ್. ಚೇತನ್ ಅವರಿಗೆ ಮನವಿ ಸಲ್ಲಿಸಿದ ಅವರು, ದೇಶದ್ರೋಹ ಘೋಷಣೆ ಕೂಗಿದವರ ವಿರುದ್ಧ ಪ್ರಕರಣ ದಾಖಲಿಸಿ ಬಂಧಿಸಿದ್ದೀರಿ ಸಾಲದು, ಉಗ್ರ ರೀತಿಯ ಶಿಕ್ಷೆಯಾಗುವಂತೆ ತನಿಖೆ ನಡೆಸಬೇಕೆಂದು ಆಗ್ರಹಿಸಿದರು.

ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಘೋಷಣೆ ಹಿಂದೆ ಹಲವರ ಕೈವಾಡವಿದೆ. ಅವರ ಪ್ರಚೋದನಾಕಾರಿ ಭಾಷಣದಿಂದಲೇ ಈ ರೀತಿಯ ಘೋಷಣೆ ಕೂಗಿದ್ದಾರೆ. ಈ ಬಗ್ಗೆ ಸಮಗ್ರ ತನಿಖೆಯಾಗಬೇಕು. ಸಾಮೂಹಿಕ ಪ್ರಾರ್ಥನೆ ವೇಳೆ ಈ ಬೆಳವಣಿಗೆ ನಡೆದಿರುವುದಕ್ಕೆ ಪ್ರೇರೇಪಿಸಿದವರ ವಿರುದ್ಧವೂ ಕ್ರಮ ಜರುಗಿಸಬೇಕು ಎಂದರು. ನಮ್ಮ ಸುಪ್ರಭಾತ ಅಭಿಯಾನ ಯಾವುದೇ ಕಾರಣಕ್ಕೂ ನಿಲ್ಲಲ್ಲ. ಈಗಾಗಲೇ ಎಲ್ಲಾ ತಯಾರಿ ಮಾಡಲಾಗಿದೆ. ಅದನ್ನು ಯಾರಿಂದಲೂ ತಡೆಯಲು ಸಾಧ್ಯವಿಲ್ಲ ಎಂದರು.

ಮೈಸೂರಲ್ಲಿ ಫ್ಲೆಕ್ಸ್ ಅಳವಡಿಸಿದರೆ ದಂಡ

ಮೈಸೂರು, ಮೇ 7 (ಆರ್‌ಕೆ)– ಮೈಸೂರಿನ ಅಂದಗೆಡಿಸುವ ಫ್ಲೆಕ್ಸ್, ಬ್ಯಾನರ್ ಅಳವಡಿಸಿದಲ್ಲಿ ನಿರ್ದಾಕ್ಷಿಣ್ಯವಾಗಿ ದಂಡ ವಿಧಿಸಲಾಗುವುದು ಎಂದು ಮೈಸೂರು ಮಹಾನಗರಪಾಲಿಕೆ ಆಯುಕ್ತ ಲಕ್ಷ್ಮೀಕಾಂತರೆಡ್ಡಿ ಎಚ್ಚರಿಕೆ ನೀಡಿದ್ದಾರೆ.



ಪಾಲಿಕೆ ಆಯುಕ್ತರ ಎಚ್ಚರಿಕೆ

ಈ ಕುರಿತು 'ಮೈಸೂರು ಮಿತ್ರ'ನಿಗೆ ಪ್ರತಿಕ್ರಿಯೆ ನೀಡಿದ ಅವರು, ಫ್ಲೆಕ್ಸ್, ಬ್ಯಾನರ್ ಅಳವಡಿಸದಂತೆ ನೋಡಿಕೊಳ್ಳಬೇಕು. ರಾತ್ರೋರಾತ್ರಿ ಅಳವಡಿಸಿದ್ದಲ್ಲಿ ಸಂಬಂಧಪಟ್ಟ ರಾಜಕೀಯ ಪಕ್ಷ ಸಂಸ್ಥೆಗಳಿಗೆ ನೋಟಿಸ್ ನೀಡಿ ದಂಡ ವಸೂಲಿ ಮಾಡಿ ತೆರವುಗೊಳಿಸಬೇಕೆಂದು ಎಲ್ಲಾ ವಲಯ ಕಚೇರಿಗಳ ಸಹಾಯಕ ಆಯುಕ್ತರಿಗೆ ಸೂಚನೆ ನೀಡಲಾಗಿದೆ ಎಂದರು.

ಸಾರ್ವಜನಿಕ ಸ್ಥಳ, ಸರ್ಕಲ್‌ಗಳಲ್ಲಿ ಫ್ಲೆಕ್ಸ್, ಬ್ಯಾನರ್ ಅಳವಡಿಸಿ ನಗರದ ಅಂದವನ್ನು ಹಾಳು ಮಾಡುತ್ತಿರುವುದು ಕಾನೂನುಬಾಹಿರವಾಗಿದ್ದು, 1981ರ ಕರ್ನಾಟಕ ಓಪನ್ ಸ್ಪೇಸ್ ಕಾಯ್ದೆ ಮತ್ತು 1964ರ ಕರ್ನಾಟಕ ಮುನ್ಸಿಪಾಲಿಟಿ ಆಕ್ಟ್ ಪ್ರಕಾರ 6 ತಿಂಗಳ ಸಜೆ ಹಾಗೂ ಒಂದು ಸಾವಿರ ರೂ. ದಂಡ ವಿಧಿಸಬಹುದಾಗಿದೆ ಎಂದು ಆಯುಕ್ತರು ತಿಳಿಸಿದ್ದಾರೆ.

ಇತ್ತೀಚೆಗೆ ಕೆಲವು ರಾಜಕೀಯ ಪಕ್ಷದವರು ಮೈಸೂರಿನ ಪ್ರಮುಖ ರಸ್ತೆ, ಸರ್ಕಲ್‌ಗಳಲ್ಲಿ ಫ್ಲೆಕ್ಸ್‌ಗಳನ್ನು ಅಳವಡಿಸಿದ್ದರು. ಅವುಗಳನ್ನು ಪಾಲಿಕೆಯಿಂದ ತೆರವುಗೊಳಿಸಲಾಗಿದೆ. ಹಾಗೂ ಫ್ಲೆಕ್ಸ್ ಅಳವಡಿಸಿದವರು, ತಪ್ಪಿದಲ್ಲಿ ದಂಡ ವಸೂಲಿ ಮಾಡಲಾಗುವುದು ಎಂದು ಎಲ್ಲಾ ರಾಜಕೀಯ ಪಕ್ಷಗಳಿಗೂ ನೋಟಿಸ್ ಜಾರಿ ಮಾಡಲಾಗಿದೆ ಎಂದು ತಿಳಿಸಿದರು.

ಬಸವ ಮಾರ್ಗ ಫೌಂಡೇಷನ್ ಸಂಸ್ಥಾಪಕ ಬಸವರಾಜು ಅವರಿಗೆ 'ಅಚೀವರ್ಸ್ ಆಫ್ ಕರ್ನಾಟಕ ಪ್ರಶಸ್ತಿ'



ಮೈಸೂರು, ಮೇ 7–ನಾನಾ ಕ್ಷೇತ್ರಗಳಲ್ಲಿ ಗಣನೀಯ ಸೇವಾ ಸಾಧನೆ ಮಾಡಿದ ಸಾಧಕರಿಗೆ ಇತ್ತೀಚೆಗೆ ಮೈಸೂರಿನಲ್ಲಿ ಏರ್ಪಡಿಸಿದ ಸಮಾರಂಭದಲ್ಲಿ 'ವಿಜಯ ಕರ್ನಾಟಕ ಅಚೀವರ್ಸ್ ಆಫ್ ಕರ್ನಾಟಕ ಪ್ರಶಸ್ತಿ' ಪ್ರದಾನ ಮಾಡಲಾಯಿತು.

ಈ ಸಂದರ್ಭದಲ್ಲಿ ಮದ್ಯ ವ್ಯಸನಿಗಳ ವ್ಯಸನಮುಕ್ತರನ್ನಾಗಿ ಮಾಡಿ, ಮತ್ತೆ ಸಮಾಜದ ಮುಖ್ಯವಾಹಿನಿಗೆ ತರುವಲ್ಲಿ ಶ್ರಮಿಸುತ್ತಿರುವ ಬಸವ ಮಾರ್ಗ ಫೌಂಡೇಷನ್ ಸಂಸ್ಥಾಪಕ ಎಸ್. ಬಸವರಾಜು ಅವರಿಗೆ ಆದಿಚುಂಚನಗಿರಿ ಮಠಾಧ್ಯಕ್ಷರಾದ ಡಾ. ಶ್ರೀ ನಿರ್ಮಲಾನಂದನಾಥ ಸ್ವಾಮೀಜಿ ಪ್ರಶಸ್ತಿ ನೀಡಿ ಗೌರವಿಸಿ, ಆಶೀರ್ವದಿಸಿದರು.



ಮೈಸೂರಿನ ಇಟ್ಟಿಗೆಗೂಡಿನಲ್ಲಿ ಚಾಮುಂಡೇಶ್ವರಿ ಮತ್ತು ಮಾರಿಯಮ್ಮ 98ನೇ ವರ್ಷದ ಕರಗ ಮಹೋತ್ಸವದ ಹಾಗೂ ಪುನೀತ್ ರಾಜ್‌ಕುಮಾರ್ ಸ್ಮರಣೆ ಅಂಗವಾಗಿ ಏರ್ಪಡಿಸಿರುವ ಕುಸ್ತಿ ಪಂದ್ಯಾವಳಿಯ ಪೋಸ್ಟರ್ ಅನ್ನು ಚಿತ್ರನಟ ಧ್ರುವಸರ್ಜಾ ಬಿಡುಗಡೆ ಮಾಡಿದರು. ಈ ವೇಳೆ ಯುವ ಮುಖಂಡರಾದ ಮದನ್, ಮಧು ಇನ್ನಿತರರಿದ್ದರು.

ಮೇ 21ಕ್ಕೆ ನೀಟ್ ಪಿಜಿ ಪರೀಕ್ಷೆ

ನವದೆಹಲಿ: ಈ ಬಾರಿಯ ನೀಟ್ ಪಿಜಿ ಪರೀಕ್ಷೆ ನಿಗದಿಯಂತೆ ಮೇ 21ಕ್ಕೆ ನಡೆಯಲಿದೆ. ರಾಷ್ಟ್ರೀಯ ಪರೀಕ್ಷಾ ಮಂಡಳಿ ಹೆಸರಿನಲ್ಲಿ ಜುಲೈ 9ರಂದು ಪರೀಕ್ಷೆ ನಡೆಯಲಿದೆ ಎಂಬುದಾಗಿ ಹರಿದಾಡುತ್ತಿರುವ ನೋಟಿಸ್ ನಕಲಿ ಎಂದು ಪಿಐಬಿ ತಿಳಿಸಿದೆ. ತನ್ನ ಹೆಸರಿನಲ್ಲಿ ಹರಿದಾಡುತ್ತಿರುವ ಸುಳ್ಳು ಮಾಹಿತಿ ವಿರುದ್ಧ ಪಾಲುದಾರರು ನಿಗಾ ವಹಿಸುವಂತೆ ವೈದ್ಯಕೀಯ ವಿಜ್ಞಾನಗಳ ರಾಷ್ಟ್ರೀಯ ಪರೀಕ್ಷಾ ಮಂಡಳಿ ಹೇಳಿದೆ. ನೀಟ್ ಪರೀಕ್ಷೆ ಜುಲೈ 9ಕ್ಕೆ ಮುಂದೂಡಿಕೆಯಾಗಿರುವುದಾಗಿ ಕೆಲ ಮಾಧ್ಯಮಗಳಲ್ಲಿ ವರದಿಯಾಗಿತ್ತು. ನೀಟ್ ಪರೀಕ್ಷೆ ಮುಂದೂಡಲಾಗಿದೆ ಎಂಬುದಾಗಿ ರಾಷ್ಟ್ರೀಯ ಪರೀಕ್ಷಾ ಮಂಡಳಿ ಹೆಸರಿನಲ್ಲಿ ಹರಿದಾಡುತ್ತಿರುವ ನೋಟಿಸ್ ನಕಲಿಯಾಗಿದೆ. ಪರೀಕ್ಷೆ ಮುಂದೂಡಿಕೆಯಾಗಿಲ್ಲ. ಮೇ 21ಕ್ಕೆ ಪರೀಕ್ಷೆ ನಡೆಯಲಿದೆ.

ಗೃಹ ಬಳಕೆ ಎಲ್‌ಪಿಜಿ ಸಿಲಿಂಡರ್ ಬೆಲೆ 50 ರೂ. ಹೆಚ್ಚಳ

ನವದೆಹಲಿ: ಗೃಹ ಬಳಕೆ ಅಡುಗೆ ಅನಿಲ ಬೆಲೆ ಮತ್ತೆ ಹೆಚ್ಚಳವಾಗಿದೆ. 14.2 ಕೆಜಿ ತೂಕದ ಸಿಲಿಂಡರ್ ಬೆಲೆ 50 ರೂ.ಹೆಚ್ಚಳವಾಗಿದ್ದು ನೂತನ ದರ ಮೇ 7ರಿಂದಲೇ ಜಾರಿಗೆ ಬರಲಿದೆ. ಇನ್ನು ಮುಂದೆ ಅಡುಗೆ ಅನಿಲ ಬೆಲೆ 999 ರೂ. 50 ಪೈಸೆಯಾಗಲಿದೆ. ಕಳೆದ ವಾರ, 19–ಕೆಜಿ ವಾಣಿಜ್ಯ ಬಳಕೆ ಎಲ್‌ಪಿಜಿ ಸಿಲಿಂಡರ್‌ನ ಬೆಲೆಯನ್ನು 102 ರೂ. 50 ಪೈಸೆಯಷ್ಟು ಹೆಚ್ಚಿಸಲಾಗಿತ್ತು. ಇದು ಸತತ 3ನೇ ಮಾಸಿಕ ಹೆಚ್ಚಳವಾಗಿದೆ. ಮಾರ್ಚ್‌ನಲ್ಲಿ ಅಡುಗೆ ಅನಿಲ ಸಿಲಿಂಡರ್‌ಗೆ 50 ರೂ. ಹೆಚ್ಚಳವಾಗಿತ್ತು.




ನಿಧನ

ನೆನಪು ಪ್ರಿಂಟರ್ಸ್ ಮಾಲೀಕ ಎಂ.ಎನ್.ವೆಂಕಟೇಶ್



ಮೈಸೂರು,ಮೇ7–ಮೈಸೂರಿನ ಎನ್.ಆರ್.ಮೊಹಲ್ಲಾದ ಶಿವಾಜಿ ರಸ್ತೆಯಲ್ಲಿರುವ ನೆನಪು ಪ್ರಿಂಟರ್ಸ್ ಮಾಲೀಕರಾದ ಎಂ.ಎನ್. ವೆಂಕಟೇಶ್ (61) ಶನಿವಾರ ಹೃದಯಾಘಾತದಿಂದ ತಮ್ಮ ನಿವಾಸದಲ್ಲಿ ನಿಧನರಾದರು. ಮೃತರು ಪತ್ನಿ ಲತಾದೇವಿ, ಓರ್ವ ಪುತ್ರ, ಇಬ್ಬರು ಪುತ್ರಿಯರು ಸೇರಿದಂತೆ ಅಪಾರ ಬಂಧು–ಮಿತ್ರರನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಎನ್.ಆರ್. ಮೊಹಲ್ಲಾದ ರುದ್ರಭೂಮಿಯಲ್ಲಿ ಇಂದು ಸಂಜೆ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ. ನಿವೃತ್ತ ಪ್ರಾಧ್ಯಾಪಕ ಪ್ರೊ.ಎಂ.ಕೃಷ್ಣೇಗೌಡ ಸೇರಿದಂತೆ ಹಲವರು ಇವರ ಅಂತಿಮ ದರ್ಶನ ಪಡೆದರು.

ಸೈಫುಲ್ಲಾ ಬೇಗ್



ಮೈಸೂರಿನ ರಾಜೀವ್‌ನಗರ 1ನೇ ಹಂತ, 3ನೇ ಮೇನ್, 3ನೇ ಕ್ರಾಸ್ ನಿವಾಸಿ ನಿವೃತ್ತ ಉಪನ್ಯಾಸಕರು ಮತ್ತು ದಿವಂಗತ ಅಸಾದುಲ್ಲಾ ಬೇಗ್ ಅವರ ಪುತ್ರ ಸೈಫುಲ್ಲಾ ಬೇಗ್ (73) ಶನಿವಾರ ನಿಧನರಾದರು.

ಶ್ರೀಯುತರು ಮೀಲಾದ್ ಸ್ಪೋರ್ಟ್ಸ್ ಕಮಿಟಿ ಅಧ್ಯಕ್ಷರು, ಫಾರೂಕಿಯಾ ಪದವಿಪೂರ್ವ ಕಾಲೇಜಿನ ಕೌನ್ಸಿಲ್ ಸದಸ್ಯರು ಮತ್ತು ಫಾರೂಕಿಯಾ ಪ್ರೌಢಶಾಲೆಯ ಹಳೇ ವಿದ್ಯಾರ್ಥಿಗಳ ಸಂಘದ ಜಂಟಿ ಕಾರ್ಯದರ್ಶಿಯಾಗಿದ್ದರು. ಮೃತರು ಪತ್ನಿ, ಇಬ್ಬರು ಪುತ್ರರು, ಓರ್ವ ಪುತ್ರಿ ಸೇರಿದಂತೆ ಅಪಾರ ಬಂಧು ವರ್ಗ ಅಗಲಿದ್ದಾರೆ. ನಮಾಜ್–ಇ–ಜನಾಜ ಪುಲಿಕೇಶಿ ರಸ್ತೆಯಲ್ಲಿರುವ ಮಸೀದಿ–ಇ–ಹಯಾತ್ ಸಾಬ್‌ನಲ್ಲಿ ನಡೆಯಿತು. ನಂತರ ಟಿಪ್ಪು ವೃತ್ತದಲ್ಲಿರುವ ಮುಸ್ಲಿಂರ ರುದ್ರಭೂಮಿಯಲ್ಲಿ ಅಂತ್ಯಕ್ರಿಯೆ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮೈಸೂರು ರೈಲು ನಿಲ್ದಾಣ ಸಾಮರ್ಥ್ಯ ಹೆಚ್ಚಿಸಲು ಪ್ರಸ್ತಾವನೆ

ರೈಲ್ವೆ ಕಾಲೋನಿ ಹಳೆ ಕ್ವಾರ್ಟರ್ಸ್ ಕಟ್ಟಡಗಳ ತೆರವಿಗೆ ಚಿಂತನೆ

● ಅಲ್ಲಿನ ನಿವಾಸಿಗಳಿಗೆ ಬೇರೆಡೆ ವಸತಿ ಸೌಕರ್ಯ ಕಲ್ಪಿಸುವ ಆಲೋಚನೆ ● ನಾಗನಹಳ್ಳಿ ಸೆಟಲೈಟ್ ಟರ್ಮಿನಲ್ ಯೋಜನೆ ವಿಳಂಬದ ಹಿನ್ನೆಲೆಯಲ್ಲಿ ಈ ಪರ್ಯಾಯ ವ್ಯವಸ್ಥೆ





ಮೈಸೂರು, ಮೇ 7(ಆರ್‌ಕೆ)– ರೈಲುಗಳ ಸಂಚಾರ ಹಾಗೂ ಪ್ರಯಾಣಿಕರ ಸಂಖ್ಯೆ ಹೆಚ್ಚಾಗುತ್ತಿರುವುದರಿಂದ ಸಮರ್ಪಕ ನಿರ್ವಹಣೆಗಾಗಿ ಮೈಸೂರಿನ ರೈಲು ನಿಲ್ದಾಣದಲ್ಲಿನ ಟ್ರ್ಯಾಕ್ ಹಾಗೂ ಆಗ್‌ಮೆಂಟೇಷನ್ ವಿಸ್ತರಿಸುವುದು ಅನಿವಾರ್ಯವಾಗಿದೆ.

ಹೆಚ್ಚುವರಿ ಲೈನ್, ಪ್ಲಾಟ್‌ಫಾರಂ ನಿರ್ಮಿಸಿ ಹೆಚ್ಚುತ್ತಿರುವ ರೈಲುಗಳು, ಗೂಡ್ಸ್ ಟ್ರೇನುಗಳ ನಿಲುಗಡೆಗೆ ಸ್ಥಳಾವಕಾಶ ಒದಗಿಸಬೇಕಾಗಿರುವುದರಿಂದ ಪ್ರಸ್ತುತ ಇರುವ ರೈಲು ನಿಲ್ದಾಣವನ್ನು ಮತ್ತಷ್ಟು ವಿಸ್ತರಿಸ ಬೇಕಾಗಿ ರುವ ಕಾರಣ, ಪಶ್ಚಿಮ ಭಾಗದ ರೈಲು ನಿಲ್ದಾಣಕ್ಕೆ ಹೊಂದಿಕೊಂಡಂತಿರುವ ಯಾದವಗಿರಿಯ ವಾಣಿ ವಿಲಾಸ ವಾಟರ್ ವರ್ಕ್ಸ್ ಎದುರು ಕೆಆರ್‌ಎಸ್ ರಸ್ತೆಯಿಂದ ರಾಮಣ್ಣ ಸರ್ಕಲ್‌ವರೆಗೆ (ರೈಲ್ವೇ ಟ್ರಾಕ್ ಪಕ್ಕ) ಇರುವ ಸುಮಾರು 90 ವರ್ಷ ಹಳೆಯದಾದ ರೈಲ್ವೇ ಕಾಲೋನಿ ಕ್ವಾರ್ಟರ್ಸ್ ಕಟ್ಟಡಗಳನ್ನು ನೆಲಸಮಗೊಳಿಸಿ, ಅಲ್ಲಿ ರೈಲ್ವೇ ಪ್ಲಾಟ್‌ಫಾರಂ ನಿರ್ಮಿಸಲು ನೈರುತ್ಯ ರೈಲ್ವೆಯು ಚಿಂತನೆ ನಡೆಸಿದೆ.

ಕ್ವಾರ್ಟರ್ಸ್‌ನಲ್ಲಿರುವ ಹಳೇ ಕಟ್ಟಡಗಳು ಶಿಥಿಲಾವಸ್ಥೆಯಲ್ಲಿದ್ದು, ಅವುಗಳನ್ನು ನೆಲಸಮಗೊಳಿಸಿ ಹೊಸ ಕಟ್ಟಡಗಳನ್ನು ರೈಲ್ವೆ ಉದ್ಯೋಗಿಗಳಿಗೆ ಒದಗಿಸ ಬೇಕಾಗಿರುವುದರಿಂದ ಆ ಜಾಗವನ್ನು ರೈಲು ನಿಲ್ದಾಣದ ವಿಸ್ತರಣೆಗೆ ಬಳಸಿಕೊಂಡು ಕ್ವಾರ್ಟರ್ಸ್ ಅನ್ನು ಬೇರೆಡೆ ರೈಲ್ವೇ ಇಲಾಖೆ ಜಾಗದಲ್ಲೇ ನಿರ್ಮಿಸಿ ಕೊಡಬಹುದೆಂದು ಇಲಾಖೆಯು ಅಭಿಪ್ರಾಯಪಟ್ಟಿದೆ.

ಪ್ರಸ್ತುತ ಇರುವ ಹಳೇ ರೈಲ್ವೇ ಕ್ವಾರ್ಟರ್ಸ್ ಕಟ್ಟಡಗಳಲ್ಲಿ 350 ಕುಟುಂಬಗಳು ವಾಸಿಸುತ್ತಿದ್ದು, ಅವರಿಗೆ ಬಹುಮಹಡಿಯ ಗುಂಪು ಮನೆಗಳನ್ನು ಬೇರೆ ಜಾಗದಲ್ಲಿ ನಿರ್ಮಿಸಬಹುದಾಗಿದ್ದು, ಈಗಿರುವ ಜಾಗವನ್ನು ರೈಲು ನಿಲ್ದಾಣದ ವಿಸ್ತರಣೆಗೆ ಬಳಸಿಕೊಳ್ಳುವ ಬಗ್ಗೆ ನೈರುತ್ಯ ರೈಲ್ವೇ ಅಧಿಕಾರಿಗಳು ರೈಲ್ವೇ ಮಂಡಳಿಗೆ ಪ್ರಸ್ತಾವನೆ ಸಲ್ಲಿಸಿದ್ದಾರೆ.

ನಾಗನಹಳ್ಳಿಯಲ್ಲಿ ಸೆಟಲೈಟ್ ಟರ್ಮಿನಲ್ ನಿರ್ಮಿಸುವ ಯೋಜನೆಗೆ ಅಗತ್ಯವಿರುವ ಭೂಮಿಯನ್ನು ಸ್ವಾಧೀನಪಡಿಸಿ ಹಸ್ತಾಂತರಿಸಲು ರೈಲ್ವೇ ಇಲಾಖೆ ಕೋರಿತ್ತಾದರೂ, ಅದಕ್ಕೆ ತಗಲುವ ಪರಿಹಾರದ ಹಣವನ್ನು ಮಂಜೂರು ಮಾಡಿದರೆ ನಾವು ಭೂಸ್ವಾಧೀನಪಡಿಸಿ ಕೊಡುವುದಾಗಿ ರಾಜ್ಯ ಸರ್ಕಾರ ಹೇಳಿದ್ದರಿಂದ ಕಳೆದ ಮೂರ್‍ನಾಲ್ಕು ವರ್ಷಗಳಿಂದ ಆ ಯೋಜನೆ ನೆನೆಗುದಿಗೆ ಬಿದ್ದಿದೆ. ಟರ್ಮಿನಲ್ ಬಂದಿದ್ದರೆ ಹೆಚ್ಚುವರಿ ಟ್ರೇನ್, ಗೂಡ್ಸ್ ಟ್ರೇನುಗಳನ್ನು ಅಲ್ಲಿ ನಿಲುಗಡೆ ಮಾಡಬಹುದಿತ್ತು. ಅದು ಸಾಕಾರವಾಗದಿರುವುದರಿಂದ ಪ್ರಸ್ತುತ ಇರುವ ಮೈಸೂರು ರೈಲು ನಿಲ್ದಾಣವನ್ನೇ ವಿಸ್ತರಿಸುವುದು ಅನಿವಾರ್ಯ ಎಂಬುದನ್ನೂ ಅಧಿಕಾರಿಗಳು ಪ್ರಸ್ತಾವನೆಯಲ್ಲಿ ಪ್ರಸ್ತಾಪಿಸಿದ್ದಾರೆ.

ಹೆಚ್ಚುತ್ತಿರುವ ರೈಲು, ಪ್ರಯಾಣಿಕರ ಸಂಖ್ಯೆಗನುಗುಣವಾಗಿ ಪ್ಲಾಟ್‌ಫಾರಂ, ಟ್ರ್ಯಾಕ್‌ಗಳನ್ನು ಒದಗಿಸಲು ಈಗಿರುವ ರೈಲು ನಿಲ್ದಾಣದಲ್ಲಿ ಸ್ಥಳಾವಕಾಶದ ಕೊರತೆ ಇರುವುದರಿಂದ ರೈಲ್ವೇ ಕಾಲೋನಿ ಜಾಗ ಬಳಸಿಕೊಳ್ಳುವುದು ಸೂಕ್ತ ಎಂದು ಅಭಿಪ್ರಾಯಿಸಲಾಗಿದೆ.

ನಿಲ್ದಾಣದ ಪೂರ್ವಭಾಗದಲ್ಲಿ ಶೇಷಾದ್ರಿ ಅಯ್ಯರ್ ರಸ್ತೆವರೆಗೂ ಈಗಾಗಲೇ ಟ್ರ್ಯಾಕ್‌ಗಳಿದ್ದು, ಡಿಆರ್‌ಎಂ ಕಚೇರಿ ಸೇರಿದಂತೆ ವಿವಿಧ ಪ್ರಮುಖ ಕಟ್ಟಡಗಳಿವೆ. ಪಶ್ಚಿಮ ಭಾಗದಲ್ಲೇ ಹೆಚ್ಚುವರಿ ಹಳಿಗೆ ವ್ಯವಸ್ಥೆ ಮಾಡಬೇಕಾಗಿದೆ ಎಂದು ರೈಲ್ವೇ ಅಧಿಕಾರಿವರ್ಗ ಅಭಿಪ್ರಾಯಪಟ್ಟಿದೆ.

ಸಾಧ್ಯಾಸಾಧ್ಯತೆ ಬಗ್ಗೆ ಅಧ್ಯಯನ ನಡೆಸಿ ಮಾಸ್ಟರ್ ಪ್ಲಾನ್, ಡಿಸೈನ್‌ನೊಂದಿಗೆ ಡಿಪಿಆರ್ ತಯಾರಿಸಲು ಟೆಕ್ನಿಕಲ್ ಮತ್ತು ಆರ್ಕಿಟೆಕ್ಚರಲ್ ಕನ್ಸಲ್ಟೆನ್ಸಿಗೆ ಜವಾಬ್ದಾರಿ ವಹಿಸುವ ಬಗ್ಗೆ ಅನುಮತಿ ನೀಡಿದಲ್ಲಿ ಡಿಪಿಆರ್ ತಯಾರಿಸಬಹುದೆಂದು ನೈರುತ್ಯ ರೈಲ್ವೇ ಅಧಿಕಾರಿಗಳು ಮನವಿ ಮಾಡಿದ್ದಾರೆ.

ಆರಂಭಿಕ ಹಂತದಲ್ಲಿದೆ: ರಾಹುಲ್ ಅಗರ್‌ವಾಲ್

ಮೈಸೂರು: ಹಳೇ ರೈಲ್ವೇ ಕ್ವಾರ್ಟರ್ಸ್‌ಗಳನ್ನು ತೆರವುಗೊಳಿಸಿ ಮೈಸೂರು ರೈಲು ನಿಲ್ದಾಣ ವಿಸ್ತರಿಸುವ ಯೋಜನೆ ಪ್ರಸ್ತಾಪ ಇನ್ನೂ ಆರಂಭಿಕ ಹಂತದಲ್ಲಿದೆ ಎಂದು ನೈರುತ್ಯ ರೈಲ್ವೇ ವಿಭಾಗೀಯ ರೈಲ್ವೇ ವ್ಯವಸ್ಥಾಪಕ ರಾಹುಲ್ ಅಗರ್‌ವಾಲ್ ತಿಳಿಸಿದ್ದಾರೆ.

ಕೋವಿಡ್ ನಂತರ ರೈಲು ಸಂಚಾರ ಮತ್ತು ಪ್ರಯಾಣಿಕರ ಸಂಖ್ಯೆ ಹೆಚ್ಚಳವಾಗುತ್ತಿರುವುದರಿಂದ ಪ್ರಸ್ತುತ ಇರುವ ರೈಲು ನಿಲ್ದಾಣದಲ್ಲಿ ಒತ್ತಡ ಜಾಸ್ತಿಯಾಗುತ್ತಿದೆ, ಪ್ರಯಾಣಿಕರಿಗೆ ಸೌಲಭ್ಯ ಒದಗಿಸಲು ವಿಸ್ತರಣೆ ಅತ್ಯಗತ್ಯ ಎಂದಿರುವ ಅವರು, ಅದಕ್ಕಾಗಿ ನಿಲ್ದಾಣಕ್ಕೆ ಹೊಂದಿಕೊಂಡಂತಿರುವ ರೈಲ್ವೇ ಕಾಲೋನಿಯ ಹಳೇ ಕ್ವಾರ್ಟರ್ಸ್ ಜಾಗ ಬಳಸಿಕೊಳ್ಳಬಹುದೆಂದು ಚಿಂತಿಸಲಾಗಿದೆ ಎಂದರು.

ರೈಲುಗಳ ನಿಲುಗಡೆಗೆ ಪ್ಲಾಟ್‌ಫಾರಂಗಳನ್ನು ಹೆಚ್ಚಿಸುವುದು, ಕ್ವಾರ್ಟರ್ಸ್ ಕಟ್ಟಡಗಳ ಸ್ಥಳಾಂತರಿಸಲು ಚಿಂತಿಸಲಾಗಿದೆಯಷ್ಟೇ. ಇದು ಆರಂಭಿಕ ಹಂತ, ಅಧಿಕೃತವಾಗಿ ರೈಲ್ವೇ ಮಂಡಳಿಯಿಂದ ಅನುಮೋದನೆ ಪಡೆದು ಡಿಪಿಆರ್ ಸಿದ್ಧಪಡಿಸಿ ಪ್ರಸ್ತಾವನೆ ಸಲ್ಲಿಸಬೇಕಾಗುತ್ತದೆ ಎಂದು ತಿಳಿಸಿದ್ದಾರೆ.

ರೈಲ್ವೇ ಉದ್ಯೋಗಿಗಳಿಗೆ ಬೇರೆಡೆ ಇರುವ ಇಲಾಖೆ ಜಾಗದಲ್ಲೇ ಹೊಸ ವಸತಿ ಕಟ್ಟಡ ನಿರ್ಮಿಸಿ ಕೊಡಬಹುದು. ಉದ್ದೇಶಿತ ನಾಗನಹಳ್ಳಿ ಸೆಟಲೈಟ್ ಟರ್ಮಿನಲ್ ಯೋಜನೆಯು ಕಾರಣಾಂತರಗಳಿಂದ ವಿಳಂಬವಾಗುತ್ತಿರುವುದರಿಂದ ಈ ಯೋಜನೆಗೆ ಚಿಂತಿಸಲಾಗಿದೆ ಎಂದು ಅವರು ಹೇಳಿದರು.

ರಾಜ್ಯ ಸರ್ಕಾರದ ವಿರುದ್ಧ ಕಾಂಗ್ರೆಸ್ ಕಾರ್ಯಕರ್ತರಿಂದ ಪ್ರತಿಭಟನೆ

ಮೈಸೂರು, ಮೇ7(ಆರ್‌ಕೆ)–ಹಣ ಕೊಟ್ಟು ಅಧಿಕಾರ ಪಡೆದ ಭ್ರಷ್ಟ ಬಿಜೆಪಿ ಸರ್ಕಾರವನ್ನು ಕಿತ್ತೊಗೆಯಬೇಕೆಂದು ಆಗ್ರಹಿಸಿ ಮಾಜಿ ಶಾಸಕ ಎಂ.ಕೆ. ಸೋಮಶೇಖರ್ ನೇತೃತ್ವದಲ್ಲಿ ಕಾಂಗ್ರೆಸ್ ಕಾರ್ಯಕರ್ತರು ಶನಿವಾರ ಮೈಸೂರಿನ ರಾಮಸ್ವಾಮಿ ಸರ್ಕಲ್‌ನಲ್ಲಿ ಪ್ರತಿಭಟನೆ ನಡೆಸಿದರು. ಮುಖ್ಯಮಂತ್ರಿ ಮಾಡಲು 2,500 ಕೋಟಿ ರೂ., ಸಚಿವ ಸ್ಥಾನಕ್ಕೆ 100 ಕೋಟಿ ರೂ. ಹಣ ಕೇಳಿದ್ದರು ಎಂದು ಬಿಜೆಪಿಯ ಶಾಸಕರು, ಮಾಜಿ ಸಚಿವರೂ ಆದ ಬಸನಗೌಡ ಪಾಟೀಲ್ ಯತ್ನಾಳ್ ಅವರೇ ಹೇಳಿದ್ದು, ಬಿಜೆಪಿ ಭ್ರಷ್ಟರಿಗೆ ಅಧಿಕಾರ ನೀಡಿದೆ ಎಂಬುದನ್ನು ದೃಢಪಡಿಸಿದ್ದಾರೆ. ಸರ್ಕಾರ ಭ್ರಷ್ಟಾಚಾರದ ಕೂಪವಾಗಿದೆ ಎಂದು ಪ್ರತಿಭಟನಾಕಾರರು ಆರೋಪಿಸಿದರು.



ಈ ಸಂದರ್ಭದಲ್ಲಿ ಮಾತನಾಡಿದ ಸೋಮಶೇಖರ್, ಬಿಜೆಪಿ ಎಂದರೆ ಸುಳ್ಳಿನ, ಲೂಟಿಕೋರರ ಪಕ್ಷ ಎಂಬುದನ್ನು ಅವರ ಪಕ್ಷದವರೇ ಬಹಿರಂಗಪಡಿಸುತ್ತಿದ್ದಾರೆ. ರಾಜ್ಯದಲ್ಲಿ ಬಿಜೆಪಿ ಸರ್ಕಾರ ಅಧಿಕಾರಕ್ಕೆ ಬಂದ ದಿನದಿಂದಲೂ ಹಗರಣಗಳಿಗೆ ಖ್ಯಾತಿಯಾಗಿದೆ. ಶೇ.40 ಕಮಿಷನ್ ಪಡೆಯುತ್ತಿರುವ ಸರ್ಕಾರ ಇದೀಗ ಪಿಎಸ್‌ಐ, ಸಹಾಯಕ ಪ್ರಾಧ್ಯಾಪಕರ ನೇಮಕಾತಿಯಲ್ಲೂ ಭ್ರಷ್ಟಾಚಾರ ನಡೆಸಿದೆ ಎಂದು ಆಪಾದಿಸಿದರು.

ಪ್ರಧಾನಿ ಮೋದಿ ಅವರ ಪ್ರತಿರೂಪಕ್ಕೆ ಹಾರ ಹಾಕಿ ಭ್ರಷ್ಟಾಚಾರದ ಛೇರ್ಮನ್ ಎಂದು ಅಣಕು ಪ್ರದರ್ಶನ ಮಾಡಿದ ಪ್ರತಿಭಟನಾಕಾರರು, ಬಿಜೆಪಿಯಲ್ಲಿ ಮುಖ್ಯಮಂತ್ರಿ ಮಾಡಲು 2,500 ಕೋಟಿ ರೂ., ಸಚಿವ ಸ್ಥಾನಕ್ಕೆ 100 ಕೋಟಿ ರೂ. ಹಣ ಕೊಡಬೇಕೆನ್ನುವ ಮಾಜಿ ಸಚಿವ ಬಸನಗೌಡಪಾಟೀಲ್ ಯತ್ನಾಳ್ ಅವರ ಹೇಳಿಕೆಯನ್ನು ಹಗುರವಾಗಿ ಪರಿಗಣಿಸಬಾರದು, ಇಡಿ(ಜಾರಿ ನಿರ್ದೇಶನಾಲಯ), ಸಿಬಿಐನಂತಹ ಸಂಸ್ಥೆಗಳಿಂದ ತನಿಖೆ ನಡೆಸಬೇಕು ಎಂದು ಒತ್ತಾಯಿಸಿದರು. ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಜಿ.ಸೋಮಶೇಖರ್, ಕೆಪಿಸಿಸಿ ಸದಸ್ಯರಾದ ವಿದ್ಯಾ, ಭವ್ಯ, ಸುನಿಲ್, ಎಂ.ಹರೀಶ್, ಗುಣಶೇಖರ, ಫಾರುಕ್, ಶಾದಿಕ್ ಉಲ್ಲಾ, ನಾಸಿರ್, ಶಂಕರ್ ಸೇರಿದಂತೆ ಹಲವರು ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

08.05.2022 ಭಾನುವಾರ, ಮಳೆ ನಕ್ಷತ್ರ : ಭರಣಿ 27.04.2022 ರಿಂದ 10.05.2022

ಶ್ರೀ ಶುಭಕೃತುನಾಮ ಸಂವತ್ಸರ, ಉತ್ತರಾಯಣ, ವಸಂತ ಋತು, ವೈಶಾಖ ಮಾಸ, ಶುಕ್ಲ ಪಕ್ಷ

ತಿಥಿ: ಸಪ್ತಮಿ, ನಕ್ಷತ್ರ: ಪುಷ್ಯ, ರಾಹುಕಾಲ: ಸಂಜೆ 4.30 ರಿಂದ 6ರವರೆಗೆ

■ **ಶ್ರೀ ಜಯಚಾಮರಾಜೇಂದ್ರ ಇಂಜಿನಿಯರಿಂಗ್ ಕಾಲೇಜು:** ಜೇಸಿಯಾನ–2022 ವಾರ್ಷಿಕ ಹಬ್ಬದ ಅಂಗವಾಗಿ 'ಸೈಕ್ಲೋಥಾನ್', ಮುಖ್ಯ ಅತಿಥಿಗಳು: ಎಸ್ಪಿ ಆರ್.ಚೇತನ್, ಏಕಲವ್ಯ ಪ್ರಶಸ್ತಿ ಪುರಸ್ಕೃತ ಎನ್.ಲೋಕೇಶ್, ಅಧ್ಯಕ್ಷತೆ: ಜೆಎಸ್‌ಎಸ್ ವಿಜ್ಞಾನ ಮತ್ತು ತಂತ್ರಜ್ಞಾನ ವಿವಿ ಉಪಕುಲಪತಿ ಪ್ರೊ.ಸಂತೋಷ್‌ಕುಮಾರ್, ಸ್ಥಳ: ಎಸ್‌ಜೆಸಿಇ ಆವರಣದಿಂದ, ಬೆಳಗ್ಗೆ 6.30ಕ್ಕೆ.

■ **ಶ್ರೀ ರೇಣುಕಾದೇವಿ ಕರಗ ದೇವಸ್ಥಾನ ಟ್ರಸ್ಟ್:** ಶ್ರೀ ಚಾಮುಂಡೇಶ್ವರಿ ಮತ್ತು ಶ್ರೀ ಮಾರಿಯಮ್ಮನವರ ಕರಗ ಮಹೋತ್ಸವ, ಮಧ್ಯಾಹ್ನ 12ಕ್ಕೆ ಅಂಬಲಿ ಪೂಜೆ, ಓಕುಳಿ, ಸಂಜೆ 4 ಗಂಟೆಯಿಂದ ತಂಬಿಟ್ಟು ಆರತಿ, ರಾತ್ರಿ 7 ಗಂಟೆಗೆ ಇಟ್ಟಿಗೆಗೂಡಿನಲ್ಲಿ ಕರಗ ಉತ್ಸವ, ರಾತ್ರಿ 12 ಗಂಟೆಗೆ ಮಹಾಮಂಗಳಾರತಿ, ಸ್ಥಳ: ಇಟ್ಟಿಗೆಗೂಡು.

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ:** ಸುವರ್ಣಪ್ರಾಶನ ಅಭಿಯಾನ, ಸ್ಥಳ: ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ, ಲಲಿತಾದ್ರಿಪುರ ರಸ್ತೆ, ಬೆಳಗ್ಗೆ 8 ರಿಂದ.

■ **ಶ್ರೀ ಕೃಷ್ಣ ಸೇವಾ ಸಮಿತಿ ಚಾರಿಟಬಲ್ ಟ್ರಸ್ಟ್ :** ಬ್ರಹ್ಮ ರಥೋತ್ಸವ, ಬೆಳಗ್ಗೆ 9ಕ್ಕೆ ಅನುಜ್ಞೆ, ವಾಸುದೇವ ಪುಣ್ಯಾಹವಾಚನ, ಸ್ನಪನಪೂರ್ವಕ ಮಹಾಭಿಷೇಕ, ಸಂಜೆ 6ಕ್ಕೆ ಸ್ವಸ್ತಿವಾಚನ, ಆಚಾರ್ಯ ಋತ್ವಿಗ್ವರಣ, ರಕ್ಷಾ ಬಂಧನ, ಅಂಕುರಾರ್ಪಣ, ಗರುಡಪಟ, ಪ್ರತಿಷ್ಠೆ, ಹೋಮಗಳು, ಹಂಸ ವಾಹನೋತ್ಸವ, ಸ್ಥಳ: ಟ್ರಸ್ಟ್ ಆವರಣ, ಗೋಕುಲಂ 3ನೇ ಹಂತ.

■ **ಆದರ್ಶ ಸೇವಾ ಸಂಘ :** ಆಚಾರ್ಯತ್ರಯ ಜಯಂತಿ, ತ್ರಿಮತಸ್ಥ ಬ್ರಾಹ್ಮಣ ವಟುಗಳಿಗೆ ಋಗ್ವೇದ ಪುರಸ್ಸರವಾಗಿ ಸಾಮೂಹಿಕ ಧರ್ಮೋಪನಯನ, ಸ್ಥಳ: ಶ್ರೀ ವಿದ್ಯಾಭಾರತೀ ಕಲ್ಯಾಣ ಮಂಟಪ, ಫೋರ್ಟ್ ಮೊಹಲ್ಲಾ, ಬೆಳಗ್ಗೆ 9.20 ರಿಂದ.

■ **ಜೆ.ಎಲ್.ಸುಮುಧ ಟ್ರಸ್ಟ್, ಜೆಎಸ್‌ಎಸ್ ಆಸ್ಪತ್ರೆ:** ಉಚಿತ ವೈದ್ಯಕೀಯ ತಪಾಸಣಾ ಶಿಬಿರ, ಅಧ್ಯಕ್ಷತೆ: ಟ್ರಸ್ಟ್ ಅಧ್ಯಕ್ಷ ಡಾ.ಬಿ.ಜಿ.ಪ್ರಕಾಶ್, ಉದ್ಘಾಟನೆ: ಗೋಪಾಲಪುರ ಗ್ರಾಪಂ ಅಧ್ಯಕ್ಷ ಜಯಮ್ಮ, ಸ್ಥಳ: ಕೇರ್ಗಳ್ಳಿ–ಬೀರಿಹುಂಡಿ ಮುಖ್ಯ ರಸ್ತೆಯಲ್ಲಿರುವ ಟ್ರಸ್ಟ್ ಜಾಗ, ಬೆಳಗ್ಗೆ 10ರಿಂದ.

■ **ವ್ಯವಸ್ಥಾಪಕರು :** ರಾಷ್ಟ್ರ ಪ್ರಶಸ್ತಿ ವಿಜೇತ, ಶಿಕ್ಷಣ ರತ್ನ ಪ್ರೊ. ಸಿ.ಜಿ. ವೆಂಕಟರಮಣ ಶೆಟ್ಟಿಯವರು 90 ವಸಂತಗಳನ್ನು ಪೂರೈಸಿದ ಹುಟ್ಟುಹಬ್ಬದ ಸಂಭ್ರಮಾಚರಣೆ, ಶ್ರೀಮತಿ ಭಾಗ್ಯಲೀಲಾವತಿ ಹಾಗೂ ಪ್ರೊ. ಸಿ.ಜಿ.ವೆಂಕಟರಮಣ ಶೆಟ್ಟಿ ಅವರೊಂದಿಗೆ ಆತ್ಮೀಯ ಸಂವಾದ, ಸ್ಥಳ: ವಾಸವಿ ವಿದ್ಯಾನಿಕೇತನ ಆವರಣ, ಕುವೆಂಪುನಗರ, ಬೆಳಗ್ಗೆ 10.30ಕ್ಕೆ

■ **ಗೃಹಶೋಭೆ ಇಂಟರ್‌ನ್ಯಾಷನಲ್ ಟ್ರೇಡ್ ಫೇರ್ :** ಗೃಹಶೋಭೆ ಜೀವನ ಶೈಲಿ ವಸ್ತುಪ್ರದರ್ಶನ ಮತ್ತು ಮಾರಾಟ, ಸ್ಥಳ: ಸ್ಕೌಟ್ ಅಂಡ್ ಗೈಡ್ಸ್ ಗ್ರೌಂಡ್, ಬೆಳಗ್ಗೆ 11ರಿಂದ.

■ **ಮೈಸೂರು ಕರಗ ಕುಸ್ತಿ ಸಮಿತಿ, ಇಟ್ಟಿಗೆಗೂಡು :** ಮೈಸೂರು ಕರಗ ಮಹೋತ್ಸವದ ಪ್ರಯುಕ್ತ ಕುಸ್ತಿ ಪಂದ್ಯಾವಳಿ, ಮುಖ್ಯ ಅತಿಥಿಗಳು : ಸಂಸದ ಪ್ರತಾಪ್ ಸಿಂಹ, ಶಾಸಕ ಎಲ್. ನಾಗೇಂದ್ರ, ವಿಧಾನ ಪರಿಷತ್ ಮಾಜಿ ಸದಸ್ಯ ಸಂದೇಶ್ ನಾಗರಾಜ್, ಮಾಜಿ ಶಾಸಕ ಎಂ.ಕೆ. ಸೋಮಶೇಖರ್, ಮುಡಾ ಅಧ್ಯಕ್ಷ ಹೆಚ್.ವಿ.ರಾಜೀವ್, ವಸ್ತುಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಹೇಮಂತ್‌ಕುಮಾರ್‌ಗೌಡ, ಕಾಂಗ್ರೆಸ್ ಮುಖಂಡ ಕೆ. ಹರೀಶ್‌ಗೌಡ, ಸ್ಥಳ: ದೇವರಾಜ ಅರಸು ವಿವಿಧೋದ್ದೇಶ ಕ್ರೀಡಾಂಗಣ, ಮಧ್ಯಾಹ್ನ 3.30ಕ್ಕೆ.

■ **ನೇತಾಜಿನಗರ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘ :** ಉದ್ಘಾಟನಾ ಸಮಾರಂಭ, ಉದ್ಘಾಟನೆ : ಶಾಸಕ ಜಿ.ಟಿ. ದೇವೇಗೌಡ, ಮುಖ್ಯ ಅತಿಥಿಗಳು : ಪಾಲಿಕೆ ಆಯುಕ್ತ ಜಿ. ಲಕ್ಷ್ಮೀಕಾಂತರೆಡ್ಡಿ, ಉಪಸ್ಥಿತರು : ಸಂಘದ ಉಪಾಧ್ಯಕ್ಷ ಡಾ. ಹೆಚ್.ಎಲ್. ಶಿವಬಸಪ್ಪ, ಜಿಪಂ ಮಾಜಿ ಸದಸ್ಯೆ ಸುಧಾಮಹದೇವಯ್ಯ, ಲೋಲ ಕುಮಾರ್ ಎಸ್., ಅಧ್ಯಕ್ಷತೆ : ಸಂಘದ ಅಧ್ಯಕ್ಷ ಹೆಚ್.ಎಂ. ಉಮೇಶ್, ಸ್ಥಳ: ಸಂಘದ ಆವರಣ, ನೇತಾಜಿನಗರ, ಸಂಜೆ 4ಕ್ಕೆ.

■ **ಹರಿದಾಸ ಸಂಗೀತ ಸಾಹಿತ್ಯೋತ್ಸವ ಸಮಿತಿ :** ಗಾನಸಿರಿ–ವೇದಾಂತ ಲಹರಿ ಭಾಗ–9 ನವೋತ್ಸವ, ಶ್ರೀನಿವಾಸ ಕಲ್ಯಾಣ ವೈಭವ ಕಾರ್ಯಕ್ರಮ, ವಿದ್ವಾನ್ ಬಳ್ಳಾರಿ ರಾಘವೇಂದ್ರ ಅವರಿಂದ ಸಂಗೀತ ಕಾರ್ಯಕ್ರಮ, ಸ್ಥಳ: ಶಾರದಾ ವಿಲಾಸ ಶತಮಾನೋತ್ಸವ ಭವನ, ಕೃಷ್ಣಮೂರ್ತಿಪುರಂ, ಸಂಜೆ 5 ರಿಂದ.

■ **ನಟನ ರಂಗಶಾಲೆ:** ರಜಾಮಜಾ ಮಕ್ಕಳ ಬೇಸಿಗೆ ಶಿಬಿರದ ಸಮಾರೋಪ ಸಮಾರಂಭ, ಉಪಸ್ಥಿತರು: ಗಾಯಕ ವಿಜಯ್ ಪ್ರಕಾಶ್, ಪೊಲೀಸ್ ಇನ್ಸ್‌ಪೆಕ್ಟರ್ ಕೆ.ಷಣ್ಮುಗ ವರ್ಮ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಹನೂರು ಚೆನ್ನಪ್ಪ, ಮಾಲಿನ ಆರ್.ಪಾಲಾಕ್ಷ, ಚಲನಚಿತ್ರ ನಟ ಪೃಥ್ವಿ ಅಂಬೂರ್, ನಟಿ ಖುಷಿ ರವಿ, ಗಾಯಕ ಎಂ.ಆರ್.ಶ್ರೀಹರ್ಷ, ಪ್ರಭಾಕರ್ ರಾವ್, ನಟನ ಸಂಸ್ಥೆ ಅಧ್ಯಕ್ಷ ಕೆ.ಎಸ್.ಆನಂದಕುಮಾರ್, ಸ್ಥಳ: ರಮಾಗೋವಿಂದ ರಂಗಮಂದಿರ, ರಾಮಕೃಷ್ಣನಗರ, ಸಂಜೆ 5.30ಕ್ಕೆ.

■ **ಶ್ರೀ ಶೃಂಗೇರಿ ಜಗದ್ಗುರು ಸ್ವಾಗತ ಸಮಿತಿ, ಅಭಿನವ ಶಂಕರಾಲಯ :** ಶ್ರೀ ಶೃಂಗೇರಿ ಜಗದ್ಗುರು ಶಂಕರಾಚಾರ್ಯ ಅನಂತಶ್ರೀ ವಿಭೂಷಿತ ಶ್ರೀ ಶ್ರೀ ವಿಧುಶೇಖರಭಾರತೀ ಸನ್ನಿದಾನಂಗಳವರ ವಿಜಯ ಯಾತ್ರೆ, ಮುಖ್ಯ ಅತಿಥಿಗಳು :ಶ್ರೀ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್, ಅಧ್ಯಕ್ಷತೆ : ಹಂಗಾಮಿ ಮೇಯರ್ ಸುನಂದಾ ಪಾಲನೇತ್ರ, ಸ್ಥಳ: ಶ್ರೀ ವಿದ್ಯಾಶಂಕರ ನಿಲಯ ಕಲ್ಯಾಣ ಮಂಟಪದ ಆವರಣ, ಸಂಜೆ 5.30ಕ್ಕೆ.

■ **ಶ್ರೀರಾಮಕೃಷ್ಣ ಆಶ್ರಮ :** ಸ್ವಾಮಿ ಯುಕ್ತೇಶಾನಂದ ಅವರಿಂದ ಶ್ರೀಮಾತೆಯವರ ದೈವತ್ವ ಕುರಿತು ಉಪನ್ಯಾಸ, ಸ್ಥಳ: ಆಶ್ರಮದ ಸ್ವಾಮಿ ಶಾಂಭವಾನಂದಜಿ ಸಭಾಂಗಣ, ಯಾದವಗಿರಿ, ಸಂಜೆ 6ಕ್ಕೆ.

■ **ಮೈಸೂರು ಉತ್ಸವ:** ವಸ್ತುಪ್ರದರ್ಶನ, ಸ್ಥಳ: ಜೆಎಸ್‌ಎಸ್ ಮೈದಾನ, ದೊಡ್ಡಕೆರೆ ಮೈದಾನದ ಪಕ್ಕ, ಸಂಜೆ 6ಕ್ಕೆ

■ **ರಂಗಾಯಣ :** ಡಾ. ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾನಿಲಯದ ತಂಡದಿಂದ ಗುಣಮುಖ ನಾಟಕ ಪ್ರದರ್ಶನ, ರಚನೆ : ಪಿ. ಲಂಕೇಶ್, ನಿರ್ದೇಶನ : ಡಾ. ನಾಗೇಶ್ ವಿ. ಬೆಟ್ಟಕೋಟೆ, ಸ್ಥಳ: ಭೂಮಿಗೀತ, ಸಂಜೆ 6.30ಕ್ಕೆ.

■ **ಅದಮ್ಯ ರಂಗಶಾಲೆ :** ಮೇಳೇಹಳ್ಳಿ ದೇವರಾಜ್ ಅವರ 'ಪೈಲ್ವಾನ್ ಪರದಾಟ' ಮಕ್ಕಳ ಸಾಮಾಜಿಕ ಹಾಸ್ಯ ನಾಟಕ ಪ್ರದರ್ಶನ, ನಿರ್ದೇಶನ : ಚಂದ್ರು ಮಂಡ್ಯ, ಸ್ಥಳ: ಕುವೆಂಪು ರಂಗಮಂದಿರ, ಶ್ರೀ ಕುವೆಂಪು ವಿದ್ಯಾವರ್ಧಕ ಟ್ರಸ್ಟ್, ಜಯಲಕ್ಷ್ಮಿಪುರಂ, ಸಂಜೆ 6.30ಕ್ಕೆ.

ಸೋಸಲೆ ಗ್ರಾಮದಲ್ಲಿಂದು, ತಿ. ನರಸೀಪುರ ತಾ.

■ **ಶ್ರೀ ವ್ಯಾಸರಾಜಮಠ (ಸೋಸಲೆ) :** ಶ್ರೀ ವ್ಯಾಸರಾಜ ಗುರುಸಾರ್ವಭೌಮರ ವರ್ಧಂತಿ ಮಹೋತ್ಸವ, ಬೆಳಗ್ಗೆ 6ಕ್ಕೆ ಲಕ್ಷಾವರ್ತಿ ವಾಯುಸ್ತುತಿ ಮಂತ್ರ ಪಾರಾಯಣ ಸಮಿತಿ ಚೆನ್ನೈ ಅವರಿಂದ ವಾಯುಸ್ತುತಿ ಪುನಶ್ಚರಣ ಮತ್ತು ಪವಮಾನ ಹೋಮ, ಬೆಳಗ್ಗೆ 8ಕ್ಕೆ ನವವೃಂದಾವನ ಪ್ರತಿಷ್ಠಾಂಗ ಹೋಮಗಳ ಪೂರ್ಣಾಹುತಿ, ಬೆಳಗ್ಗೆ 9ಕ್ಕೆ ಶ್ರೀವ್ಯಾಸರಾಜ ಗುರುಸಾರ್ವಭೌಮರ ಮೃತ್ತಿಕಾ ವೃಂದಾವನ ಪ್ರತಿಷ್ಠೆ, ಯತಿವರೇಣ್ಯರ ವೃಂದಾವನಗಳ ಪುನಃಪ್ರತಿಷ್ಠಾಪನೆ, ಮಹಾಕಲಶಾಭಿಷೇಕ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.05 ಚಿಂತನ–ಕುತುಬುದ್ದೀನ್ ಅಮ್ಮಾಪುರ್, 6.20 ಗೀತಾರಾಧನ, 6.35 ಸ್ವಾತಂತ್ರ್ಯ ಅಮೃತ ಮಹೋತ್ಸವದ ಸಂದರ್ಭದಲ್ಲಿ ವಿಶೇಷ ಸರಣಿ 'ನಮ್ಮ ಸಂವಿಧಾನ' ಪರಿಚಯಿಸುತ್ತಾರೆ ಡಾ. ಸುಧಾಕರ ಹೊಸಳ್ಳಿ, 6.40 ಅರಿವಿನ ಶಿಖರ–ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಕಾರ್ಯಕ್ರಮ ಸರಣಿ, ಗಾಯನ–ಟಿ.ಎನ್.ಅಶ್ವಿನಿ, ವ್ಯಾಖ್ಯಾನ–ಮೊರಬದ ಮಲ್ಲಿಕಾರ್ಜುನ, 7.15 ಪ್ರಾಯೋಜಿತ ಕಾರ್ಯಕ್ರಮ 'ಸಮಗ್ರ ವಿಕಾಸಕ್ಕಾಗಿ ದಿಟ್ಟ ಹೆಜ್ಜೆ', ಪ್ರಾಯೋಜಕರು ವಿಕಾಸ್ ಅಕಾಡೆಮಿ, ಕಲಬುರ್ಗಿ, 9.00 ಈಸಿ ಇಂಗ್ಲಿಷ್– ಕನ್ನಡದ ಮೂಲಕ ಇಂಗ್ಲಿಷ್ ಕಲಿಕೆಯ ಬಾನುಲಿ ಸರಣಿ ರಚನೆ ಮತ್ತು ಪ್ರಸ್ತುತಿ– ಸಿ.ಕೆ. ವಿಜಯನಾರಸಿಂಹ, ನಿರ್ಮಾಣ–ಎಸ್.ಲಕ್ಷ್ಮೀ ನಾರಾಯಣ, 9.30 ಆಕಾಶವಾಣಿಯೊಂದಿಗೆ ಸ್ವಾತಂತ್ರ್ಯ ಚಳುವಳಿಯ ಪಯಣ, 9.40 ನಮ್ಮ ಆರೋಗ್ಯ–'ಆಕ್ಯುಪೇಷನಲ್ ಲಂಗ್ ಡಿಸೀಸ್' ಕುರಿತು ಶ್ವಾಸಕೋಶ ರೋಗತಜ್ಞರಾದ ಡಾ.ಶ್ರೀಹರ್ಷವರ್ಧನ ಎಸ್.ವಿ. ಅವರೊಂದಿಗೆ ಮಾತುಕತೆ, 10.00 ಕೇಳಿಗಿಳಿಗಳೇ –'ಕಥೆ ಕೇಳು ಪುಟ್ಟಾ' ಪ್ರಸ್ತುತಿ– ಬಿ.ಜಿ. ಕವಿತಾ, 10.30 ಮಕ್ಕಳ ಮಂಟಪ, 'ಪ್ರತಿಭಾ ಪಲ್ಲವ', ಬಹುಮುಖ ಪ್ರತಿಭೆ ಆರೋಹಿ ಶ್ರೀಹರಿ ತೋರ್ಗಲ್ ಜೊತೆ ಮಾತುಕತೆ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ **ಮಧ್ಯಾಹ್ನ:** 12.05 ವನಿತಾ ವಿಹಾರ–ಭರವಸೆ–ಸಣ್ಣ ಕಥೆ, ಪ್ರಸ್ತುತಿ– ಶಾರದಾ ಮೂರ್ತಿ, 12.35 ದೇವರನಾಮ–ರಾಜ್‌ಕುಮಾರ್ ಭಾರತಿ, ಸಿ.ಎಸ್. ಲಕ್ಷ್ಮಿ, 12.45 ಜನಪದ ಸಂಗೀತ–ಮರಿಸಿದ್ದಮ್ಮ ಮತ್ತು ತಂಡ–ತತ್ವಪದಗಳು, 1.20 ಭಾವಗೀತೆ–ಡಾ. ಶಿಲ್ಪಾ ಹೆಗ್ಡೆ, 2.35 ಚಲನ ಚಿತ್ರ ಧ್ವನಿ ವಾಹಿನಿ 'ಸಾಕ್ಷಾತ್ಕಾರ', 3.40 ಯಕ್ಷಗಾನ ತಾಳ ಮದ್ದಲೆ – ಪ್ರಸಂಗ– ಪಾಂಡವ ಕೌರವ ಜನನ, ಪ್ರಸ್ತುತಿ– ಕುಕ್ಕುವಳ್ಳಿಯ ತೆಂಕುತಿಟ್ಟು ಯಕ್ಷಗಾನ ವೇದಿಕೆಯ ಕಲಾವಿದರು, 5.00 ಸ್ವಾತಂತ್ರ್ಯ ಅಮೃತ ಮಹೋತ್ಸವದ ಸಂದರ್ಭದಲ್ಲಿ ವಿಶೇಷ ಸರಣಿ 'ನಮ್ಮ ಸಂವಿಧಾನ' ಪರಿಚಯಿಸುತ್ತಾರೆ ಡಾ.ಸುಧಾಕರ ಹೊಸಳ್ಳಿ, 7.00 AIR Nxt programme –ವಿಷಯ–ನನ್ನ ಕನಸಿನ ಭಾರತ, ಭಾಗವಹಿಸುವರು–ಕುವೆಂಪು ವಿಶ್ವವಿದ್ಯಾಲಯದ ವಿದ್ಯಾರ್ಥಿಗಳು, 9.05 ಚಿಣ್ಣರ ಸುದ್ದಿ ಲೋಕ, ಪ್ರಚಲಿತ ವಿದ್ಯಮಾನಗಳ ವಾರ್ತಾ ಸಂಚಿಕೆ, ಪ್ರಸ್ತುತಿ– ಶಾರದಾ ಹೆಚ್.ರಾಘವೇಂದ್ರ, 9.30 ರವಿವಾಸರೀಯ ಅಖಿಲ ಭಾರತೀಯ ಸಂಗೀತ ಸಭಾ, ರಶ್ಮಿ ಚೌಧುರಿ –ಗಾಯನ, ನಂದ್ ಕಿಶೋರ್ ಮಿಶ್ರ – ತಬಲ, 11.00 ಸವಿನೆನಪು

ಶಾಸ್ತ್ರೀಯ ಕನ್ನಡ ಅತ್ಯುನ್ನತ ಅಧ್ಯಯನ ಕೇಂದ್ರಕ್ಕೆ ನೆಲೆ

ಮಾನಸಗಂಗೋತ್ರಿ ಜಯಲಕ್ಷ್ಮಿ ವಿಲಾಸ ಪರಿಶೀಲನೆ ನಡೆಸಿದ ಕನ್ನಡ-ಸಂಸ್ಕೃತಿ ಸಚಿವ ಸುನೀಲ್ ಕುಮಾರ್

ನವೀಕರಣಕ್ಕೆ 27 ಕೋಟಿ ಕ್ರಿಯಾ ಯೋಜನೆ



ಮೈಸೂರು, ಮೇ 7(ಎಸ್‌ಬಿಡಿ)- ಮೈಸೂರು-ಹುಣಸೂರು ರಸ್ತೆಯ ಭಾರತೀಯ ಭಾಷಾ ಸಂಸ್ಥಾನದಲ್ಲಿ (ಸಿಐಐಎಲ್) ಕಾರ್ಯನಿರ್ವಹಿಸುತ್ತಿರುವ ಶಾಸ್ತ್ರೀಯ ಕನ್ನಡ ಅತ್ಯುನ್ನತ ಅಧ್ಯಯನ ಕೇಂದ್ರ (ಸಿಇಎಸ್‌ಸಿಕೆ)ವನ್ನು ಮಾನಸಗಂಗೋತ್ರಿಯ ಜಯಲಕ್ಷ್ಮಿ ವಿಲಾಸ ಅರಮನೆಗೆ ಸ್ಥಳಾಂತರಿಸಲು ತೀರ್ಮಾನಿಸಿರುವ ಹಿನ್ನೆಲೆಯಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವ ವಿ.ಸುನೀಲ್ ಕುಮಾರ್ ಶನಿವಾರ ಅಧಿಕಾರಿಗಳೊಂದಿಗೆ ಸ್ಥಳ ಪರಿಶೀಲನೆ ನಡೆಸಿದರು.

ಸಂಸದ ಪ್ರತಾಪ್ ಸಿಂಹ, ಶಾಸಕ ಎಲ್.ನಾಗೇಂದ್ರ, ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ.ಹೇಮಂತ್‌ಕುಮಾರ್, ಶಾಸ್ತ್ರೀಯ ಕನ್ನಡ ಅತ್ಯುನ್ನತ ಅಧ್ಯಯನ ಕೇಂದ್ರದ ಯೋಜನಾ ನಿರ್ದೇಶಕ ಶಿವರಾಮ ಶೆಟ್ಟಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ಮಲ್ಲಿಕಾರ್ಜುನ ಸ್ವಾಮಿ, ಸಹಾಯಕ ನಿರ್ದೇಶಕ ಎಚ್.ಚನ್ನಪ್ಪ ಇನ್ನಿತರ ಅಧಿಕಾರಿಗಳೊಂದಿಗೆ ಸ್ಥಳ ಪರಿಶೀಲನೆ ನಡೆಸಿದ ಸಚಿವರು, ಅಲ್ಲಿ ಶಾಸ್ತ್ರೀಯ ಕನ್ನಡ ಅತ್ಯುನ್ನತ ಅಧ್ಯಯನ ಕೇಂದ್ರ ಆರಂಭಿಸಲು ಕೈಗೊಳ್ಳಬೇಕಾದ ನವೀಕರಣ ಕಾಮಗಾರಿ ಇನ್ನಿತರ ವ್ಯವಸ್ಥೆ ಸಂಬಂಧ ಚರ್ಚೆ ನಡೆಸಿದರು.

ಬಳಿಕ ಮಾತನಾಡಿದ ಸಚಿವ ಸುನಿಲ್ ಕುಮಾರ್, 2015ರಲ್ಲೇ ಶಾಸ್ತ್ರೀಯ ಅತ್ಯುನ್ನತ ಅಧ್ಯಯನ ಕೇಂದ್ರ ಆರಂಭವಾಗಿದೆಯಾದರೂ, ಅದಕ್ಕೆ ಪೂರಕ ವ್ಯವಸ್ಥೆ ಹಾಗೂ ಪ್ರಕ್ರಿಯೆಗೆ ವೇಗ ದೊರೆತಿರಲಿಲ್ಲ. ಸ್ಥಳೀಯ ಶಾಸಕರು, ಸಂಸದರು ಹಾಗೂ ಅಧಿಕಾರಿಗಳೊಂದಿಗೆ ಚರ್ಚಿಸಿ, ಜಯಲಕ್ಷ್ಮಿ ವಿಲಾಸ ಅರಮನೆಯನ್ನು ಅತ್ಯುನ್ನತ ಅಧ್ಯಯನ ಕೇಂದ್ರಕ್ಕಾಗಿ ಬಳಸಲು ತೀರ್ಮಾನಿಸಿದ್ದು, ಈ ನಿಟ್ಟಿನಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಮೈಸೂರು ವಿವಿಯೊಂದಿಗೆ ಒಡಂಬಡಿಕೆ ಮಾಡಿಕೊಳ್ಳಲಿದೆ. ಇಲ್ಲಿ ಅಧ್ಯಯನ ಕೇಂದ್ರ ಆರಂಭಿಸುವ ಪ್ರಕ್ರಿಯೆ ಇಂದಿನಿಂದಲೇ ನಡೆಯಲಿದೆ ಎಂದು ತಿಳಿಸಿದರು.

ಜಯಲಕ್ಷ್ಮಿ ವಿಲಾಸ ಅರಮನೆ ಕಟ್ಟಡ ನವೀಕರಣಕ್ಕೆ 27 ಕೋಟಿ ಮೊತ್ತದ ಕ್ರಿಯಾಯೋಜನೆಯನ್ನೂ ಈಗಾಗಲೇ ತಯಾರಿಸಲಾಗಿದ್ದು, ಮುಖ್ಯಮಂತ್ರಿ ಅವರೊಂದಿಗೆ ಮಾತನಾಡಿ ಶೀಘ್ರ ಅನುದಾನ ಬಿಡುಗಡೆಗೆ ಮನವಿ ಮಾಡಲಾಗುವುದು. ರಾಜ್ಯ ಸರ್ಕಾರದ ವತಿಯಿಂದ ಈ ವರ್ಷವೇ ನವೀಕರಣ ಕಾಮಗಾರಿ ಕೈಗೆತ್ತಿಕೊಳ್ಳಲಾಗುವುದು. ಇನ್ನು ಶಾಸ್ತ್ರೀಯ ಅಧ್ಯಯನಕ್ಕೆ ಸಂಬಂಧಪಟ್ಟ ಎಲ್ಲಾ ರೀತಿಯ ವ್ಯವಸ್ಥೆಯನ್ನು ಕೇಂದ್ರ ಸರ್ಕಾರ ಕಲ್ಪಿಸಲಿದೆ. ನಾನು ಮತ್ತು ಸಂಸದ ಪ್ರತಾಪ ಸಿಂಹ ಈಗಾಗಲೇ ಕೇಂದ್ರ ಸಚಿವ ಧರ್ಮೇಂದ್ರ ಪ್ರಧಾನ್ ಅವರನ್ನು ಭೇಟಿಯಾಗಿ ಮನವಿ ಮಾಡಿದ್ದು, ಅವರು ಪೂರಕವಾಗಿ ಸ್ಪಂದಿಸಿದ್ದಾರೆ ಎಂದರು.

ಕನ್ನಡ ಭಾಷೆ ಜೊತೆಗೆ ನಾಡಿನ ಸಾಹಿತ್ಯ, ಸಂಸ್ಕೃತಿ ಶ್ರೀಮಂತಿಕೆ ಹೆಚ್ಚಿಸುವ ಆಶಯದೊಂದಿಗೆ ಸರ್ಕಾರ ಸಾಕಷ್ಟು ಹೊಸ ಆಲೋಚನೆಗಳನ್ನು ಹೊಂದಿದೆ. ಕನ್ನಡ ಭಾಷೆ ಶ್ರೀಮಂತಿಕೆಯನ್ನು ರಾಷ್ಟ್ರದೆಲ್ಲೆಡೆ ಪಸರಿಸುವುದು ಅಗತ್ಯ ಹಾಗೂ ಅನಿವಾರ್ಯವಾಗಿದೆ. ಈ ನಿಟ್ಟಿನಲ್ಲಿ ಶಾಸ್ತ್ರೀಯ ಕನ್ನಡ ಅತ್ಯುನ್ನತ ಅಧ್ಯಯನ ಕೇಂದ್ರದ ಕಾರ್ಯಚಟುವಟಿಕೆಗೆ ಪೂರ್ಣತೆ ನೀಡಿ, ವೇಗ ಹೆಚ್ಚಿಸುವ ಉದ್ದೇಶದೊಂದಿಗೆ ಸರ್ಕಾರ ಎಲ್ಲಾ ರೀತಿಯ ಕ್ರಮ ಕೈಗೊಳ್ಳಲಿದೆ ಎಂದು ಹೇಳಿದರು.

ಛಾವಣಿಗೆ ಹೆಚ್ಚು ನಿಗಾ: ಜಯಲಕ್ಷ್ಮಿ ವಿಲಾಸ ಅರಮನೆ ನವೀಕರಣದ ಜವಾಬ್ದಾರಿ ವಹಿಸಿರುವ ಡೆಕ್ಕನ್ ಹೆರಿಟೇಜ್ ಫೌಂಡೇಷನ್‌ನ ಶರತ್‌ಚಂದ್ರ ಮಾತನಾಡಿ, ಮೈಸೂರು ವಿವಿ ಸೂಚನೆಯಂತೆ ಈಗಾಗಲೇ ಕಟ್ಟಡ ನವೀಕರಣ ಕಾರ್ಯ ಆರಂಭಿಸಲಾಗಿದೆ. ಈಗ ಶಾಸ್ತ್ರೀಯ ಕನ್ನಡ ಅತ್ಯುನ್ನತ ಅಧ್ಯಯನ ಕೇಂದ್ರ ಪ್ರಾರಂಭವಾಗುವುದರಿಂದ ಪೂರ್ಣ ಪ್ರಮಾಣದ ನವೀಕರಣ ಮಾಡುವ ಅಗತ್ಯವಿದೆ ಛಾವಣಿ ತುಂಬಾ ಶಿಥಿಲಗೊಂಡಿರುವ ಕೆಲವೆಡೆ ಮರು ನಿರ್ಮಾಣ ಮಾಡಬೇಕಿದೆ. ಹಳೆಯದಾಗಿರುವ ವಿದ್ಯುತ್ ವೈರಿಂಗ್ ಅನ್ನೂ ಬದಲಿಸುವ ಜೊತೆಗೆ ಹಾಗೆಯೇ ಉಳಿಸಿಕೊಳ್ಳುವ ವಸ್ತು ಸಂಗ್ರಹಾಲಯಕ್ಕೂ ಹೊಸ ರೂಪ ನೀಡಲಾಗುವುದು ಎಂದು ತಿಳಿಸಿದರು.

ಸಿಂಡಿಕೇಟ್‌ನಲ್ಲಿ ನಿರ್ಣಯ

ಮಾನಸಗಂಗೋತ್ರಿ ಜಯಲಕ್ಷ್ಮಿ ವಿಲಾಸ ಅರಮನೆಯ ವಸ್ತು ಸಂಗ್ರಹಾಲಯವನ್ನು ವಿಶ್ವವಿದ್ಯಾನಿಲಯ ನಿರ್ವಹಣೆ ಮಾಡುತ್ತಿದೆ. ಇದೀಗ ಅದೇ ಕಟ್ಟಡದಲ್ಲಿ ಶಾಸ್ತ್ರೀಯ ಕನ್ನಡ ಅತ್ಯುನ್ನತ ಅಧ್ಯಯನ ಕೇಂದ್ರ ಪ್ರಾರಂಭಿಸುವ ಸಂಬಂಧ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯೊಂದಿಗೆ ಒಡಂಬಡಿಕೆ ಮಾಡಿಕೊಳ್ಳಲಾಗುವುದು. ಮ್ಯೂಸಿಯಂ ಅನ್ನು ಯಥಾಸ್ಥಿತಿಯಲ್ಲಿ ಉಳಿಸಿಕೊಂಡು, ಉಳಿದ ಜಾಗವನ್ನು ಅಧ್ಯಯನ ಕೇಂದ್ರದ ಅವಶ್ಯಕತೆಗೆ ಬಳಸಿಕೊಳ್ಳಲಾಗುತ್ತದೆ. ಈ ವಿಷಯವನ್ನು ವಿಶ್ವವಿದ್ಯಾನಿಲಯದ ಸಿಂಡಿಕೇಟ್ ಸಭೆಯ ಮುಂದಿಟ್ಟು ಅಂತಿಮವಾಗಿ ನಿರ್ಣಯ ಕೈಗೊಳ್ಳಲಾಗುವುದು.

-ಪ್ರೊ.ಜಿ.ಹೇಮಂತಕುಮಾರ್,
ಕುಲಪತಿ, ಮೈಸೂರು ವಿವಿ

ಹಣ ನೀಡಿ ಸ್ಥಾನ ಪಡೆಯುವ ಸಂಸ್ಕೃತಿ ಬಿಜೆಪಿಯಲ್ಲಿ ಇಲ್ಲ

ಸಚಿವ ಸುನೀಲ್ ಕುಮಾರ್ ಸ್ಪಷ್ಟನೆ

ಮೈಸೂರು, ಮೇ 7(ಎಸ್‌ಬಿಡಿ)- ನಮ್ಮ ಪಕ್ಷದಲ್ಲಿ ಹಣ ನೀಡಿ ಸ್ಥಾನ ಪಡೆಯುವ ಸಂಸ್ಕೃತಿ ಇಲ್ಲ ಎಂದು ಇಂಧನ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವ ವಿ.ಸುನೀಲ್ ಕುಮಾರ್ ಹೇಳಿದ್ದಾರೆ.

ಮುಖ್ಯಮಂತ್ರಿ ಹುದ್ದೆಗೆ 2,500 ಕೋಟಿ ರೂ. ನೀಡಬೇಕೆಂಬ ಶಾಸಕ ಯತ್ನಾಳ್ ಹೇಳಿಕೆಗೆ ಮೈಸೂರಿನಲ್ಲಿ ಶನಿವಾರ ಮಾಧ್ಯಮವೊಂದಕ್ಕೆ ಪ್ರತಿಕ್ರಿಯಿಸಿದ ಸುನೀಲ್ ಕುಮಾರ್, ಯತ್ನಾಳ್ ಅವರು ಯಾವ ಹಿನ್ನೆಲೆಯಲ್ಲಿ ಈ ರೀತಿ ಹೇಳಿಕೆ ನೀಡಿದ್ದಾರೆ ಎನ್ನುವುದು ಗೊತ್ತಿಲ್ಲ. ನಾನು 2004ರಲ್ಲಿ ಚುನಾವಣಾ ರಾಜಕೀಯಕ್ಕೆ ಬಂದವನು. ಈವರೆಗೆ ನಾನು 5 ಚುನಾವಣೆಗಳನ್ನು ಎದುರಿಸಿದ್ದು, ಕಾರ್ಯಕರ್ತರು ಹಾಗೂ ಪಕ್ಷವೇ ನಿರ್ವಹಣೆ ಮಾಡಿದೆ. ನಮ್ಮ ಪಕ್ಷದಲ್ಲಿ ಹಣ ನೀಡಿ ಸೀಟು ತೆಗೆದುಕೊಳ್ಳುತ್ತೇವೆ ಎನ್ನುವುದು ಸಾಧ್ಯವೇ ಇಲ್ಲ. ನಮ್ಮಲ್ಲಿ ಆ ರೀತಿಯ ಭಾವನೆಯೂ ಇಲ್ಲ. ಬಿಜೆಪಿಯಲ್ಲಿ ಪ್ರಾಮಾಣಿಕತೆ ಹಾಗೂ ವಿಚಾರಕ್ಕೆ ಬೆಲೆ ಇದೆ ಎಂದರು.

ಪಿಎಸ್‌ಐ ನೇಮಕಾತಿ ಪರೀಕ್ಷೆ ಅಕ್ರಮ ಸಂಬಂಧ ಕಾಂಗ್ರೆಸ್ ಶಾಸಕ ಪ್ರಿಯಾಂಕ್ ಖರ್ಗೆ ಆರೋಪಗಳಿಗೆ ಪ್ರತಿಕ್ರಿಯಿಸಿ, ಸಿಐಡಿ ನೋಟಿಸ್ ರಾಜಕೀಯ ಪ್ರೇರಿತ ಎನ್ನುತ್ತಿರುವ ಪ್ರಿಯಾಂಕ್ ಖರ್ಗೆ, ಪೌರುಷದ ಮಾತುಗಳನ್ನಾಡಿದ್ದಾರೆ. ರಾಜಕೀಯವಾಗಿ ಸುದ್ದಿಗೋಷ್ಠಿ ನಡೆಸಿದ ಅವರಿಗೆ ಗೌರವಯುತವಾಗಿ ನೋಟಿಸ್ ನೀಡಿ, ಉತ್ತರ ಕೇಳಲಾಗಿತ್ತು. ಆದರೆ ಪತ್ರಿಕಾಗೋಷ್ಠಿ ನಡೆಸುವಾಗ ಇದ್ದ ಪೌರುಷದಿಂದಲೇ ಅಧಿಕಾರಿಗಳ ಮುಂದೆ ಉತ್ತರ ಕೊಡಬೇಕಿತ್ತು. ಪ್ರಕರಣಕ್ಕೆ ಸಂಬಂಧಿಸಿದಂತೆ ಪೂರಕ ದಾಖಲೆ ಕೇಳಲಾಗಿದೆಯೇ ಹೊರತು ಅವರಿಗೇನು ತೊಂದರೆ ಕೊಟ್ಟಿಲ್ಲ. ಆದರೆ ಅದಕ್ಕೆ ಅವರು ತಯಾರಿಲ್ಲ ಬರೀ ಕಣ್ಣಮುಚ್ಚಾಲೆ ಆಡುತ್ತಿದ್ದಾರೆ. ಈ ಪ್ರಕರಣವನ್ನು ಸರ್ಕಾರ ಒಂದು ತಾರ್ಕಿಕ ಅಂತ್ಯಕ್ಕೆ ಕೊಂಡೊಯ್ಯಲಿದೆ ಎಂದು ಸ್ಪಷ್ಟಪಡಿಸಿದರು.

ಸಚಿವ ಸಂಪುಟ ವಿಸ್ತರಣೆ ಸಂಬಂಧ ಪ್ರತಿಕ್ರಿಯಿಸಿ, ಅದು ಮುಖ್ಯಮಂತ್ರಿಗಳ ಪರಮಾಧಿಕಾರ. ಮುಖ್ಯಮಂತ್ರಿಗಳು ಯಾವುದೇ ನಿರ್ಧಾರ ಕೈಗೊಂಡರು ಅದಕ್ಕೆ ನಾನೂ ಬದ್ಧನಾಗಿರುತ್ತೇನೆ. ಬಿಜೆಪಿಯಲ್ಲಿ ನಿರಂತರತೆ ಇದೆ. ಇಲ್ಲಿ ಹೊಸ ಮುಖಗಳಿಗೆ ಅವಕಾಶ ಇದ್ದೇ ಇರುತ್ತದೆ.ಈ ಬಗ್ಗೆ ಕೇಂದ್ರದ ನಾಯಕರು ಹಾಗೂ ಮುಖ್ಯಮಂತ್ರಿಗಳು ನಿರ್ಧರಿಸುತ್ತಾರೆ. ಹೊಸಬರಿಗೆ ಅವಕಾಶ ನೀಡುವುದನ್ನು ನಾನು ಸ್ವಾಗತಿಸುತ್ತೇನೆ ಎಂದು ತಿಳಿಸಿದರು.

ಹಳ್ಳಿ ಹಕ್ಕಿ ವಿಶ್ವನಾಥ್‌ಗೆ 75ರ ಸಂಭ್ರಮ

ಇಂದಿನಿಂದ 3 ದಿನ ಕೆಆರ್ ನಗರದಲ್ಲಿ ನಾನಾ ಕಾರ್ಯಕ್ರಮ

ಶಾಸಕ ಸಾ.ರಾ.ಮಹೇಶ್ ಸಾರಥ್ಯ



ಮೈಸೂರು,ಮೇ 7(ಪಿಎಂ)- ವಿಧಾನ ಪರಿಷತ್ ಸದಸ್ಯ ಎ.ಹೆಚ್.ವಿಶ್ವನಾಥ್ ಅವರ 75ನೇ ಹುಟ್ಟುಹಬ್ಬದ ಅಂಗವಾಗಿ 'ಅಡಗೂರು ಹೆಚ್.ವಿಶ್ವನಾಥ್ 75ರ ಸಂಭ್ರಮ' ಶೀರ್ಷಿಕೆಯಡಿ ಕೆ.ಆರ್.ನಗರದಲ್ಲಿ ಮೇ 8ರಿಂದ 10ರವರೆಗೆ ವಿವಿಧ ಕಾರ್ಯಕ್ರಮ ಆಯೋಜಿಸಿದ್ದು, ಶಾಸಕ ಸಾ.ರಾ.ಮಹೇಶ್ ಇದರ ಸಾರಥ್ಯ ವಹಿಸಿರುವುದು ವಿಶೇಷ.

ಮೈತ್ರಿ ಸರ್ಕಾರದ ಪತನದ ಬಳಿಕ ವಿಶ್ವನಾಥ್ ಮತ್ತು ಸಾ.ರಾ.ಮಹೇಶ್ ನಡುವೆ ದೊಡ್ಡಮಟ್ಟದ ಜಿದ್ದಾಜಿದ್ದಿನ ಟೀಕೆ, ಆರೋಪ, ಪ್ರತ್ಯಾರೋಪಗಳ ಜೊತೆಗೆ ಚಾಮುಂಡಿ ಬೆಟ್ಟದಲ್ಲಿ ಆಣೆ-ಪ್ರಮಾಣದ ನಾಟಕೀಯ ಪ್ರಸಂಗವೂ ನಡೆದಿತ್ತು. ಇದೀಗ ಈ ಇಬ್ಬರ ನಡುವಿನ ಕಂದಕ ಮರೆಯಾಗಿದ್ದು, ಆ ಮೂಲಕ ರಾಜಕಾರಣದಲ್ಲಿ ಯಾರೂ ಶಾಶ್ವತ ಮಿತ್ರರೂ ಅಲ್ಲ, ಶತ್ರುವೂ ಅಲ್ಲ ಎಂಬುದು ಮತ್ತೊಮ್ಮೆ ಸಾಬೀತಾಗಿದೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಶನಿವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಸಾ.ರಾ.ಮಹೇಶ್, ವಿಶ್ವನಾಥ್ ಅವರ ಹುಟ್ಟುಹಬ್ಬದ ಕಾರ್ಯಕ್ರಮದ ನೇತೃತ್ವ ನಾನೇ ವಹಿಸಿಕೊಂಡು ಸ್ವಾಗತ ಸಮಿತಿಗೆ ಅಧ್ಯಕ್ಷನಾಗಿದ್ದೇನೆ. ರಾಜಕಾರಣವೇ ಬೇರೆ, ವೈಯಕ್ತಿಕ ಜೀವನವೇ ಬೇರೆ. ಕ್ಷೇತ್ರದ ಶಾಸಕನಾಗಿ ಕಾರ್ಯಕ್ರಮದಲ್ಲಿ ಭಾಗಿಯಾಗುವುದು ನನ್ನ ಜವಾಬ್ದಾರಿ. ನಾವು ರಾಜಕೀಯವಾಗಿ ಎಷ್ಟೇ ವಿರೋಧಿಯಾಗಿದ್ದರೂ ಸಾರ್ವಜನಿಕ ಜೀವನದಲ್ಲಿ ಜೊತೆಗಿದ್ದೇವೆ ಎಂದರು.

ಇತ್ತೀಚೆಗೆ ರಾಜಕಾರಣದಲ್ಲಿ ವೈಯಕ್ತಿಕ ಟೀಕೆ ಹೆಚ್ಚಿದೆ. ಈ ಜಿಲ್ಲೆಯಲ್ಲಿ ನಾವಿಬ್ಬರೂ ಮಾಡಿರುವಷ್ಟು ವೈಯಕ್ತಿಕ ಟೀಕೆ ಬೇರೆ ಯಾರೂ ಮಾಡಿಲ್ಲ. ಆದರೆ ಜಿಲ್ಲೆಯ ಹಿರಿಯ ರಾಜಕಾರಣಿಗೆ 75 ವರ್ಷ ತುಂಬುತ್ತಿದ್ದು, ನಮ್ಮ ಕ್ಷೇತ್ರದಲ್ಲಿ ಕಾರ್ಯಕ್ರಮ ಆಯೋಜಿಸಬೇಕು ಎಂದು ಹಿರಿಯರು ನಿರ್ಧರಿಸಿದ್ದರು. ಅದರಂತೆ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ತಿಳಿಸಿದರು.

ಇದು ರಾಜಕೀಯಕ್ಕೆ ಹೊರತಾದ ಕಾರ್ಯಕ್ರಮ. ಚುನಾವಣೆಯ ಸಮಯದಲ್ಲಿ ಬೇಕಾದಷ್ಟು ರಾಜಕೀಯ ಮಾಡಬಹುದು. ಆದರೆ ಇಂತಹ ಕಾರ್ಯಕ್ರಮದಲ್ಲಿ ಪಕ್ಷಭೇದ ಮರೆತು ಎಲ್ಲರೂ ಒಟ್ಟಾಗಿ ಇರಬೇಕು ಎಂದು ಕಾರ್ಯಕರ್ತರಿಗೆ ಮನವಿ ಮಾಡಿದ್ದೇನೆ. ಹೀಗಾಗಿ ಜಿಲ್ಲೆಯ ಜನತೆಯೂ ಪಕ್ಷಾತೀತವಾಗಿ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಬೇಕೆಂದು ಕೋರಿದರು.

ಧರ್ಮ ಸಂಸತ್: ಮೇ 10ರಂದು ಬೆಳಗ್ಗೆ 10.30ಕ್ಕೆ ಕೆ.ಆರ್.ನಗರದ ರೇಡಿಯೋ ಮೈದಾನದಲ್ಲಿ 'ಧರ್ಮ ಸಂಸತ್' ಕಾರ್ಯಕ್ರಮ ಆಯೋಜಿಸಲಾಗಿದೆ. ಸುತ್ತೂರು ಮಠದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಆದಿಚುಂಚನಗಿರಿ ಮಹಾಸಂಸ್ಥಾನ ಮಠದ ಶ್ರೀ ನಿರ್ಮಲಾನಂದನಾಥ ಸ್ವಾಮೀಜಿಯವರ ಸಾನ್ನಿಧ್ಯದಲ್ಲಿ ಕಾಗಿನೆಲೆ ಕನಕಗುರು ಪೀಠದ ಶ್ರೀ ನಿರಂಜನಾನಂದಪುರಿ ಸ್ವಾಮೀಜಿ ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ. ಮೈಸೂರು ಗಾಂಧಿನಗರದ ಶ್ರೀ ಉರಿಲಿಂಗ ಪೆದ್ದಿಮಠದ ಶ್ರೀ ಜ್ಞಾನ ಪ್ರಕಾಶ್ ಸ್ವಾಮೀಜಿ, ಮಾದಾರ ಚನ್ನಯ್ಯ ಗುರುಪೀಠದ ಶ್ರೀ ಬಸವ ಮಾದಾರ ಚನ್ನಯ್ಯ ಸ್ವಾಮೀಜಿ ಸೇರಿದಂತೆ ಇನ್ನಿತರ ಸ್ವಾಮೀಜಿಗಳು, ಮುಸ್ಲಿಂ ಮತ್ತು ಕ್ರಿಶ್ಚಿಯನ್ ಧರ್ಮಗುರುಗಳು ಪಾಲ್ಗೊಳ್ಳಲಿದ್ದಾರೆ ಎಂದು ವಿವರಿಸಿದರು.

ಅಲ್ಲದೆ, ಮಧ್ಯಾಹ್ನ 3.30ರಿಂದ ಸಂಜೆ 4.30ರವರೆಗೆ ವಿಶ್ವನಾಥ್ ಅವರಿಗೆ ಹುಟ್ಟುಹಬ್ಬದ ಅಂಗವಾಗಿ ಸ್ನೇಹಿತರು ಮತ್ತು ಹಿತೈಷಿಗಳಿಂದ ಶುಭಾಶಯ ಕೋರಿಕೆ ಮತ್ತು ಗೌರವ ಸಮರ್ಪಣೆ ಕಾರ್ಯಕ್ರಮ ನಡೆಯಲಿದೆ ಎಂದರು.

ನಾನಾ ಕಾರ್ಯಕ್ರಮ: ಮೇ 8ರಂದು ಸಂಜೆ 6ಕ್ಕೆ ಕೆಆರ್ ನಗರದ ಗರುಡಗಂಭ ವೃತ್ತದಲ್ಲಿ ಗಾಯನ ಕಾರ್ಯಕ್ರಮ ಮತ್ತು ವಾದ್ಯಗೋಷ್ಠಿ ಏರ್ಪಡಿಸಲಾಗಿದೆ. ಮೇ 9ರಂದು ಬೆಳಗ್ಗೆ 9ಕ್ಕೆ ಕೆಆರ್ ನಗರದ ಪ್ರಮುಖ 6 ಸ್ಥಳಗಳಲ್ಲಿ ವಿಶ್ವನಾಥ್ ಅವರ ಹುಟ್ಟುಹಬ್ಬದ ಅಂಗವಾಗಿ ಸ್ಥಾಪಿಸಿರುವ ಶುದ್ಧ ಕುಡಿಯುವ ನೀರು ಘಟಕಗಳ ಉದ್ಘಾಟನಾ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಬೆಳಗ್ಗೆ 11.30ಕ್ಕೆ ಶ್ರೀ ಯೋಗನಾಂದೇಶ್ವರ ಮಠದಲ್ಲಿ ವಿಶೇಷ ಪೂಜೆ, ಸಂಜೆ 6ಕ್ಕೆ ಧರೆಗೆ ದೊಡ್ಡವರು, ರಾಚಪ್ಪಾಜಿ, ಸಿದ್ದಪ್ಪಾಜಿ ದೇವರುಗಳ ಮೆರವಣಿಗೆ, ಜಾನಪದ ಮೆರವಣಿಗೆ ಸೇರಿದಂತೆ ನಾನಾ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ ಎಂದು ಸಾ.ರಾ.ಮಹೇಶ್ ವಿವರಿಸಿದರು. ಮುಖಂಡರಾದ ಎ.ಎಸ್.ಚನ್ನಬಸಪ್ಪ, ಶರತ್ ಅರಸ್, ಕೆ.ಪಿ.ಪ್ರಭುಶಂಕರ್ ಗೋಷ್ಠಿಯಲ್ಲಿದ್ದರು.

ವರದಿ ಬಂದ ಬಳಿಕ ಪ್ರತಿಕ್ರಿಯಿಸುವೆ...

ಆರ್‌ಟಿಐ ಕಾರ್ಯಕರ್ತರೊಬ್ಬರು ತಮ್ಮ ಕುಟುಂಬದ ವಿರುದ್ಧ ಮಾಡಿರುವ ಆರೋಪಗಳ ಬಗ್ಗೆ ಪ್ರತಿಕ್ರಿಯಿಸಿದ ಸಾರಾ. ಮಹೇಶ್, ಮೊದಲು ವರದಿ ಬರಲಿ, ನಂತರ ಮಾತನಾಡುತ್ತೇನೆ. ಗೋಮಾಳ ಆಯ್ತು, ಆಮೇಲೆ ರಾಜಕಾಲುವೆ, ಈಗ ನಿವೇಶನ. ಮುಂದೆ ಇನ್ನು ಏನೇನು ಬರಬಹುದೋ ಗೊತ್ತಿಲ್ಲ. ವರದಿ ಬರುವವರೆಗೂ ನಾನು ಮಾತನಾಡುವುದಿಲ್ಲ ಎಂದು ಹೇಳಿದರು.

ವಸತಿ ಕಟ್ಟಡದಲ್ಲಿ ಬೆಂಕಿ: ಮಧ್ಯ ಪ್ರದೇಶದ ಇಂದೋರ್‌ನಲ್ಲಿ 7 ಮಂದಿ ಸಜೀವ ದಹನ

ಇಂದೋರ್, ಮೇ 7- ಎರಡು ಮಹಡಿಯ ವಸತಿ ಕಟ್ಟಡದಲ್ಲಿ ಬೆಂಕಿ ಕಾಣಿಸಿಕೊಂಡು ಏಳು ಮಂದಿ ಸಜೀವ ದಹನಗೊಂಡಿರುವ ಘಟನೆ ಮಧ್ಯ ಪ್ರದೇಶ ರಾಜಧಾನಿ ಇಂದೋರ್‌ನ ಸ್ವರ್ಣ ಭಾಗ್ ಕಾಲೊನಿಯಲ್ಲಿ ಶನಿವಾರ ನಸುಕಿನ ಜಾವ ನಡೆದಿದೆ.

ಪ್ರಾಥಮಿಕ ಮಾಹಿತಿ ಪ್ರಕಾರ, ಮನೆಯೊಂದರ ಒಳಗೆ ವಿದ್ಯುತ್ ಶಾರ್ಟ್ ಸರ್ಕ್ಯೂಟ್ ನಿಂದ ಬೆಂಕಿ ಕಾಣಿಸಿಕೊಂಡು ಹತ್ತಿ ಉರಿದಿರಬಹುದು ಎಂದು ತಿಳಿದು ಬಂದಿದೆ ಎಂದು ಇಂದೋರ್ ಪೊಲೀಸ್ ಆಯುಕ್ತ ಹರಿ ನಾರಾಯಣ ಚಾರಿ ಮಿಶ್ರ ತಿಳಿಸಿದ್ದಾರೆ. ಏಳು ಮಂದಿ ಸಜೀವ ದಹನಗೊಂಡಿದ್ದು, ಅಗ್ನಿಶಾಮಕ ಸಿಬ್ಬಂದಿ 9 ಮಂದಿಯನ್ನು ಇದುವರೆಗೆ ರಕ್ಷಿಸಿದ್ದಾರೆ. ಹೆಚ್ಚಿನ ತನಿಖೆ ಮುಂದುವರಿದಿದೆ.

ಮೈಸೂರಲ್ಲಿ ಶಂಕರಾಚಾರ್ಯರ ರಥಯಾತ್ರೆ



ಮೈಸೂರು, ಮೇ 7(ಎಂಕೆ)- ನಗರದ ವಿದ್ಯಾರಣ್ಯಪುರಂನಲ್ಲಿರುವ ಶ್ರೀ ಅವನಿ ಶಂಕರ ಮಠದಲ್ಲಿ ವಿಪ್ರ ಜಾಗೃತಿ ವೇದಿಕೆ ವತಿಯಿಂದ ಸಂಗೀತ ವಾದ್ಯಗಳೊಂದಿಗೆ 'ಶಂಕರಾಚಾರ್ಯರ ರಥಯಾತ್ರೆ' ಭಕ್ತಿ-ಭಾವದಿಂದ ನೆರವೇರಿತು.

ಶ್ರೀ ಅವನಿ ಶಂಕರ ಮಠದಿಂದ ಆರಂಭಗೊಂಡ ರಥಯಾತ್ರೆ ವಿದ್ಯಾರಣ್ಯಪುರಂ 3 ಮತ್ತು 4ನೇ ಮುಖ್ಯ ರಸ್ತೆ ಮಾರ್ಗವಾಗಿ ಚಾಮುಂಡಿಪುರಂ ವೃತ್ತದ ಮೂಲಕ ಸಾಗಿ ಅಲ್ಲಿಂದ 2ನೇ ಮುಖ್ಯ ರಸ್ತೆ ಮೂಲಕ ಮಠದವರೆಗೂ ಸಾಗಿತು. ರಥಯಾತ್ರೆಯೊಂದಿಗೆ ನಾದಸ್ವರ, ಮಹಿಳಾ ಭಜನಾ ಮಂಡಳಿ ಹಾಗೂ ಡೊಳ್ಳು ಕುಣಿತ ಇನ್ನಿತರ ಕಲಾತಂಡಗಳು ಸಾಗಿದವು. ಶಾಸಕ ಎಸ್.ಎ.ರಾಮದಾಸ್ ಶಂಕರಾಚಾರ್ಯರ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸುವ ಮೂಲಕ ರಥಯಾತ್ರೆಗೆ ಚಾಲನೆ ನೀಡಿದರು. ಹಿರಿಯ ಸಮಾಜ ಸೇವಕ ರಘುರಾಂ ವಾಜಪೇಯಿ, ವಿಪ್ರ ಮುಖಂಡ ನಂ.ಶ್ರೀಕಂಠಕುಮಾರ್, ವಿಪ್ರ ಜಾಗೃತಿ ವೇದಿಕೆ ಅಧ್ಯಕ್ಷ ಜೆ.ರಮೇಶ್, ಕಾರ್ಯದರ್ಶಿ ಮುಳ್ಳೂರು ಸುರೇಶ್, ಉಪಾಧ್ಯಕ್ಷ ಆರ್.ನಾಗರಾಜು, ಎಂ.ವಿ.ಮಂಜುನಾಥ್, ಯುವ ಮುಖಂಡರಾದ ಅಜಯ್ ಶಾಸ್ತ್ರಿ, ವಿಕ್ರಂ ಅಯ್ಯಂಗಾರ್, ಅಪೂರ್ವ ಸುರೇಶ್, ಗಣೇಶ್, ಸುಚೀಂದ್ರ, ನಾಗಶ್ರೀ, ಸುಧಾ, ಅಂಬಿಕಾ ಮತ್ತಿತರರಿದ್ದರು.

ನಕ್ಕರೆ ಅದೇ ಸ್ವರ್ಗ

ಮಾಸ್ತರರು : (ವಿದ್ಯಾರ್ಥಿಗಳನ್ನು ಕುರಿತು) "ಚಿಕ್ಕಂದಿನಲ್ಲಿ ನಾನು ಮಹಾ ಬುದ್ಧಿವಂತ ವಿದ್ಯಾರ್ಥಿಯಾಗಿದ್ದೆ. ನೀವೂ ಇದ್ದೀರಾ ಮುದ್ದೆ ಹೊಡೆಯೋಕೆ ಲಾಯಕ್ಕು"

ವಿದ್ಯಾರ್ಥಿಯೋರ್ವ : "ನಿಮಗೆ ಆಗ ಬುದ್ಧಿವಂತ ಮಾಸ್ತರರು ಸಿಕ್ಕಿದ್ರು. ಆದರೆ ನಮಗಿಲ್ಲವಲ್ಲ ಸಾರ್!"

ಮೈಸೂರು ಮಿತ್ರ

ಭಾನುವಾರ, 8 ಮೇ 2022

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!

(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ. ಗೋವಿಂದೇಗೌಡ *M.A.*

ಅಮೃತವಾಹಿನಿ

ಅನುಭವವೇ ಬುದ್ಧಿವಂತಿಕೆ, ಮುಖ್ಯ ಸ್ನೇಹಿತ –ಚಾಣಕ್ಯ

ವೇದ ಸುಳ್ಳಾದರೂ ಗಾದೆ ಸುಳ್ಳಾಗದು

ಆದದ್ದೇ ಒಂದು ಅಂದುಕೊಂಡಿದ್ದೇ ಒಂದು

ನಿಮ್ಮ ಪತ್ರಗಳು

ಬೀದಿನಾಯಿಗಳ ಬಗ್ಗೆ ಕಾಳಜಿ ವಹಿಸಿ

ಮಾನ್ಯರೆ,

'ಗೋಕುಲಂನಲ್ಲಿ ಬೀದಿನಾಯಿಗಳ ಹಾವಳಿ' ಶೀರ್ಷಿಕೆಯಡಿ ಪ್ರಕಟಗೊಂಡ ವರದಿಗೆ ಸಂಬಂಧಿಸಿದಂತೆ ಈ ಪತ್ರ ಬರೆಯುತ್ತಿದ್ದೇನೆ. ನಾನು ಗೋಕುಲಂನಲ್ಲಿ ಕಳೆದ 6 ವರ್ಷಗಳಿಂದ ವಾಸವಾಗಿದ್ದೇನೆ. ಆದರೆ ಬೀದಿನಾಯಿಗಳಿಂದ ಯಾವುದೇ ಸಮಸ್ಯೆ ನನ್ನ ಗಮನಕ್ಕೆ ಬಂದಿಲ್ಲ.

ಮೈಸೂರು ಮಹಾನಗರ ಪಾಲಿಕೆ ನಗರದ ವಿವಿಧ ಬಡಾವಣೆಗಳಲ್ಲಿ ಬೀದಿ ನಾಯಿಗಳಿಗೆ ಸಂತಾನಶಕ್ತಿಹರಣ ಮಾಡಲಾಗಿದೆ. ಬಡಾವಣೆಗಳ ನಿವಾಸಿಗಳೂ ಕೂಡ ಬೀದಿ ನಾಯಿಗಳ ಬಗ್ಗೆ ಕಾಳಜಿ ವಹಿಸುತ್ತಿದ್ದಾರೆ. ಕೆಲವು ವೇಳೆ ಈ ಬೀದಿನಾಯಿಗಳು ಅನಿರೀಕ್ಷಿತ ಅಪಾಯಗಳ ಬಗ್ಗೆ ಎಚ್ಚರಿಸುತ್ತವೆ. ವಾಸ್ತವವಾಗಿ ವಿಷಕಾರಿ ಹಾವೊಂದು ನಮ್ಮ ಕಾಂಪೌಂಡ್ ಒಳಗೆ ಹೋಗುತ್ತಿತ್ತು. ಅದನ್ನು ನೋಡಿ ಬೀದಿನಾಯಿ ನಮ್ಮನ್ನು ಎಚ್ಚರಿಸಿತು. ಇದು ಬೀದಿನಾಯಿಗಳಿಂದ ಆಗುವ ಒಳ್ಳೆಯ ಕೆಲಸಗಳು ಕೂಡ.

ನಿವಾಸಿಗಳು ನಾಯಿಗಳನ್ನು ಮುದ್ದು ಮಾಡುವುದರಿಂದ ಅವುಗಳು ಉಗ್ರವಾಗಿರುವುದಿಲ್ಲ ಎಂಬುದನ್ನು ತಿಳಿಸಲು ಇಚ್ಛಿಸುತ್ತೇನೆ. ನಿವಾಸಿಗಳು ಬೇಜವಾಬ್ದಾರಿಯಿಂದ ತ್ಯಾಜ್ಯ ಮತ್ತು ಹಳಸಿದ ಆಹಾರವನ್ನು ಎಲ್ಲೆಂದರಲ್ಲಿ ಬಿಸಾಡುವುದರಿಂದ ಇದು ಬೇರೆ ಪ್ರದೇಶದ ನಾಯಿಗಳನ್ನು ಆಕರ್ಷಿಸುತ್ತದೆ. ಇದರಿಂದ ಸಮಸ್ಯೆಗಳು ಉಂಟಾಗುತ್ತದೆ.

ಮುಗ್ಧ ಪ್ರಾಣಿಗಳತ್ತ ಬೆರಳು ತೋರಿಸುವ ಬದಲು, ನಿವಾಸಿಗಳು ಹೆಚ್ಚು ಸಂವೇದನಾಶೀಲ ಮತ್ತು ಜವಾಬ್ದಾರರಾಗಿದ್ದರೆ, ತಮ್ಮ ನೆರೆಹೊರೆ ಕಡೆಯ ಸಮಸ್ಯೆಗಳನ್ನು ನಿಭಾಯಿಸಬಹುದು. ಮೈಸೂರು ಮಹಾನಗರ ಪಾಲಿಕೆ ಪ್ರತಿನಿತ್ಯ ಕಸ ಸಂಗ್ರಹಿಸಿ ಒಳ್ಳೆಯ ಕೆಲಸ ಮಾಡುತ್ತಿದೆ. ಆದರೆ ಕಸ ವಿಲೇವಾರಿ ಮಾಡಿದ ನಂತರವೂ ನಿವಾಸಿಗಳು ತ್ಯಾಜ್ಯ, ಅವಧಿ ಮೀರಿದ ಮೆಡಿಸಿನ್, ಗಾಜಿನ ತುಂಡುಗಳನ್ನು ತಂದು ಸುರಿದಿರುವುದನ್ನು ನಾನು ನೋಡಿದ್ದೇನೆ. ಇದರಿಂದ ಹಸು ಮತ್ತು ಬೀದಿನಾಯಿಗಳ ಪ್ರಾಣಕ್ಕೆ ಕಂಟಕವಾಗುತ್ತದೆ. ಬಡಾವಣೆಯ ನಿವಾಸಿಗಳು ಕನಿಷ್ಠ ಪಕ್ಷ ಒಂದು ಬೀದಿ ನಾಯಿಯ ಆರೈಕೆ, ಪೋಷಣೆ ಮಾಡುವ ಮೂಲಕ ಪ್ರಾಣಿಗಳ ಬಗ್ಗೆ ದಯೆ ತೋರಬೇಕೆಂದು ಮನವಿ ಮಾಡುತ್ತೇನೆ. ಯಾವುದೇ ಅನಿರೀಕ್ಷಿತ ಅಪಾಯದ ಬಗ್ಗೆ ಇಡೀ ಬಡಾವಣೆಯನ್ನು ಅದು ನೋಡಿಕೊಳ್ಳುತ್ತದೆ.

– ಸುವರ್ಣ ಜೋಶಿ, ಗೋಕುಲಂ, ಮೈಸೂರು.

ಪ್ರಧಾನ ಮಂತ್ರಿಗಳ ಸಂಗ್ರಹಾಲಯ ಸ್ಥಾಪನೆ ಸ್ವಾಗತಾರ್ಹ

ಮಾನ್ಯರೆ,

ದೆಹಲಿಯಲ್ಲಿ ಇತ್ತೀಚೆಗೆ ಲೋಕಾರ್ಪಣೆಗೊಂಡ ಪ್ರಧಾನಮಂತ್ರಿಗಳ ಸಂಗ್ರಹಾಲಯ, ದೇಶದಲ್ಲಿ ಇದುವರೆಗೆ ಸೇವೆ ಸಲ್ಲಿಸಿರುವ ಹಿಂದಿನ ಪ್ರಧಾನ ಮಂತ್ರಿಗಳ ಕೊಡುಗೆಗಳನ್ನು ಅಥವಾ ಸಾಧನೆಗಳನ್ನು ಸ್ಮರಿಸಲು ಒಂದು ಉತ್ತಮ ತಾಣವಾಗಿದೆ.

ದೇಶದ ಪ್ರಧಾನ ಮಂತ್ರಿಗಳಾಗಿ, ಪಂಡಿತ್ ಜವಹರಲಾಲ್ ನೆಹರು, ಲಾಲ್ ಬಹದ್ದೂರ್ ಶಾಸ್ತ್ರಿ, ಶ್ರೀಮತಿ ಇಂದಿರಾ ಗಾಂಧಿ, ರಾಜೀವ್ ಗಾಂಧಿ, ಮೊರಾರ್ಜಿ ದೇಸಾಯಿ, ಚರಣ್ ಸಿಂಗ್, ವಿ.ಪಿ.ಸಿಂಗ್, ಚಂದ್ರ ಶೇಖರ್, ಪಿ.ವಿ.ನರಸಿಂಹರಾವ್, ಅಟಲ್ ಬಿಹಾರಿ ವಾಜಪೇಯಿ, ಹೆಚ್.ಡಿ. ದೇವೇಗೌಡ, ಇಂದ್ರಕುಮಾರ್ ಗುಜ್ರಾಲ್, ಮನಮೋಹನ್ ಸಿಂಗ್ ಕಾರ್ಯ ನಿರ್ವಹಿಸಿದ್ದು, ಗೌರವಾನ್ವಿತ ನರೇಂದ್ರ ಮೋದಿಯವರು 2014 ಮೇ ತಿಂಗಳ 26 ರಿಂದ ದೇಶದ ಹೆಮ್ಮೆಯ ಪ್ರಧಾನಮಂತ್ರಿಯಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಈಗ ಅವರು ಎರಡನೆಯ ಅವಧಿಯ ಪ್ರಧಾನಮಂತ್ರಿಯಾಗಿದ್ದಾರೆ.

ಗುಲ್ಜಾರಿಲಾಲ್ ನಂದಾರವರು ಎರಡು ಬಾರಿ ಹಂಗಾಮಿ ಪ್ರಧಾನಿಯಾಗಿ ನಿರ್ವಹಿಸಿದ್ದಾರೆ. ದೇಶ ವಿದೇಶಗಳಿಂದ ಆಗಮಿಸುವ ಪ್ರವಾಸಿಗರಿಗೆ ಹಾಗೂ ಆಸಕ್ತರಿಗೆ ಈ ಪ್ರಧಾನಮಂತ್ರಿಗಳು ದೇಶಕ್ಕೆ ಸಲ್ಲಿಸಿರುವ ಸೇವೆಯನ್ನು ಹಾಗೂ ಕೊಡುಗೆಯನ್ನು ಸ್ಮರಿಸಲು ಅವಕಾಶ ಕಲ್ಪಿಸುತ್ತದೆ. ಇನ್ನು ಮುಂದೆ ಬರುವ ಪ್ರಧಾನ ಮಂತ್ರಿಗಳು ಸಹ, ಈ ಸಂಗ್ರಹಾಲಯದಲ್ಲಿ ಸ್ಥಾನ ಪಡೆಯಲಿದ್ದಾರೆ. 271 ಕೋಟಿ ರೂಪಾಯಿಗಳ ವೆಚ್ಚದಲ್ಲಿ ನಿರ್ಮಾಣವಾಗಿರುವ ಈ ಸಂಗ್ರಹಾಲಯ, ಪ್ರಧಾನಮಂತ್ರಿಗಳ ಸಾಧನೆಗಳನ್ನು ಪ್ರದರ್ಶಿಸುವ ಒಂದು ವೇದಿಕೆಯಾಗಿದೆ. ಈ ಹಿಂದೆ ಈ ಕಟ್ಟಡ ದೇಶದ ಪ್ರಥಮ ಪ್ರಧಾನಿ ನೆಹರುರವರ ಸರ್ಕಾರಿ ನಿವಾಸವಾಗಿತ್ತು. ಆ ಕಟ್ಟಡವನ್ನು ನೆಹರುರವರ ಸಾಧನೆಯನ್ನು ಸ್ಮರಿಸುವ ಸ್ಮಾರಕವಾಗಿ ರೂಪಿಸಲಾಗಿತ್ತು.

ಆದರೆ ಈಗ ಪ್ರಸ್ತುತ ಸರ್ಕಾರ, ಇದೇ ಕಟ್ಟಡವನ್ನು, ಪ್ರಧಾನ ಮಂತ್ರಿಗಳ ಸಂಗ್ರಹಾಲಯವಾಗಿ ರೂಪಿಸಿದೆ. ಈ ಸಂಗ್ರಹಾಲಯದಲ್ಲಿ ದೇಶಕ್ಕೆ ಸೇವೆ ಸಲ್ಲಿಸಿದ ಪ್ರತಿಯೊಬ್ಬ ಪ್ರಧಾನಮಂತ್ರಿಗಳ ಸಮಗ್ರ ವಿವರಗಳನ್ನು ನೀಡಲಾಗಿರುವುದರಿಂದ, ಅವರ ಸಾಧನೆಗಳು ದೇಶದ ಇತಿಹಾಸದ ಸ್ಮರಣೀಯ ಪುಟಗಳಲ್ಲಿ ಶಾಶ್ವತ ಸ್ಥಾನ ಪಡೆದಂತಾಗುತ್ತದೆ. ಇದೇ ಮಾದರಿಯಲ್ಲಿ ರಾಷ್ಟ್ರಪತಿಗಳ ಸಂಗ್ರಹಾಲಯವನ್ನು ಸಹಾ ನಿರ್ಮಾಣ ಮಾಡುವ ಅಗತ್ಯವಿದೆ. ಇದನ್ನು ಕೇಂದ್ರ ಸರ್ಕಾರ ಪರಿಗಣಿಸಬೇಕಾಗಿದೆ.

–ಡಾ.ಕೆ.ವಿ.ವಾಸು, ವಕೀಲರು ಮತ್ತು ನೋಟರಿ, ಮೈಸೂರು

ಪಿಎಸ್‌ಐ ಕನಸಿಗೆ ಭ್ರಷ್ಟರ ಕಂಟಕ

ಮಾನ್ಯರೆ,

ಕಳೆದ ಕೆಲವು ದಿನಗಳಿಂದ ಪ್ರಮುಖ ಸುದ್ದಿಯಾಗಿರುವ ಪಿಎಸ್‌ಐ ನೇಮಕಾತಿ ಅಕ್ರಮವು ಪರೋಕ್ಷವಾಗಿ ರಾಜ್ಯದ ಉನ್ನತ ಪೊಲೀಸ್ ಅಧಿಕಾರಿಗಳ ನಿರ್ಲಕ್ಷ್ಯ ಹಾಗೂ ದುರಾಸೆಯನ್ನು ಬಿಂಬಿಸುತ್ತಿದೆ. ಜನತೆಗೆ ರಕ್ಷಣೆ ನೀಡುವ ಸಲುವಾಗಿ ದಕ್ಷ ಅಧಿಕಾರಿಗಳನ್ನು ಆಯ್ಕೆ ಮಾಡುವ ಪ್ರಾರಂಭದಲ್ಲೇ ಭ್ರಷ್ಟಾಚಾರದ ರುಚಿ ತೋರಿಸಿದರೆ ಅದ್ಯಾವ ದಕ್ಷ ಹಾಗೂ ನಿಷ್ಠಾವಂತ ಪೊಲೀಸ್ ಅಧಿಕಾರಿಗಳನ್ನು ಮುಂದೆ ಆಯ್ಕೆ ಮಾಡಬಲ್ಲರು? ಹಣ ನೀಡಿ ಕೆಲಸ ಪಡೆದವರು ಮುಂಬರುವ ದಿನಗಳಲ್ಲಿ ನಿಜಕ್ಕೂ ನಾಗರಿಕ ಸೇವೆಯಲ್ಲಿ ನಿರತರಾಗಬಲ್ಲರೇ? ಎಂಬ ಪ್ರಶ್ನೆಗಳ ಮಧ್ಯೆ ಹಗಲು ರಾತ್ರಿ ಓದಿ ಪಿಎಸ್‌ಐ ಆಗಲಿದ್ದೇನೆ ಎಂಬುವವರ ನನಸು ಕೇವಲ ಬರೀ ಕನಸಾಗಿ ಉಳಿಯಿತಲ್ಲ, ಅವರ ಕಥೆ ಏನು? ಎಂಬುದು ಕೇವಲ ಪ್ರಶ್ನೆಯಾಗಿ ಉಳಿದು ಬಿಟ್ಟಿವೆ.

ಈ ಅಕ್ರಮದಲ್ಲಿ ದೊಡ್ಡ ಮಟ್ಟದ ರಾಜಕಾರಣಿಗಳ ಕೈವಾಡ ಇರುವ ಸಂದೇಹವು ಕೇಳಿ ಬರುತ್ತಿರುವ ಹಿನ್ನೆಲೆಯಲ್ಲಿ ಆಡಳಿತ ಪಕ್ಷದ ಸಚಿವರನ್ನು ದೂರುತ್ತಿರುವ ವಿರೋಧ ಪಕ್ಷದ ನಾಯಕರು, ಮತ್ತಿತರರು ಒಂದೆಡೆಯಾದರೆ ಆಡಳಿತ ಪಕ್ಷದವರನ್ನು ಈ ನಡುವೆ ಬೆನ್ನು ತಟ್ಟುತ್ತ ಸಮರ್ಥಿಸುತ್ತಿರುವವರು ಇನ್ನೊಂದೆಡೆ ಇದ್ದಾರೆ. ಒಟ್ಟಾರೆ ರಾಜ್ಯದಲ್ಲಿ ಇದುವರೆಗೆ ನಡೆದಿರುವ ಭ್ರಷ್ಟಾಚಾರಗಳನ್ನು ಗಣನೆಗೆ ತೆಗೆದುಕೊಂಡರೆ ಇದು ಹೊಸದೇನಲ್ಲ. ಈ ತರಹದ ಅದೆಷ್ಟೋ ದೊಡ್ಡ ಮಟ್ಟದ ಪ್ರಕರಣಗಳು ಬೆಳಕಿಗೆ ಬಂದಿಲ್ಲ ಅಷ್ಟೇ. ವಿದ್ಯಾವಂತರಿಗಿರುವ ನಿರುದ್ಯೋಗ ಸಮಸ್ಯೆ ಅಧಿಕಾರಿಗಳಿಗಿರುವ ಹಣದ ವ್ಯಾಮೋಹ ಇಂತಹವುಗಳಿಗೆ ಪ್ರಚೋದಿಸುತ್ತಿವೆ. ಮುಂದಿನ ದಿನಗಳಲ್ಲಿ ಈ ತರಹದ ಪ್ರಕರಣಗಳ ಕುರಿತು ಕಟ್ಟುನಿಟ್ಟಿನ ಕ್ರಮಕೈಗೊಳ್ಳದಿದ್ದಲ್ಲಿ ಪ್ರಾಮಾಣಿಕರಿಗೆ ಉಳಿವಿಲ್ಲ. ಇಂತಹ ಪ್ರಕರಣಗಳ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳು ಕಠಿಣ ಕ್ರಮಕೈಗೊಳ್ಳುವುದು ಸೂಕ್ತ.

– ಉಮೇಶ್ ಎನ್ ಹಳ್ಳಿ, ಕುವೆಂಪು ವಿವಿ, ಶಿವಮೊಗ್ಗ



ಡಾ. ವಿ. ರಂಗನಾಥ್
ಲೇಖಕರು ಹಾಗೂ ನಿವೃತ್ತ ತಹಸೀಲ್ದಾರರು
ಮೊ : 94482 08746 / 97421 79000

ಚಿಂತನೆ

ನೀವೂ ದೀರ್ಘಾಯುಷ್ಯ ಬಯಸುವಿರಾ...!?

> "ನಮಗೆ ದೀರ್ಘಾಯುಷ್ಯ ಲಭ್ಯವಾದರೆ ಅದು ನೆಮ್ಮದಿಯಾಗೇ ಇರುತ್ತದೆ ಎಂದು ಹೇಳಬರುವುದಿಲ್ಲ. ನಾವು ಅನೇಕರು ತಮ್ಮ ಸಾವಿಗೆ ಕಾದು ಕೆಲವು ವರ್ಷ ಹಾಸಿಗೆಯಲ್ಲಿ ನರಳುವುದನ್ನು ಕಂಡಿದ್ದೇವೆ. ನನ್ನ ಸಂಬಂಧಿಯೊಬ್ಬರು ಹೀಗೆ ಹಾಸಿಗೆ ಹಿಡಿದು ನರಳಿದ್ದು ಸುಮಾರು ಮೂರು ವರ್ಷ. ಅವರ ನೆನಪು ಕ್ರಮೇಣ ಕಡಿಮೆಯಾಗುತ್ತಾ ಹೋಯಿತು. ಅವರ ಮಾತುಗಳಲ್ಲಿ ಅರ್ಥವಿರುತ್ತಿರಲಿಲ್ಲ. ಹೀಗಾಗಿ ಅವರು ಮನೆಯಲ್ಲಿ ಹಾಸ್ಯದ ಸರಕಾಗಿ ಹೋಗಿದ್ದರು. ಅವರು ಏನಾದರೂ ಮಾತನಾಡಿದರೆ ಅದಕ್ಕೆ ಬೇರೆ ಅರ್ಥ ಕಲ್ಪಿಸಿ ಮನೆಯವರು ನಗುತ್ತಿದ್ದರು. ಕೊನೆಗೆ ಅವರಿಗೆ ಸಾವು ಬಂದರೆ ಸಾಕು ಎಂದು ಕೇಳಿಕೊಳ್ಳುವಂತಾಗಿತ್ತು. ಇಂತಹ ಸಮಯದಲ್ಲಿ ದೀರ್ಘಾಯುಷ್ಯ ಅನಪೇಕ್ಷಿತವಾಗಿ ಬಿಡುತ್ತದೆ.

ನಾವು ಹೆಚ್ಚು ವರ್ಷ ಬದುಕಬೇಕು, ದೀರ್ಘಾಯುಷಿಗಳಾಗಿ, ಅದೂ ನೆಮ್ಮದಿಯಾಗಿ, ಸುಖ ಸಂತೋಷದಿಂದ ಎಂದು ಎಲ್ಲರೂ ಬಯಸುತ್ತಾರೆ. ಹಿಂದೆ ಒಂದು ಕಥೆ ಕೇಳಿದ್ದೆವು. ಒಬ್ಬ ರಾಜನಿದ್ದ, ಅವನಿಗೆ ಜ್ಯೋತಿಷ್ಯದಲ್ಲಿ ನಂಬಿಕೆ. ಅವನು ತನ್ನ ಆಯಸ್ಸಿನ ಬಗ್ಗೆ ಜ್ಯೋತಿಷಿಗಳನ್ನು ಆಗಾಗ್ಗೆ ಕೇಳುತ್ತಿದ್ದ. ಅವನಿಗೆ ಆಯಸ್ಸು ಸ್ವಲ್ಪ ಜಾಸ್ತಿಯೇ ಇತ್ತು. ಒಮ್ಮೆ ಒಬ್ಬ ಜ್ಯೋತಿಷಿ ರಾಜನ ಜಾತಕ ನೋಡಿ ನಿಮ್ಮ ಕಣ್ಣ ಮುಂದೆಯೇ ನಿಮ್ಮ ಮಕ್ಕಳು, ಮೊಮ್ಮಕ್ಕಳು ಸಾಯುತ್ತಾರೆ ಎಂದು ಹೇಳಿದ. ಇದನ್ನು ಕೇಳಿದ ರಾಜನಿಗೆ ಸಿಟ್ಟು ಬಂದು ಅವನನ್ನು ಸೆರೆಮನೆಗೆ ತಳ್ಳಿದ. ಇದನ್ನು ಅರಿತ ಮತ್ತೊಬ್ಬ ಜ್ಯೋತಿಷಿ ರಾಜನನ್ನು ಭೇಟಿಯಾಗಿ ಅದೇ ವಿಷಯವನ್ನು ಮತ್ತೊಂದು ರೂಪದಲ್ಲಿ ಹೇಳಿದ. 'ಮಹಾರಾಜರೇ ನಿಮ್ಮದು ದೀರ್ಘಾಯುಷ್ಯ. ನೀವು ನಿಮ್ಮ ಮಕ್ಕಳು, ಮೊಮ್ಮಕ್ಕಳೂ ರಾಜ್ಯಭಾರ ಮಾಡುವುದನ್ನು ನೋಡುತ್ತೀರಿ ಎಂದು. ಅದನ್ನು ಕೇಳಿದ ರಾಜನಿಗೆ ಸಂತೋಷವಾಗಿ, ಅವನನ್ನು ಬಹುವಾಗಿ ಸನ್ಮಾನಿಸಿದ ಎಂಬುದು ಕಥೆ. ಇಬ್ಬರು ಹೇಳಿದ್ದು ಒಂದೇ ವಿಷಯ, ಆದರೆ ಹೇಳಿದ ರೀತಿ ಮಾತ್ರ ಬೇರೆಯಾಗಿತ್ತು. ಇದನ್ನೇ ನಬ್ರೂಯಾತ್ ಅಪ್ರಿಯ ಸತ್ಯಂ ಎಂದು ಹೇಳುವುದು. ಸತ್ಯ ಅಪ್ರಿಯವಾಗಿದ್ದಾಗ ಹೇಳಬಾರದು ಎಂಬುದು ಅದರ ಅರ್ಥ.

ಇತ್ತೀಚೆಗೆ ಮೈಸೂರಿನಲ್ಲಿ ಶ್ರೀ ದಿವಾಕರ ಹೆಗಡೆಯವರ ಏಕವ್ಯಕ್ತಿ ತಾಳಮದ್ದಲೆ ನೋಡುವ ಸದವಕಾಶ ಲಭಿಸಿತ್ತು. ಅದರ ವಿಷಯ ಶೂರ್ಪಣಖಾ. ಶೂರ್ಪಣಖಿಯ ಕಥೆ ನಮಗೆಲ್ಲಾ ತಿಳಿದಿದ್ದೇ. ಶೂರ್ಪಣಖಿ ಮೊದಲು ರಾಮನನ್ನು ನಂತರ ಅವನ ತಮ್ಮ ಲಕ್ಷ್ಮಣನನ್ನು ಭೇಟಿಯಾಗಿ ಮದುವೆಯಾಗಲು ಕೋರಿದಳು. ಕೊನೆಗೆ ಲಕ್ಷ್ಮಣ ಅವಳ ಮೂಗು ಕತ್ತರಿಸಿದ. ಶೂರ್ಪಣಖಿ ರಾವಣನ ತಂಗಿ, ಇದನ್ನು ತಿಳಿದ ರಾವಣನಿಗೆ ಸಿಟ್ಟು ಬಂದು ಸೀತೆಯನ್ನು ಅಪಹರಿಸಿದ, ನಂತರ ರಾಮ–ರಾವಣರ ಯುದ್ಧ. ರಾವಣನ ಅಂತ್ಯ ಎಂಬುದನ್ನು ಕೇಳಿದ್ದೇವೆ. ಏಕವ್ಯಕ್ತಿ ತಾಳ ಮದ್ದಲೆಯಲ್ಲಿ ಇದೇ ಕಥೆಯನ್ನು ವಿಭಿನ್ನವಾಗಿ ಹೇಳುವ ಪ್ರಯತ್ನ, ಅದರಲ್ಲಿ ಶೂರ್ಪಣಖಿಯ ಸ್ವಗತದ ಮಾತುಗಳಿದ್ದವು. ಆಕೆ ರಾವಣನಿಗೂ ತನಗೂ ಇರುವ ವ್ಯತ್ಯಾಸ, ರಾವಣ ಗಂಡು ಆಗಿದ್ದರಿಂದ ಅವನಿಗೆ ದೊರೆತ ಸೌಲಭ್ಯಗಳು, ತಾನು ಹೆಣ್ಣು ಆಗಿದ್ದರಿಂದ ತನಗಾದ ತೊಂದರೆಗಳನ್ನು ಅದರಲ್ಲಿ ಹೇಳಿಕೊಳ್ಳುತ್ತಾಳೆ. ಅದರಲ್ಲಿ ಬರುವ ಒಂದು ಮಾತು ನನ್ನ ಗಮನ ಸೆಳೆಯಿತು. ರಾವಣನ ತಮ್ಮ ವಿಭೀಷಣನಿಗೆ ಚಿರಂಜೀವಿಯಾಗುವ ವರವಿರುತ್ತದೆ. ಈ ಬಗ್ಗೆ ಶೂರ್ಪಣಖಿ ಮಾತನಾಡುತ್ತಾ, ಅವನಿಗೆ ಇದೇ ಶಾಪವಾಯಿತು. ಅವನ ಕಣ್ಣೆದುರೇ ಅವನ ಮಕ್ಕಳು, ಮೊಮ್ಮಕ್ಕಳು ಮರಣ ಹೊಂದಿದರು. 'ಅದ್ಯಾವ ಭಾಗ್ಯಕ್ಕೆ ಚಿರಂಜೀವಿಯ ವರಬೇಕಿತ್ತು?' ಎಂದು ಪ್ರಶ್ನಿಸುತ್ತಾಳೆ. ನಿಜಕ್ಕೂ ಇದು ಯೋಚಿಸಬೇಕಾದ ಸಂಗತಿ ಎನಿಸುತ್ತದೆ.

ಚಿರಂಜೀವಿ ಎಂದರೆ ಸಾವಿಲ್ಲದವರು ಎಂದು ಅರ್ಥ. ನಮ್ಮ ಹಿಂದೂ ಪುರಾಣಗಳ ಪ್ರಕಾರ ರಾಮಾಯಣ ಮತ್ತು ಮಹಾಭಾರತಗಳಿಗೆ ಸಂಬಂಧಿಸಿದ ಏಳು ಪೌರಾಣಿಕ ವ್ಯಕ್ತಿಗಳನ್ನು ಚಿರಂಜೀವಿಗಳು ಎಂದು ಹೆಸರಿಸಲಾಗಿದೆ. ಅವರೆಂದರೆ ಅಶ್ವತ್ಥಾಮ, ಬಲೀಂದ್ರ, ವೇದವ್ಯಾಸ, ಹನುಮಂತ, ವಿಭೀಷಣ, ಕೃಪಾಚಾರ್ಯ ಹಾಗೂ ಪರಶುರಾಮ.

ಈ ಪೈಕಿ ವಿಭೀಷಣ ಲಂಕೆಯ ರಾವಣನ ಕಿರಿಯ ಸಹೋದರ. ರಾಕ್ಷಸ ಕುಲಕ್ಕೆ ಸೇರಿದ್ದರೂ ಅವನು ಉದಾತ್ತ ಗುಣದವನಾಗಿದ್ದನು. ರಾವಣ ಸೀತೆಯನ್ನು ಅಪಹರಿಸಿದಾಗ ಅದನ್ನು ಖಂಡಿಸಿ ಸೀತೆಯನ್ನು ರಾಮನಿಗೆ ಹಿಂತಿರುಗಿಸುವಂತೆ ಸಲಹೆ ನೀಡಿದ್ದನು. ವಿಭೀಷಣ ದೈವಭಕ್ತ. ಕೊನೆಗೆ ಅವನು ರಾವಣನನ್ನು ಬಿಟ್ಟು ರಾಮನನ್ನು ಸೇರಿದನು. ರಾವಣನ ಸಂಹಾರದ ನಂತರ ಲಂಕೆಯ ರಾಜನಾದನು. ಕಥೆಯಂತೆ ವಿಭೀಷಣ ಬ್ರಹ್ಮನನ್ನು ಕುರಿತು ತಪಸ್ಸು ಮಾಡಿದ, ಬ್ರಹ್ಮ ಪ್ರತ್ಯಕ್ಷನಾಗಿ ವರ ನೀಡಲು ಒಪ್ಪಿದ. ಆಗ ವಿಭೀಷಣ ತನಗೆ ಭಗವಂತನ ಚರಣಕಮಲದಲ್ಲಿ ಮನಸ್ಸು ಸ್ಥಿರವಾಗಿರುವಂತಹ ವರ ಕೇಳಿದ, ಅವನ ಪ್ರಾರ್ಥನೆ ನೆರವೇರಿತು. ಅವನಿಗೆ ಚಿರಂಜೀವಿ ಪಟ್ಟ ಲಭಿಸಿತು. ಈ ರೀತಿ ಏಳು ಜನರು ಚಿರಂಜೀವಿಗಳು.

ಮಹಾಭಾರತದಲ್ಲಿ ಬರುವ ಯಕ್ಷ ಪ್ರಶ್ನೆಯಲ್ಲಿ ಧರ್ಮರಾಯ ಒಂದು ಪ್ರಶ್ನೆಗೆ ನೀಡುವ ಉತ್ತರ ಎಂದರೆ 'ಕಣ್ಣ ಮುಂದೆಯೇ ನಿತ್ಯವೂ ಸಾವಿನ ಮೆರವಣಿಗೆ ನಡೆಯುತ್ತಿರುವಾಗ ತನಗೆ ಮಾತ್ರ ಸಾವಿಲ್ಲ ಎಂದು ಅಂದುಕೊಳ್ಳುತ್ತಾನಲ್ಲ ಮನುಷ್ಯ, ನನಗೆ ಬಹಳ ಅಚ್ಚರಿ ಹುಟ್ಟಿಸುವುದು ವಿಚಾರ ಇದು' ಎನ್ನುತ್ತಾನೆ ಎಂದಿದೆ. ಇದು ಇಂದಿನ ಸ್ಥಿತಿಗೆ ಹಿಡಿದ ಕೈಗನ್ನಡಿಯಂತೆ ಕಾಣುತ್ತದೆ. ನಮಗೆ ಕೊನೆಗೆ ಸಾವು ಬರುತ್ತದೆ ಎಂದು ಗೊತ್ತಿದ್ದರೂ, ನಾವು ಸಾಯುವವರಲ್ಲ ಎಂದುಕೊಳ್ಳುತ್ತೇವೆ. ಯಾರೋ ಸತ್ತಾಗ ಆ ದೇಹ ಸಂಸ್ಕಾರವಾಗುವಷ್ಟು ಹೊತ್ತು ನಮ್ಮೊಳಗೊಂದು ವೈರಾಗ್ಯ ಉದಯಿಸುತ್ತದೆ. ಬದುಕು ಕ್ಷಣಿಕ, ಸಾವೇ ಸತ್ಯ ಎನ್ನುವುದು ಅಲ್ಲಿ ಅರ್ಥವಾಗುತ್ತದೆ. ಆದರೆ ಹೆಣದ ಅಂತ್ಯಕ್ರಿಯೆ ಮುಗಿದು ಹೊರಬಂದ ಮೇಲೆ ಈ ವೈರಾಗ್ಯ ಕರಗುತ್ತದೆ. ಮತ್ತೆ ನಮ್ಮ ಬದುಕೆಂಬ ಸುಳಿಗೆ ಒಳಗಾಗುತ್ತೇವೆ. ಮತ್ತೆ ವೈರಾಗ್ಯ ಬರುವುದು ಮತ್ತೊಂದು ಹೆಣದ ಮುಂದೆ ನಿಂತಾಗಲೇ.

ಪತ್ರಿಕೆಗಳಲ್ಲಿ ವರದಿಯಾದಂತೆ ಒಬ್ಬ ನರ್ಸ್ ಬರೆದ ಆತ್ಮಕಥೆ ಪ್ರಪಂಚದ ಗಮನ ಸೆಳೆದಿತ್ತು. ಆಕೆ ಕೊನೆಯ ಕ್ಷಣಗಳನ್ನು ಎಣಿಸುತ್ತಿದ್ದವರ ಸೇವೆ ಮಾಡುತ್ತಿದ್ದ ನರ್ಸ್. ಅದನ್ನು ಆಧಾರವಾಗಿಟ್ಟುಕೊಂಡು ಆಕೆ ಕಥೆ ಬರೆದಿದ್ದಳು. ಆಕೆಯ ಪ್ರಕಾರ, ಹಾಗೆ ಸಾವಿನ ಕ್ಷಣಗಳಿಗೆ ಎದುರು ನೋಡುತ್ತಾ ಮಲಗಿದ್ದವರಿಗೆ ತಮ್ಮ ವ್ಯಾಪಾರ, ಉದ್ಯೋಗ, ಕೂಡಿಟ್ಟ ಹಣದ ಬಗ್ಗೆ ಎಳ್ಳಷ್ಟೂ ಲಕ್ಷ್ಯವಿರಲಿಲ್ಲ. ಆದರೆ ಹಣ ಮಾಡಿಕೊಳ್ಳುವ ಧಾವಂತದಲ್ಲಿ ದೂರ ಮಾಡಿಕೊಂಡ ಸಂಬಂಧ, ಜೀವನಾನಂದ ಪಡೆಯಲು ಸಾಧ್ಯವಾಗದ ಬಗ್ಗೆ ಅವರಲ್ಲಿ ವಿಷಾದವಿತ್ತು. ತಾವು ಕೇವಲ ಸ್ವಾರ್ಥದಲ್ಲೇ ಬದುಕಿದ್ದ ಬಗ್ಗೆ ಅವರಿಗೆ ನಾಚಿಕೆಯಾಗುತ್ತಿತ್ತು ಎಂದು ತಿಳಿಸಿದ್ದಾಳೆ. ಕೆಲವರು ಪುಣ್ಯಾತ್ಮರು ಮಾತ್ರ ಸಾವಿನ ಎಚ್ಚರ ಕಂಡುಕೊಂಡಿರುತ್ತಾರೆ. ಇಲ್ಲಿ ಎಚ್ಚರ ಎಂದರೆ ಅಪಾಯದ ಬಗ್ಗೆ ಎಚ್ಚರ ಎಂದಲ್ಲಾ, ಬದಲಾಗಿ ಬೆಳಗ್ಗೆ ನಿದ್ರೆಯಿಂದ ಏಳುವಾಗ ನಮಗಾಗುವ ಎಚ್ಚರವಿದೆಯಲ್ಲಾ ಅದು. ಸಾವು ನೀಡುವ ಎಚ್ಚರ ನಮ್ಮ ವಿವೇಕದ ಕಣ್ಣುಗಳನ್ನು ತೆರೆಸುತ್ತದೆ. ಸಣ್ಣತನವಿಲ್ಲದ ಬದುಕು ಸುಂದರವಾಗಿರುತ್ತದೆ. ಇದು ನಮ್ಮ ದೃಷ್ಟಿಯನ್ನು ವಿಶಾಲಗೊಳಿಸುತ್ತದೆ ಎಂದು ಅದರಲ್ಲಿ ತಿಳಿಸಲಾಗಿದೆ.

ಇದ್ದ ಒಬ್ಬ ಮಗನನ್ನು ಕಳೆದುಕೊಂಡು ಗೋಳಾಡುತ್ತಿದ್ದ ಕಿಸಾಗೋತಮಿಗೆ ಬುದ್ಧ ಸಾವಿಲ್ಲದ ಮನೆಯ ಸಾಸಿವೆ ತರಲು ಹೇಳಿದ. ಆ ಕ್ಷಣಕ್ಕೆ ಅವಳಿಗೆ ಬುದ್ಧನ ಮಾತೇ ಆಶಾಕಿರಣ. ಅವಳು ಅದಕ್ಕಾಗಿ ದಿನವಿಡೀ ಅಲೆದಳು, ರಾತ್ರಿಯೂ ಮನೆಮನೆ ಬಾಗಿಲು ತಟ್ಟಿದಳು, ಒಂದೇ ಒಂದು ಸಾವಿಲ್ಲದ ಮನೆಯಿಲ್ಲ ಎಂದು ಅವಳಿಗೆ ಅರಿವಾಗಬೇಕಾದರೆ ಅವಳಿಗೆ ಅಷ್ಟು ಸಮಯ ಬೇಕಾಯಿತು. ಹಾಗೆ ತಿಳಿದ ಮೇಲೆ ಆಕೆಗೆ ಬದುಕಿನ ಬಗ್ಗೆ ಯಾವ ಮೋಹವೂ ಉಳಿದಿರಲಿಲ್ಲ. ಇದು ನಮ್ಮ ಅರಿವಿಗೆ ಬರಬೇಕಾದದ್ದು.


ನಮಗೆ ದೀರ್ಘಾಯುಷ್ಯ ಲಭ್ಯವಾದರೆ ಅದು ನೆಮ್ಮದಿಯಾಗೇ ಇರುತ್ತದೆ ಎಂದು ಹೇಳಬರುವುದಿಲ್ಲ. ನಾವು ಅನೇಕರು ತಮ್ಮ ಸಾವಿಗೆ ಕಾದು ಕೆಲವು ವರ್ಷ ಹಾಸಿಗೆಯಲ್ಲಿ ನರಳುವುದನ್ನು ಕಂಡಿದ್ದೇವೆ. ನನ್ನ ಸಂಬಂಧಿಯೊಬ್ಬರು ಹೀಗೆ ಹಾಸಿಗೆ ಹಿಡಿದು ನರಳಿದ್ದು ಸುಮಾರು ಮೂರು ವರ್ಷ. ಅವರ ನೆನಪು ಕ್ರಮೇಣ ಕಡಿಮೆಯಾಗುತ್ತಾ ಹೋಯಿತು. ಅವರ ಮಾತುಗಳಲ್ಲಿ ಅರ್ಥವಿರುತ್ತಿರಲಿಲ್ಲ. ಹೀಗಾಗಿ ಅವರು ಮನೆಯಲ್ಲಿ ಹಾಸ್ಯದ ಸರಕಾಗಿ ಹೋಗಿದ್ದರು. ಅವರು ಏನಾದರೂ ಮಾತನಾಡಿದರೆ ಅದಕ್ಕೆ ಬೇರೆ ಅರ್ಥ ಕಲ್ಪಿಸಿ ಮನೆಯವರು ನಗುತ್ತಿದ್ದರು. ಕೊನೆಗೆ ಅವರಿಗೆ ಸಾವು ಬಂದರೆ ಸಾಕು ಎಂದು ಕೇಳಿಕೊಳ್ಳುವಂತಾಗಿತ್ತು. ಇಂತಹ ಸಮಯದಲ್ಲಿ ದೀರ್ಘಾಯುಷ್ಯ ಅನಪೇಕ್ಷಿತವಾಗಿ ಬಿಡುತ್ತದೆ. ಏಕವ್ಯಕ್ತಿ ತಾಳಮದ್ದಲೆಯಲ್ಲಿ ಹೇಳಿದಂತೆ ದೀರ್ಘಾಯುಷ್ಯ ಉಳ್ಳವರು ತಮ್ಮ ಎದುರಿಗೇ ತನ್ನ ಮಕ್ಕಳು, ಮನೆಯವರು, ಮೊಮ್ಮಕ್ಕಳು ಸಾಯುವುದನ್ನು ಕಾಣಬೇಕಾಗುತ್ತದೆ. ಅಂತಹ ಜೀವನ ವ್ಯಕ್ತಿಯನ್ನು ಜರ್ಝರಿತವಾಗುವಂತೆ ಮಾಡಿಬಿಡುತ್ತದೆ. ಆದ್ದರಿಂದ ಒಂದು ಹಂತದಲ್ಲಿ ದೀರ್ಘಾಯುಷ್ಯವೇ ಬೇಡ. ಇದ್ದುದರಲ್ಲಿ ಬದುಕಿರುವವರೆಗೆ ಆರೋಗ್ಯ ಪೂರ್ಣವಾಗಿ, ಎಲ್ಲರಿಗೂ ಬೇಕಾದವರಾಗಿ ಇದ್ದರೆ ಸಾಕು ಎನಿಸುವಂತಾಗುತ್ತದೆ.

ಇಂದೂ ನಮ್ಮ ಮಧ್ಯೆ ನೂರು ವರ್ಷ ಬದುಕಿರುವ ಕೆಲವರ ಉದಾಹರಣೆ ಸಿಗುತ್ತದೆ. ಇದು ಕೇಳಲು ಆನಂದ. ಅಷ್ಟು ವರ್ಷ ಬದುಕಿದ್ದಾರಲ್ಲಾ ಎಂದು!! ಅಂತಹವರನ್ನು ಸಂದರ್ಶಿಸುವವರು ನಿಮ್ಮ ದೀರ್ಘಾಯುಷ್ಯದ ರಹಸ್ಯವೇನು? ಎಂದು ಕೇಳುತ್ತಾರೆಯೇ ವಿನಃ, ನಿಮ್ಮ ಕಣ್ಣ ಮುಂದೆಯೇ ಎಷ್ಟು ಜನ ಕಡಿಮೆ ವಯೋಮಾನದವರ ಸಾವಾಯಿತು? ಅದನ್ನು ನೀವು ಹೇಗೆ ಸಹಿಸಿಕೊಂಡಿರಿ? ಎಂದು ಕೇಳುವುದಿಲ್ಲ. ಹಾಗೆ ಕೇಳಿದರೆ ಆ ವ್ಯಕ್ತಿ ಎಷ್ಟು ನೊಂದುಕೊಂಡು ಉತ್ತರಿಸಬಹುದು ಎಂಬುದನ್ನು ಊಹಿಸಬಹುದಷ್ಟೇ. ಈ ಮಾತುಗಳಿಂದ ನಮಗೆ ದೀರ್ಘಾಯುಷ್ಯಕ್ಕಿಂತ ನೆಮ್ಮದಿಯ ಆಯುಷ್ಯ ಸಾಕು ಎನಿಸುತ್ತದೆ. ಆದರೆ ಹಾಗೆ ನೆಮ್ಮದಿ ತಾನಾಗೆ ದೊರೆಯುವುದಿಲ್ಲ. ಅದನ್ನು ಗಳಿಸಬೇಕು. ಇಂದು ಎಷ್ಟು ಜನ ಮೊಮ್ಮಕ್ಕಳು ತಮ್ಮ ತಾತ–ಅಜ್ಜಿಯನ್ನು ಇಷ್ಟಪಡುತ್ತಾರೆ? ಎಂಬುದನ್ನೂ ಗಮನಿಸಬೇಕು. ಹಾಗೆ ಇಷ್ಟಪಡುವ ಜನರಿದ್ದರೆ ಜೀವನ ಸಹ್ಯವಾಗುತ್ತದೆ. ಇಲ್ಲದಿದ್ದರೆ ಅಂತಹ ಜೀವನ ದುರ್ಭರ ಎನಿಸುತ್ತದೆ. ಹಾಗೆ ಎಲ್ಲರಿಗೂ ಬೇಕಾದವರಾಗಿರುವುದು ಸುಲಭವಲ್ಲ. ಅದಕ್ಕೆ ನಿರಂತರ ಶ್ರಮವಿರಬೇಕಾಗುತ್ತದೆ. ಹಾಗಾಗಿ ದೀರ್ಘಾಯುಷ್ಯಕ್ಕಿಂತ ನೆಮ್ಮದಿಯ ಆಯುಷ್ಯ ಬಯಸುವುದು ಸೂಕ್ತ ಎನಿಸುತ್ತದೆ.

ಶೃಂಗೇರಿ ಶ್ರೀ ವಿಧುಶೇಖರ ಭಾರತೀ ಮಹಾಸ್ವಾಮಿಗಳ ವಿಜಯ ಯಾತ್ರೆ

ಶ್ರೀ ಶಂಕರ ಭಗವತ್ಪಾದರಿಂದ ಸ್ಥಾಪನೆಗೊಂಡ ಚತುರಾಮ್ನಾಯ ಪೀಠಗಳಲ್ಲಿ ಪ್ರಥಮ ಮತ್ತು ಪ್ರಮುಖವಾದ ದಕ್ಷಿಣಾಮ್ನಾಯ ಶಾರದಾ ಪೀಠವು ಅವರ ನೇರ ಶಿಷ್ಯರಾದ ಶ್ರೀ ಸುರೇಶ್ವರಾಚಾರ್ಯರಿಂದ ಇಂದಿನ 37ನೇ ಜಗದ್ಗುರುಗಳವರೆಗೆ ಅವಿಚ್ಛಿನ್ನವಾದ ಗುರು ಪರಂಪರೆಯಿಂದ ಶೋಭಿಸುತ್ತಿದೆ. ಈ ಪೀಠದಲ್ಲಿ ಮಾರ್ಗದರ್ಶನ ಮಾಡಿದಂತಹ ಪ್ರತಿಯೊಬ್ಬ ಯತಿವರೇಣ್ಯರು ಶ್ರೀ ಶಂಕರ ಭಗವತ್ಪಾದರು ವಿಧಿಸಿದ ಮಾರ್ಗದಲ್ಲೇ ಧರ್ಮಾಚರಣೆಯನ್ನು ಮಾಡುತ್ತಾ ಲೋಕಕ್ಕೆ ಶ್ರೇಯೋಮಾರ್ಗವನ್ನು ಬೋಧಿಸಿ ಸ್ವತಃ ಸದಾ ಧರ್ಮನಿಷ್ಠರಾಗಿ ಸರ್ವರಿಗೂ ಮಾರ್ಗದರ್ಶಕರಾಗಿದ್ದಾರೆ. ಈ ಪೀಠದಲ್ಲಿ ಪೀಠಾಧಿಪತಿಗಳಾಗಿ ರಾರಾಜಿಸಿ ಲೋಕೋಪಕಾರ ಮಾಡಿದ ಪ್ರಥಮರಾದ ಶ್ರೀ ಸುರೇಶ್ವರಾಚಾರ್ಯರು, ಶ್ರೀ ವಿದ್ಯಾತೀರ್ಥ ಮಹಾಸ್ವಾಮಿಗಳು, ಶ್ರೀ ಭಾರತೀತೀರ್ಥ ಮಹಾಸ್ವಾಮಿಗಳು, ಶ್ರೀ ವಿದ್ಯಾರಣ್ಯ ಮಹಾಸ್ವಾಮಿಗಳು, ಶ್ರೀ ನೃಸಿಂಹ ಭಾರತೀ ಮಹಾಸ್ವಾಮಿಗಳು, ಶ್ರೀ ಸಚ್ಚಿದಾನಂದ ಶಿವಾಭಿನವ ನೃಸಿಂಹ ಭಾರತೀ ಮಹಾಸ್ವಾಮಿಗಳು, ಶ್ರೀ ಚಂದ್ರಶೇಖರ ಭಾರತೀ ಮಹಾಸ್ವಾಮಿಗಳು, ಶ್ರೀ ಅಭಿನವ ವಿದ್ಯಾತೀರ್ಥ ಮಹಾಸ್ವಾಮಿಗಳು, ಹಾಗೆಯೇ ಇನ್ನೂ ಅನೇಕ ಯತಿ ಶ್ರೇಷ್ಠರು ಸರ್ವದಾ ವಂದ್ಯರಾಗಿದ್ದಾರೆ. ಈ ಅವಿಚ್ಛಿನ್ನ ಗುರು ಪರಂಪರೆಯನ್ನು ಸಮರ್ಥವಾಗಿ ಮುಂದುವರೆಸಿ ಈಗ ಶೃಂಗೇರಿ ಶಾರದಾ ಪೀಠದಲ್ಲಿ ವಿರಾಜಮಾನರಾಗಿರುವ ಜಗದ್ಗುರು ಶ್ರೀ ಶ್ರೀ ಭಾರತೀತೀರ್ಥ ಮಹಾಸನ್ನಿಧಾನಂಗಳವರು ಮತ್ತು ತತ್ಕರಕಮಲಸಂಜಾತ ಶ್ರೀ ಶ್ರೀ ವಿಧುಶೇಖರ ಭಾರತೀ ಸನ್ನಿಧಾನಂಗಳವರು ಧರ್ಮ ಪೀಠವನ್ನು ಅಲಂಕರಿಸಿ, ಸರ್ವರಿಗೂ ಮಾನ್ಯರಾಗಿ ಪರಮ ಪೂಜ್ಯರೆನಿಸಿ ನಮ್ಮನ್ನು ಕೃತಾರ್ಥರನ್ನಾಗಿಸಿದ್ದಾರೆ.

ಶ್ರೀ ಶಂಕರರ ಕೊಡುಗೆ: ಶ್ರೀ ಶಂಕರರು ತೋರಿದ ರಾಷ್ಟ್ರೀಯ ಸಮೈಕ್ಯತಾ ಭಾವವು ಅದ್ವಿತೀಯವಾದದ್ದು. ನಿಗದಿತ ನಾಲ್ಕು ವೇದಗಳಾದ ಋಗ್ವೇದ, ಯಜುರ್ವೇದ, ಸಾಮವೇದ, ಅಥರ್ವವೇದವನ್ನು ಸಾರಲು ಅವರು ಉತ್ತರದ ಶ್ರೀ ಸುರೇಶ್ವರಾಚಾರ್ಯರನ್ನು ದಕ್ಷಿಣದ ಶೃಂಗೇರಿ ಶ್ರೀ ಶಾರದಾ ಪೀಠಕ್ಕೂ, ದಕ್ಷಿಣ ಭಾರತದ ಶ್ರೀ ತೋಟಕಾಚಾರ್ಯರನ್ನು ಉತ್ತರದ ಬದರಿಯ ಶ್ರೀ ಜ್ಯೋತಿ ಪೀಠಕ್ಕೂ ಪೀಠಾಧಿಪತಿಗಳನ್ನಾಗಿ ಮಾಡಿದರು. ಹಾಗೆಯೇ ಶ್ರೀ ಹಸ್ತಾಮಲಕಾಚಾರ್ಯರನ್ನು ಪೂರ್ವದ ಶ್ರೀ ಗೋವರ್ಧನ ಪೀಠಕ್ಕೂ ಶ್ರೀ ಪದ್ಮಪಾದಾಚಾರ್ಯರನ್ನು ಪಶ್ಚಿಮದ ಶ್ರೀ ಕಾಳಿಕಾ ಪೀಠಕ್ಕೂ ನೇಮಿಸಿದರು. ಹಾಗೆಯೇ ಕೇರಳದ ನಂಬೂದರಿ ಬ್ರಾಹ್ಮಣರನ್ನು ಬದರೀ ಕ್ಷೇತ್ರದಲ್ಲೂ, ಕರ್ನಾಟಕದವರನ್ನು ನೇಪಾಳದ ಪಶುಪತಿನಾಥನದಲ್ಲೂ, ಮಹಾರಾಷ್ಟ್ರದವರನ್ನು ರಾಮೇಶ್ವರದಲ್ಲೂ ಅರ್ಚಕರಾಗಿರುವಂತೆ ನಿಯಮಿಸಿದರು. ಇಂದಿಗೂ ಸಹ ಈ ನಿಯಮ ಪಾಲನೆಯಾಗುತ್ತಿರುವುದು ವಿಶೇಷ. ಶ್ರೀ ಶಂಕರರು ಸುಮಾರು ಎಂಟು ಭಾಷ್ಯಗಳು, ಹತ್ತು ಪ್ರಕರಣ ಗ್ರಂಥಗಳು, ಅರವತ್ತಾರಕ್ಕೂ ಹೆಚ್ಚು ಸ್ತೋತ್ರಗಳನ್ನು ಹಾಗೂ 23 ಲಘು ಪ್ರಕರಣಾನಿಗಳನ್ನು ರಚಿಸಿದರು. ಜಗದಾದಿ ಗುರು ಶ್ರೀ ದಕ್ಷಿಣಾಮೂರ್ತಿಯಿಂದ ಪ್ರಾರಂಭವಾದ ಗುರು ಪರಂಪರೆಯು ಶಿಷ್ಯ ಪ್ರತಿಷ್ಯ ಪರಂಪರೆಯಲ್ಲಿ ಮುಂದುವರೆಯುತ್ತಾ ಆದಿಗುರು ಶ್ರೀ ಶಂಕರಾಚಾರ್ಯರಿಂದ ಭದ್ರ ಬುನಾದಿಗೊಂಡು ಭರತ ಭೂಮಿಯಲ್ಲಿ ನೆಲೆ ನಿಂತಿತು.



ವಿಜಯ ಯಾತ್ರೆ

ಜಗದ್ಗುರು ಶ್ರೀ ಶ್ರೀ ವಿಧುಶೇಖರ ಭಾರತೀ ಸ್ವಾಮಿಗಳವರು ಶೃಂಗೇರಿ ಶ್ರೀ ಶಾರದಾ ಪೀಠದ ಉತ್ತರಾಧಿಕಾರಿಯಾದ ನಂತರ ಜಗದ್ಗುರು ಶ್ರೀ ಶ್ರೀ ಭಾರತೀ ತೀರ್ಥ ಮಹಾ ಸನ್ನಿಧಾನಂಗಳವರ ಜೊತೆ ಜೊತೆಯಲ್ಲೇ ದೇಶಾದ್ಯಂತ ಪ್ರಥಮ ವಿಜಯ ಯಾತ್ರೆಯನ್ನು ನಡೆಸಿ ಎಲ್ಲೆಡೆ ಭಕ್ತರನ್ನು ಅನುಗ್ರಹಿಸಿರುತ್ತಾರೆ. ಭಕ್ತರ ಮನವಿಯ ಮೇರೆಗೆ ಪ್ರಸ್ತುತ ವಿಜಯ ಯಾತ್ರೆಯನ್ನು ಮಹಾ ಸನ್ನಿಧಾನಂಗಳವರ ಮಾರ್ಗದರ್ಶನ ಹಾಗೂ ಅನುಗ್ರಹದೊಂದಿಗೆ ಆರಂಭಿಸಿರುವುದು ಸಂತಸದ ವಿಷಯ. ಅದರಂತೆ ಮೇ 8ರಿಂದ ಮೇ 12 ರವರೆಗೆ ಹಾಸನ, ಮೈಸೂರು, ಚಾಮರಾಜನಗರ ಜಿಲ್ಲೆಯ ಹೆಬ್ಬಸೂರು ಗ್ರಾಮಕ್ಕೂ, ನಂತರ ಬೆಂಗಳೂರಿಗೂ ಭೇಟಿ ನೀಡಿ, ಭಕ್ತರನ್ನು ಅನುಗ್ರಹಿಸಲಿರುವುದು ನಮ್ಮೆಲ್ಲರ ಪುಣ್ಯವೇ ಆಗಿದೆ.

ಉತ್ತರಾಧಿಕಾರಿ: ಪ್ರಸ್ತುತ ಜಗದ್ಗುರುಗಳಾದ ಶ್ರೀ ಶ್ರೀ ಭಾರತೀತೀರ್ಥ ಮಹಾಸನ್ನಿಧಾನಂಗಳವರು ತಮ್ಮ ಉತ್ತರಾಧಿಕಾರಿಯನ್ನಾಗಿ ವೇದ ವಿದ್ವಾಂಸ ಶ್ರೀ ಕುಪ್ಪಾ ಶಿವಸುಬ್ರಹ್ಮಣ್ಯ ಅವಧಾನಿ, ಶ್ರೀಮತಿ ಸೀತಾ ನಾಗಲಕ್ಷ್ಮಿ ದಂಪತಿಗಳವರ ದ್ವಿತೀಯ ಪುತ್ರರಾದ ಕುಪ್ಪಾ ವೆಂಕಟೇಶ ಪ್ರಸಾದ ಶರ್ಮಾರವರಿಗೆ ಶೃಂಗೇರಿಯ ಶ್ರೀ ಶಾರದಾ ಪೀಠದಲ್ಲಿ ವಿಕ್ರಮ ನಾಮ ಸಂವತ್ಸರ ಮಾಘ ಶುಕ್ಲ ಪಕ್ಷದ ತೃತೀಯ ದಿನ (ದಿನಾಂಕ 23/1/2015 ರಂದು) ಸನ್ಯಾಸತ್ವ ಯೋಗ ಪಟ್ಟವನ್ನು ನೀಡಿ ಉತ್ತರಾಧಿಕಾರಿಯನ್ನಾಗಿ ನಿಯೋಜಿಸಿದರು. 1993ರಲ್ಲಿ ತಿರುಪತಿಯಲ್ಲಿ ಜನಿಸಿದ ಕುಪ್ಪಾ ವೆಂಕಟೇಶ್ವರ ಪ್ರಸಾದ ಶರ್ಮಾರವರು 5ನೇ ವಯಸ್ಸಿನಲ್ಲೇ ಬ್ರಹ್ಮೋಪದೇಶವನ್ನು ತಂದೆ ಕುಪ್ಪಾ ಶಿವಸುಬ್ರಹ್ಮಣ್ಯ ಅವಧಾನಿಗಳವರಿಂದ ಪಡೆದು ಅವರ ಮಾರ್ಗದರ್ಶನದಲ್ಲಿ ವಿದ್ಯಾಭ್ಯಾಸವನ್ನು ಮುಂದುವರಿಸಿದರು. ವೇದವಿದ್ಯೆಯಲ್ಲಿ ಪ್ರಖಾಂಡ ಪಾಂಡಿತ್ಯವನ್ನು ಪಡೆದು ಮಿತಭಾಷಿಯಾಗಿ, ಸದಾ ಅಧ್ಯಯನ ನಿರತರಾಗಿ, ಲೌಕಿಕ ವ್ಯವಹಾರಗಳಿಗೆ ಹೆಚ್ಚಿನ ಗಮನ ಕೊಡದೆ ಶಾಸ್ತ್ರ ವೇದಾಂತದಲ್ಲಿ ವಿಶೇಷ ಆಸಕ್ತಿಯನ್ನು ಹೊಂದಿ ಭಾಗವತ ಸಪ್ತಾಹದಲ್ಲಿಯೂ ಭಾಗವಹಿಸುತ್ತಿದ್ದರು.

ಒಮ್ಮೆ ಶೃಂಗೇರಿಗೆ ಜಗದ್ಗುರುಗಳ ದರ್ಶನಕ್ಕಾಗಿ ತಂದೆ, ತಾಯಿಯವರ ಜೊತೆಯಲ್ಲಿ ಕುಪ್ಪಾ ವೆಂಕಟೇಶ್ವರ ಪ್ರಸಾದ ಶರ್ಮಾರವರು ಆಗಮಿಸಿದಾಗ ಜಗದ್ಗುರುಗಳವರು ಪ್ರತಿನಿತ್ಯ ನಡೆಸುವ ಶ್ರೀ ಚಂದ್ರಮೌಳೇಶ್ವರ ಪೂಜೆಯ ಸಂದರ್ಭದಲ್ಲಿ ಕೃಷ್ಣಯಜುರ್ವೇದವನ್ನು ಪಾರಾಯಣ ಮಾಡಿ ಜಗದ್ಗುರು ಶ್ರೀ ಭಾರತೀತೀರ್ಥ ಮಹಾ ಸನ್ನಿಧಾನಂಗಳವರ ಕೃಪಾಶೀರ್ವಾದಕ್ಕೆ ಪಾತ್ರರಾದರು. ತಿರುಪತಿಯಲ್ಲಿ ವೇದಾಧ್ಯಯನ ಮಾಡುತ್ತಿದ್ದ ಕುಪ್ಪಾ ವೆಂಕಟೇಶ ಪ್ರಸಾದ್ ಶರ್ಮಾರವರು ಜಗದ್ಗುರುಗಳ ಆಶೀರ್ವಾದದ ಪ್ರಭಾವಕ್ಕೆ ಒಳಗಾಗಿ ಜಗದ್ಗುರುಗಳವರ ಸಾನ್ನಿಧ್ಯದಲ್ಲೇ ಶಾಸ್ತ್ರಗಳನ್ನು ಅಭ್ಯಸಿಸುವ ಅಭಿಲಾಷೆಯನ್ನು ವ್ಯಕ್ತಪಡಿಸಿದರು. ನಂತರ 2009 ರಿಂದ ಶೃಂಗೇರಿಯ ಶ್ರೀ ಶಾರದಾ ಪೀಠದಲ್ಲೇ ಅಧ್ಯಯನ ಮುಂದುವರಿಸಿ ಸಂಸ್ಕೃತ ಪಾಂಡಿತ್ಯವನ್ನು ಪಡೆದ ಬಳಿಕ ಸ್ವತಃ ಜಗದ್ಗುರುಗಳವರೇ ತರ್ಕ ಶಾಸ್ತ್ರವನ್ನು ಬೋಧಿಸಿದರು. ಹೀಗೆ ಶಾಸ್ತ್ರಾಧ್ಯಯನ, ಗುರುಭಕ್ತಿ, ವೇದ ಪಾಂಡಿತ್ಯ, ವೈರಾಗ್ಯವೇ ಮೊದಲಾದ ಜಗದ್ಗುರುಗಳವರ ಪರೀಕ್ಷೆಗಳಲ್ಲಿ ತೇರ್ಗಡೆಗೊಂಡದ್ದಲ್ಲದೇ ಪೀಠಾಧಿಪತಿಗಳಾಗುವವರಿಗೆ ಅವಶ್ಯಕವಾದ ನ್ಯಾಯ, ವಿಶೇಷ, ಸಾಂಖ್ಯ, ಯೋಗ, ಮೀಮಾಂಸೆ, ವೇದಾಂತ ಮೊದಲಾದ ಸನಾತನ ಧರ್ಮದ ತತ್ವಶಾಸ್ತ್ರದ ಆರು ಬಗೆಯ ದರ್ಶನಗಳ ಅಧ್ಯಯನವನ್ನೂ ಸಹ ಮಾಡಿದರು. ಹೀಗೆ ಜಗದ್ಗುರು ಶ್ರೀ ಶ್ರೀ ಭಾರತೀತೀರ್ಥರಿಂದಲೇ ಸಕಲ ವಿದ್ಯೆಯನ್ನೂ ಕಲಿತ ವಿದ್ಯಾರ್ಥಿಗಳಲ್ಲಿ ಒಬ್ಬರಾದ ಕುಪ್ಪಾ ವೆಂಕಟೇಶ ಪ್ರಸಾದ ಶರ್ಮಾರನ್ನು ತಮ್ಮ ಉತ್ತರಾಧಿಕಾರಿಯನ್ನಾಗಿ ಮಾಡಲು ಶ್ರೀ ಶಾರದಾ ಪರಮೇಶ್ವರಿ ಅಮ್ಮನವರ ಪ್ರೇರಣೆಯಂತೆ ಮಹಾ ಸನ್ನಿಧಾನಂಗಳವರು ಸಂಕಲ್ಪಿಸಿದರು.

ನಂತರ ಜರುಗಿದ ಶಿಷ್ಯ ಸ್ವೀಕಾರ ಸಮಾರಂಭದಲ್ಲಿ ಸ್ವತಃ ಜಗದ್ಗುರು ಶ್ರೀ ಶ್ರೀ ಭಾರತೀತೀರ್ಥ ಮಹಾ ಸನ್ನಿಧಾನಂಗಳವರು ಉತ್ತರಾಧಿಕಾರಿ ಕುಪ್ಪಾ ವೆಂಕಟೇಶ ಪ್ರಸಾದ ಶರ್ಮಾರವರಿಗೆ ಮಹಾವಾಕ್ಯೋಪದೇಶವನ್ನು ಅನುಗ್ರಹಿಸಿ ಶೃಂಗೇರಿ ಪೀಠಾಧಿಪತಿಗಳಿಗೆ ಬಿರುದಾವಳಿಯಲ್ಲಿ ಹೇಳುವ ವ್ಯಾಖ್ಯಾನ ಸಿಂಹಾಸನಾಧೀಶ್ವರ ಎಂಬಂತ ಪ್ರಣವ ಮಹಾ ವಾಕ್ಯೋಪದೇಶದ ನಂತರ ವ್ಯಾಖ್ಯಾನ ಸಿಂಹಾಸನದ ಮೇಲೆ ಉತ್ತರಾಧಿಕಾರಿಯನ್ನು ಕೂರಿಸಿ ಅಭಿಷೇಕ ನೆರವೇರಿಸಿದರು. ಈ ರೀತಿಯಾಗಿ ವ್ಯಾಖ್ಯಾನ ಸಿಂಹಾಸನದ ಮೇಲೆ ಯತಿಯವರನ್ನು ಕುಳ್ಳಿರಿಸಿ ಅಭಿಷೇಕ ಮಾಡುವುದು ಎರಡೇ ಬಾರಿ. ಒಮ್ಮೆ ಹಿರಿಯ ಗುರುಗಳವರು ಉತ್ತರಾಧಿಕಾರಿಗೆ ಸನ್ಯಾಸ ನೀಡುವ ಸಂದರ್ಭ, ಮತ್ತೊಮ್ಮೆ ಅದೇ ಉತ್ತರಾಧಿಕಾರಿಗೆ ಪಟ್ಟಾಭಿಷೇಕವನ್ನು ಮಾಡುವ ಶುಭ ಸಂದರ್ಭದಲ್ಲಿ. ಆ ಸುಸಮಯದಲ್ಲಿ ಜಗದ್ಗುರುಗಳವರು ಶ್ರೀ ಚಂದ್ರಮೌಳೇಶ್ವರ ಹಾಗೂ ಶ್ರೀ ಶಾರದಾ ಪರಮೇಶ್ವರಿ ಅಮ್ಮನವರ ಪ್ರೇರಣೆಯಂತೆ ದಶನಾಮಿ ಪದ್ಧತಿಯ ಅನುಸಾರ ಭಾರತೀ, ಸರಸ್ವತೀ, ಆಶ್ರಮ, ಗಿರಿ, ತೀರ್ಥ, ಅರಣ್ಯ, ಪರ್ವತ, ಸಾಗರ, ಪುರಿ, ವನ ಎಂಬ ದಶನಾಮಗಳಲ್ಲಿ ಒಂದು ಯೋಗ ಪಟ್ಟವನ್ನು ಅನುಗ್ರಹಿಸುತ್ತಾರೆ. ಅದರಂತೆಯೇ ಜಗದ್ಗುರು ಶ್ರೀ ಶ್ರೀ ಭಾರತೀತೀರ್ಥ ಮಹಾ ಸನ್ನಿಧಾನಂಗಳವರು ಉತ್ತರಾಧಿಕಾರಿಯವರಿಗೆ ಶ್ರೀ ಶ್ರೀ ವಿಧುಶೇಖರ ಭಾರತೀ ಎಂಬುದಾಗಿ ಅಭಿಧಾನವನ್ನು ಅನುಗ್ರಹಿಸಿ ಆಶೀರ್ವದಿಸಿದರು. ಸನ್ನಿಧಾನಂರವರೇ ತಮ್ಮ ಅನುಗ್ರಹ ಭಾಷಣದಲ್ಲಿ ತಿಳಿಸಿದಂತೆ ವಿಧು ಎಂದರೆ ಚಂದ್ರ, ವಿಧುಶೇಖರ ಎಂದರೆ ಚಂದ್ರಶೇಖರ ಎಂಬ ಅರ್ಥ ಬರುತ್ತದೆ. ಶ್ರೀ ಶ್ರೀ ಭಾರತೀ ತೀರ್ಥ ಸ್ವಾಮಿಗಳ ಗುರುಗಳು ಶ್ರೀ ಶ್ರೀ ಅಭಿನವ ವಿದ್ಯಾತೀರ್ಥರು. ಅವರ ಗುರುಗಳು ಶ್ರೀ ಶ್ರೀ ಚಂದ್ರಶೇಖರ ಭಾರತೀ ಸ್ವಾಮಿಗಳು. ಶ್ರೀ ಶ್ರೀ ಭಾರತೀತೀರ್ಥ ಮಹಾಸ್ವಾಮಿಗಳು ತಮ್ಮ ಪರಮ ಗುರುಗಳಾದ ಶ್ರೀ ಶ್ರೀ ಚಂದ್ರಶೇಖರ ಭಾರತೀ ಸ್ವಾಮಿಗಳ ಸ್ಮರಣೆಗಾಗಿಯೇ ಅದೇ ಅರ್ಥ ಬರುವಂತೆ ತಮ್ಮ ಉತ್ತರಾಧಿಕಾರಿಗೆ ಶ್ರೀ ಶ್ರೀ ವಿಧುಶೇಖರ ಭಾರತೀ ಎಂದು ನಾಮಕರಣ ಮಾಡಿದರು.

ಶ್ರೀ ಶಂಕರಾಚಾರ್ಯರ ಅವಿಚ್ಛಿನ್ನ ಪರಂಪರೆಯನ್ನು ಹಿಂದಿನ ಯತಿಗಳಂತೆಯೇ ಅತ್ಯಂತ ಜವಾಬ್ದಾರಿಯುತವಾಗಿ ನಡೆಸುವ ಸಾಮರ್ಥ್ಯವುಳ್ಳವರಾಗಿ ಸನ್ನಿಧಾನಂಗಳವರು ನಮ್ಮೆಲ್ಲ ಆಸ್ತಿಕ ಬಂಧುಗಳನ್ನು ಅನುಗ್ರಹಿಸುತ್ತಿರುವುದು ಪುಣ್ಯವೇ ಆಗಿದೆ. ಯಾವ ಸಿದ್ಧಾಂತವನ್ನು ಟೀಕಿಸದೆ, ಯಾರನ್ನು ದೂಷಿಸದೆ ಯಾರೇ ಬಂದರೂ ಅವರು ನಂಬಿರುವ ಧರ್ಮವನ್ನೇ ಶ್ರದ್ಧೆಯಿಂದ ಮುಂದುವರೆಸುವಂತೆ ಅನುಗ್ರಹಿಸಿ ಭಕ್ತರನ್ನು ಸತ್ಪ್ರಜೆಗಳನ್ನಾಗಿಸುವುದು ಶೃಂಗೇರಿ ಶ್ರೀ ಶಾರದಾ ಪೀಠದ ವಿಶೇಷತೆ. ಆಧ್ಯಾತ್ಮ ಸಾಧನೆಗೆ ಪ್ರಾಮುಖ್ಯತೆ ನೀಡಿದ್ದರೂ ವೇದ ತತ್ವ ಶಾಸ್ತ್ರಗಳನ್ನು ಬೋಧನೆ ಹಾಗೂ ಸಂರಕ್ಷಣೆ ಮಾಡಿ ಮುಂದಿನ ಪೀಳಿಗೆಗೆ ನೀಡುವ ಮೂಲಕ ಸನಾತನ ಧರ್ಮವನ್ನು ಜೀವಂತವಾಗಿರಿಸಿದೆ. ಅಲೌಕಿಕ ಸಾಧನೆಯ ಜೊತೆ ಜೊತೆಗೇ ಬರುವ ಭಕ್ತಾದಿಗಳಿಗೆ ಮಾರ್ಗದರ್ಶನವನ್ನೂ ಮಾಡುತ್ತಾ ಧಾರ್ಮಿಕ ಶಕ್ತಿ ಕೇಂದ್ರವಾಗಿ ಅಗ್ರಸ್ಥಾನದಲ್ಲಿದೆ. ಅವಿಚ್ಛಿನ್ನ ಗುರು ಪರಂಪರೆಯಂತೆಯೆ ಅಲ್ಲದೆ, ವಿಚ್ಛಿತ್ತಿಯೇ ಇಲ್ಲದ ಈ ಪೀಠದ ಶಿಷ್ಯ ಪರಂಪರೆಯೂ ಸಹ ಜಗದ್ಗುರುಗಳವರನ್ನು ಅತಿಶಯವಾದ ಶ್ರದ್ಧಾ ಭಕ್ತಿಗಳಿಂದ ಗೌರವಿಸುತ್ತಾ ಬಂದಿರುತ್ತದೆ. ಇಂದಿಗೂ ಶ್ರೀ ಮಠದ ಪರಂಪರೆಯ ಭಕ್ತರು ಆಚಾರ್ಯರ ಸಂಭಾವನೆ, ಶಂಕರಾಚಾರ್ಯ ಭಿಕ್ಷೆ, ಗುರುಕಾಣಿಕೆ ಎಂದು ಮದುವೆ, ಮುಂಜಿ ಮೊದಲಾದ ಶುಭ ಕಾರ್ಯಗಳಲ್ಲಿ ಮಠದ ಮುದ್ರಾಧಿಕಾರಿಗಳವರ ಮುಖಾಂತರ ಶ್ರೀ ಮಠಕ್ಕೆ ಕಾಣಿಕೆ ಒಪ್ಪಿಸುವ ಪದ್ಧತಿ ಇಂದಿಗೂ ನಡೆದು ಬಂದಿದೆ. ಶೃಂಗೇರಿ ಶ್ರೀ ಶಾರದಾ ಪೀಠವು ಒಂದು ಸಂಸ್ಥಾನವೇ ಆಗಿದೆ ಎಂಬುದೇ ವಿಶೇಷ.

ಧಾರ್ಮಿಕ ಆಚರಣೆ: ಜಗದ್ಗುರು ಶ್ರೀ ಶ್ರೀ ವಿಧುಶೇಖರ ಭಾರತೀ ಸ್ವಾಮಿಗಳವರು ತಮ್ಮ ಗುರುಗಳಾದ ಜಗದ್ಗುರು ಶ್ರೀ ಶ್ರೀ ಭಾರತೀತೀರ್ಥ ಮಹಾ ಸನ್ನಿಧಾನಂಗಳವರ ಪೂರ್ಣಾಶೀರ್ವಾದದೊಂದಿಗೆ ಶೃಂಗೇರಿಯ ಶ್ರೀ ಮಠದಲ್ಲಿ ಶ್ರೀ ಶಂಕರಾಚಾರ್ಯ ಅಷ್ಟೋತ್ತರ ಶತನಾಮಾವಳಿ ಪಾರಾಯಣ, ಶ್ರೀ ಶಂಕರ ಭಜನಾ ಮಂಡಳಿಗಳ ಆಯೋಜನೆ, ಗುರುಗಳವರ ಸಪ್ತತಿ ವರ್ಷದಲ್ಲಿ ಆಯುತ ಚಂಡೀಯಾಗ, ಅತಿರುದ್ರಯಾಗ, ಶ್ರೀ ಶಾರದಾ ಪರಮೇಶ್ವರಿ ಅಮ್ಮನವರಿಗೆ ಕೋಟಿ ಕುಂಕುಮ ಅರ್ಚನೆ ಮೊದಲಾದ ಧಾರ್ಮಿಕ ಕಾರ್ಯಗಳ ಜೊತೆಗೆ ಸಂಸ್ಕೃತಿ ರಕ್ಷಣೆಯ ಕಾರ್ಯಕ್ರಮಗಳನ್ನು ಸಹ ಸನ್ನಿಧಿಯಲ್ಲಿ ಯಶಸ್ವಿಯಾಗಿ ಆಚರಿಸಿದರು.



– ನಂ.ಶ್ರೀಕಂಠಕುಮಾರ್
ಮೊ : 9481067333

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com

ಮಗಳು ಇಲ್ಲೇ ಇದ್ದಾಳೆ...!

ವಾರ್ಷಿಕ ಕಥಾ ಸ್ಪರ್ಧೆಯಲ್ಲಿ ಸಮಾಧಾನಕರ ಬಹುಮಾನ ಪಡೆದ ಕಥೆ



ಕಥೆಗಾರ್ತಿ : ಚಂಚಲ ವೇಣುಗೋಪಾಲ್
ಕಥೆ : ಮಗಳು ಇಲ್ಲೇ ಇದ್ದಾಳೆ...!
ಮೊಬೈಲ್ 8904117116

ಮಗಳು ಇಲ್ಲದ ಮನೆಯಲ್ಲಿ ಮಾವನಿಗೇನು ಕೆಲಸ ಎನ್ನುವಂತಾಗಿತ್ತು ಶೇಷಗಿರಿಯ ಪರಿಸ್ಥಿತಿ. ಮಗಳು ಉಮಾ ಸತ್ತು ಮೂರು ತಿಂಗಳಾಗಿತ್ತು. ಅಳಿಯ ಹರಿ ಮೌನಿಯಾಗಿದ್ದ, ಮೊದಲೇ ಮಾತು ಕಮ್ಮಿ ಈಗಂತೂ ಅಕ್ಷರಶಃ ಕುಸಿದು ಹೋಗಿದ್ದ. ಮಾತುಗಳೆತ್ತಲೋ ಮರೆಯಾಗಿದ್ದವು. ಅನಿವಾರ್ಯವಾದಲ್ಲಿ ಮಗ ನಿಶಾಂತನೊಂದಿಗೆ ಒಂದೆರಡು ಮಾತು ಅಷ್ಟೇ.

ನಿಶಾಂತ ತಾಯಿಯ ಸಾವಿನ ಆಘಾತದಿಂದ ತತ್ತರಿಸಿದರೂ ಪಿಯುಸಿ ಪರೀಕ್ಷೆ ಶುರುವಾಗಿದ್ದರಿಂದ ನಿಧಾನವಾಗಿ ಓದಿನತ್ತ ಗಮನಹರಿಸಿ ದುಃಖ ನುಂಗಿಕೊಳ್ಳುತ್ತಿದ್ದ. ಆದರೆ, ಹೆಚ್ಚು ಚಿಂತಿತರಾದದ್ದು ಶೇಷಗಿರಿ. ಹೆಂಡತಿ ಸತ್ತ ಬಳಿಕ ಮಗಳ ಮನೆಗೆ ಆಸರೆಗೆಂದು 4 ವರ್ಷದ ಹಿಂದೆ ಬಂದವರು ಅವರು, ಒಬ್ಬಳೇ ಮಗಳು ತನ್ನ ಪುಟ್ಟ ಸಂಸಾರದೊಳಗೆ ಸುಖಿಯಾಗಿದ್ದಳು. ತಾಯಿ ಸತ್ತಾಗ ದಿಢೀರನೆ ಒಂಟಿಯಾದ ತಂದೆಗೆ ತಾನೇ ಆಸರೆಯ ಕೈ ನೀಡಿ ತನ್ನ ಮನೆಗೆ ಕರೆ ತಂದಿದ್ದಳು. ಇದಕ್ಕೆ ಹಳ್ಳಿಯಲ್ಲಿದ್ದ ಗಂಡ ಹರಿಯ ತಂದೆ ಕೂಡಾ ಒತ್ತಾಸೆಯಾಗಿ ನಿಂತ.

'ನೀನಲ್ಲದೇ ಇನ್ನಾರು ತಂದೆಯನ್ನು ನೋಡಿಕೊಳ್ಳುತ್ತಾರೆ ನಿನ್ನೊಂದಿಗೆ ಕರೆ ತಂದು ನೋಡಿಕೋ... ಉಮಾ' ಎಂದು ಒತ್ತಾಯಿಸಿ ಶೇಷಗಿರಿಗೆ 'ನಿಮಗೆ ಹರಿ ಮಗ ಮತ್ತು ಅಳಿಯ ಎರಡೂ ಅಲ್ಲವೇ... ನೆಮ್ಮದಿಯಾಗಿ ಇಲ್ಲೇ ಇರಿ... ನೀವು ಹೊರಗಿನವರೇನು, ಸಂಕೋಚ ಯಾಕೆ?' ಎಂದೆಲ್ಲ ಹೇಳಿ ಒಪ್ಪಿಸಿದ್ದರು. ಹೀಗಾಗಿ ಶೇಷಗಿರಿ ಮಗಳ ಮನೆಯಲ್ಲಿ ಬಂದು ಇದ್ದರು. ಅಲ್ಲದೇ ಹರಿಯ ತಂದೆ ಹಳ್ಳಿಯಲ್ಲಿ ಇನ್ನೊಬ್ಬ ಮಗನ ಮನೆಯಲ್ಲಿಯೇ ಇದ್ದರು. ಅವರು ಹರಿಯ ಮನೆಗೆ ಹೆಚ್ಚು ಬರುತ್ತಿರಲಿಲ್ಲ, ಹೀಗಾಗಿ ಉಮಾಳ ದೊಡ್ಡದಾದ ಮನೆಯಲ್ಲಿ ಶೇಷಗಿರಿ ಬಂದು ಉಳಿಯುವುದು ಯಾವುದೇ ಸಮಸ್ಯೆಯಾಗಿರಲಿಲ್ಲ. ಶೇಷಗಿರಿಗೆ ಮಗಳ ಮನೆ ಎಂದು ಯಾವ ಸಂಕೋಚವೂ ಲಿಲ್ಲ. ಏಕೆಂದರೆ ವಯಸ್ಸಿನೊಂದಿಗೆ ಹಲವು ರೋಗಗಳು ದೇಹವನ್ನು ಹಣ್ಣು ಮಾಡುತ್ತಿತ್ತು. ಆಸರೆ ಬೇಕೇ ಬೇಕು ಎಂದು ಮನಸ್ಸು ದೇಹ ಅಂಗಲಾಚುತ್ತಿತ್ತು. ಹೀಗಾಗಿ ಈ ವ್ಯವಸ್ಥೆ ಅನುಕೂಲವಾಗೇ ಇತ್ತು. ಇನ್ನು ಉಮಾಳಿಗೆ ತಂದೆ ಜೊತೆಯೇ ಇರುವುದು ನೆಮ್ಮದಿಯಾಗಿತ್ತು. ಹರಿ ಕೆಲಸಕ್ಕೆ ಹೋದರೆ ಬರುವುದೇ ರಾತ್ರಿ. ಅಲ್ಲದೇ ಅವನು ಮಿತಭಾಷಿ, ಎಂದೂ ಹರಟೆ, ಮಾತು ಎಂದು ಕುಳಿತವನಲ್ಲ... ಇದು ಶೇಷಗಿರಿಗೆ ಕೊರತೆಯೆನಿಸಿರಲಿಲ್ಲ. ಅವರಿಗೆ ಕಂಪೆನಿ ಕೊಡಲು ಮಗಳಿದ್ದಳು, ಮುದ್ದಿನ ಮೊಮ್ಮಗನಿದ್ದ, ಸಂಜೆ ಅವನೊಂದಿಗೆ ಅಲ್ಲಿ ಇಲ್ಲಿ ಹೋಗಿ ಸುತಾಡಿ ಬರುವಾಗ ಹೆಂಡತಿಯಿಲ್ಲದ ಬೇಸರ ಕಾಡಲಿಲ್ಲ.

ಎಲ್ಲವೂ ಸರಿಯಾಯಿತು ಎನ್ನುವಷ್ಟರಲ್ಲಿ 48 ವಯಸ್ಸಿಗೆ ಉಮಾಗೆ ಹೃದಯಾಘಾತವಾಗಿತ್ತು, ಇದೇನು? ಏಕೆ, ಹೇಗೆ ತಿಳಿಯುವಷ್ಟರಲ್ಲಿ ಅವಳ ಹೃದಯವೇ ನಿಂತು ಹೋಗಿತ್ತು

ಬಿರುಗಾಳಿ ಬೀಸಿದ್ದು ಈಗ.. ನೆಮ್ಮದಿಯಾಗಿ ಒಂದು ಹಂತಕ್ಕೆ ಸಾಗುತ್ತಿದ್ದ ಬದುಕು ಮತ್ತೆ ಸೂತ್ರ ಹರಿದ ಗಾಳಿಪಟದಂತಾಗಿ ಚೂರಾಗಿ ಹೋಯ್ತು, ಉಮಾಳ ಅಕಾಲಿಕ ಸಾವು ಅರಗಿಸಿಕೊಳ್ಳಲಾಗಲಿಲ್ಲ ಯಾರಿಗೂ.... ಮುಗಿಯಿತು... ಎಲ್ಲಾ ಮುಗಿದಾಗ ನೀರವತೆ ಒಂದೇ ಉಳಿದದ್ದು.

ಮಗಳಿಲ್ಲದ ಮನೆಯಲ್ಲಿ ಶೇಷಗಿರಿಗೆ ಇರಲು ಈಗ ಹೆಚ್ಚು ಸಂಕೋಚ ಶುರುವಾಗಿತ್ತು. ಆದರೆ ಮೊಮ್ಮಗನ ಸೆಳೆತ ಅವರನ್ನು ಕಟ್ಟಿ ಹಾಕಿತ್ತು, ಅವನಿಗೆ ತಾತನೆಂದರೆ ಜೀವ.. ಯಾವಾಗಲೂ ಅವನು ತಾತನ ಸಾಮೀಪ್ಯ ಬಯಸುತ್ತಿದ್ದ, ತಾಯಿ ನೆನಪಾದಾಗಲೆಲ್ಲಾ ತಾಯಿಯನ್ನೇ ಹೋಲುತ್ತಿದ್ದ ತಾತನ ಚಹರೆ ಅವನಿಗೆ ತುಸು ಸಮಾಧಾನ ತರುತ್ತಿತ್ತು. ಸೀದಾ ಅವರ ಬಳಿ ಬಂದು ಅವರ ಪಕ್ಕದಲ್ಲಿ ಮಲಗಿಬಿಡುತ್ತಿದ್ದ, ಎರಡೂ ಜೀವಗಳ ನೋವು ಅಗಾಧವಾದದ್ದು, ತಾತ ಮೊಮ್ಮಗನ ತಲೆಸವರಿ ಕೈ ಹಿಡಿದಾಗ ಅವನಿಗೆ ಎಷ್ಟೋ ಸಮಾಧಾನ, ಇಬ್ಬರ ಕಣ್ಣಲ್ಲೂ ನೀರು ಹರಿಯುತ್ತಿತ್ತು, ಮೊಮ್ಮಗನ ಮನದ ನೋವು ಚೆನ್ನಾಗಿ ಅರ್ಥವಾಗುತ್ತಿತ್ತು. ಹಾಗೇ ತಾತನ ಅಸಹಾಯಕತೆಯ ನೋವು ನಿಶಾಂತನಿಗೆ ಅಷ್ಟಾಗಿ ಅರಿವಾಗುವ ವಯಸ್ಸಲ್ಲ ಆದರೂ ಅವರ ನೋವಿನಲ್ಲಿ ಅವನು ಭಾಗಿಯಾಗುತ್ತಿದ್ದ, ಸಂಗಾತಿಯ ಸಾವು ಹರಿಯನ್ನು ಅತಂತ್ರನಾಗಿಸಿ ಮೌನದತ್ತ ದೂಡಿಬಿಟ್ಟಿತ್ತು.

ಮೂವರೂ ಅವರದೇ ಚಿಂತೆಯಲ್ಲಿ ತೊಡಗಿದ್ದರು, ಮಗಳಿಲ್ಲದ ಖಾಲಿಯಾದ ಮನೆಯೊಳಗೆ ತನ್ನ ಇರವು ಅಳಿಯನಿಗೆ ಹೊರೆಯಾಗುತ್ತಿದೆ ಎಂಬ ಭಾವನೆ ದಟ್ಟವಾದಾಗ ಶೇಷಗಿರಿಗೆ ತನ್ನ ಉಳಿದ ದಿನಗಳನ್ನು ಇಲ್ಲಿ ಕಳೆಯುವುದು ಸರಿಯೇ ಎಂಬ ಪ್ರಶ್ನೆ ಕಾಡುತಿತ್ತು. ಬದುಕು ನೀರಸ ಎಲ್ಲ ಬೆಳಕಿನ ದಾರಿಗಳು ಮುಚ್ಚಿಹೋಗುತ್ತಿದೆ... ಮಗಳಿದ್ದಾಗ ಎಂದೂ ಸುಳಿಯದ ಈ ಪ್ರಶ್ನೆಗಳು ಈಗ ಪುಂಖಾನುಪುಂಖವಾಗಿ ಕಾಡತೊಡಗಿತು, ಈ ಮನೆಯಲ್ಲಿ ನಾನು ಅತಿಥಿಯಾ? ಇರುವುದು ಸೂಕ್ತವೇ? ಮೊಮ್ಮಗನಿಗೆ ತನ್ನ ಅವಶ್ಯಕತೆ ಇದೆ. ಆದರೆ ಅವನ ಭವಿಷ್ಯ ನಾಳೆ ಎಲ್ಲೋ



ಮಗಳಿಲ್ಲದ ಮನೆಯಲ್ಲಿ ಶೇಷಗಿರಿಗೆ ಇರಲು ಈಗ ಹೆಚ್ಚು ಸಂಕೋಚ ಶುರುವಾಗಿತ್ತು. ಆದರೆ ಮೊಮ್ಮಗನ ಸೆಳೆತ ಅವರನ್ನು ಕಟ್ಟಿ ಹಾಕಿತ್ತು, ಅವನಿಗೆ ತಾತನೆಂದರೆ ಜೀವ.. ಯಾವಾಗಲೂ ಅವನು ತಾತನ ಸಾಮೀಪ್ಯ ಬಯಸುತ್ತಿದ್ದ, ತಾಯಿ ನೆನಪಾದಾಗಲೆಲ್ಲಾ ತಾಯಿಯನ್ನೇ ಹೋಲುತ್ತಿದ್ದ ತಾತನ ಚಹರೆ ಅವನಿಗೆ ತುಸು ಸಮಾಧಾನ ತರುತ್ತಿತ್ತು. ಸೀದಾ ಅವರ ಬಳಿ ಬಂದು ಅವರ ಪಕ್ಕದಲ್ಲಿ ಮಲಗಿಬಿಡುತ್ತಿದ್ದ, ಎರಡೂ ಜೀವಗಳ ನೋವು ಅಗಾಧವಾದದ್ದು, ತಾತ ಮೊಮ್ಮಗನ ತಲೆಸವರಿ ಕೈ ಹಿಡಿದಾಗ ಅವನಿಗೆ ಎಷ್ಟೋ ಸಮಾಧಾನ, ಇಬ್ಬರ ಕಣ್ಣಲ್ಲೂ ನೀರು ಹರಿಯುತ್ತಿತ್ತು, ಮೊಮ್ಮಗನ ಮನದ ನೋವು ಚೆನ್ನಾಗಿ ಅರ್ಥವಾಗುತ್ತಿತ್ತು. ಹಾಗೇ ತಾತನ ಅಸಹಾಯಕತೆಯ ನೋವು ನಿಶಾಂತನಿಗೆ ಅಷ್ಟಾಗಿ ಅರಿವಾಗುವ ವಯಸ್ಸಲ್ಲ ಆದರೂ ಅವರ ನೋವಿನಲ್ಲಿ ಅವನು ಭಾಗಿಯಾಗುತ್ತಿದ್ದ, ಸಂಗಾತಿಯ ಸಾವು ಹರಿಯನ್ನು ಅತಂತ್ರನಾಗಿಸಿ ಮೌನದತ್ತ ದೂಡಿಬಿಟ್ಟಿತ್ತು.

ಓದು, ಉದ್ಯೋಗ ಹಿಡಿದು ಎಲ್ಲಿಯೋ ನೆಲೆ ಕಂಡುಕೊಳ್ಳುತ್ತಾನೆ... ಹರಿ ಹಳ್ಳಿಗೆ ತನ್ನ ತಂದೆ ಬಳಿಗೆ ಹೋಗಬಹುದು... ತಾನೆಲ್ಲಿ ಹೋಗಲಿ ತನ್ನ ಆಯಸ್ಸು ಎಷ್ಟಿದೆಯೋ? ಎಲ್ಲರಿಗೂ ತನ್ನಿಂದ ತೊಂದರೆ ಆಗಬಾರದು... ಚಿಂತೆಗಳ ಬಲೆಯಲ್ಲಿ ಸಿಕ್ಕಿದ ಮನಸ್ಸು ದುಃಖ ಅಸಹಾಯಕತೆಗಳಲ್ಲಿ ಒದ್ದಾಡಿತು.

ನಾನು ತಮ್ಮನ ಬಳಿ ಹೋದರೆ ಹೇಗೆ? ಅವನು ಮಗನ ಆಶ್ರಯದಲ್ಲಿದ್ದಾನೆ, ನಮ್ಮಿಬ್ಬರ ನಡುವೆ ಆತ್ಮೀಯತೆಯ ಬಾಂಧವ್ಯವಿಲ್ಲ. ಆದರೂ ತನಗೊಂದು ಆಶ್ರಯ ಕೊಡಲಾರನೇ? ಅಪರೂಪಕ್ಕೊಮ್ಮೆ ಫೋನ್ ಬಿಟ್ಟರೆ ಅವನು ಹೆಚ್ಚಿಗೇನೂ ತನ್ನನ್ನು ವಿಚಾರಿಸುತ್ತಿಲ್ಲ, ಈಗ ಅವನಲ್ಲಿಗೆ ಹೋಗಿ ಇರುತ್ತೇನೆ ಎಂದು ಹೇಗೆ ಕೇಳಲಿ? ಆದರೂ ಮನಸ್ಸಿನ ಒತ್ತಡ ತಾಳಲಾರದೆ ನಾಚಿಕೆ ಬಿಟ್ಟು ತಮ್ಮನನ್ನು ಕೇಳಿಕೊಂಡರು ಮನೆಯಲ್ಲಿ ಯಾರೂ ಇಲ್ಲದಿದ್ದಾಗ; 'ಉಮಾ ಇರೋತನಕ ಯೋಚನೆ ಇರಲಿಲ್ಲ ಶಂಕರಾ... ಈಗ ಅಳಿಯನ ಮನೇಲಿ ಸಂಕೋಚವಾಗುತ್ತಿದೆ, ನಿಮ್ಮನೆಗೆ ಬಂದು ಇರಲಾ?' ಎಂದಾಗ ಶಂಕರ ತಕ್ಷಣ ಮಾತೇ ಆಡಲಿಲ್ಲ ನಂತರ ನಿಧಾನವಾಗಿ 'ಇಲ್ಲಿ ಬಂದು ಇರುತ್ತೀಯಾ.. ನನ್ನ ಮತ್ತು ನನ್ನ ಹೆಂಡತೀನ್ನಾ, ಅವನು ನೋಡಿಕೊಳ್ಳುತ್ತಿರೋದು ಅಷ್ಟರಲ್ಲೇ ಇದೆ... ಇನ್ನು ನಿನ್ನನ್ನು ನೋಡಿಕೋ.. ಎಂದು ಹೇಗೆ ಕೇಳಲಿ...' ಎಂದಾಗ

'ಹಾಗೆ ಏನೂ ನೋಡಿಕೊಳ್ಳೋದು ಬೇಡಾ.. ನನ್ನ ಪೆನ್ಶನ್ ಪೂರಾ ಕೊಟ್ಟುಬಿಡುತ್ತೇನೆ... ಇಪ್ಪತ್ತರ ಮೇಲೇ ಬರುತ್ತೆ...ನಮ್ಮವರು ಅಂತ ನೀನೇ ಕಣೋ ಇರೋದು... ಇಲ್ಲಿ ಅಳಿಯ ಒಳ್ಳೆಯವರೇ ಆದರೆ ದಿನದಿನಕ್ಕೂ ನನಗೆ ತುಂಬಾ ಸಂಕೋಚವಾಗುತ್ತಿದೆ..' ಅವರ ಅಸಹಾಯಕತೆ ಅವನ ಮನಸ್ಸನ್ನು ತಟ್ಟಿತು ತಕ್ಷಣಕ್ಕೆ ಒಪ್ಪಿಗೆ ಕೊಡಲಾರದೆ, 'ಆಯ್ತು ಮಗ ಸೊಸೇನ್ನ ಕೇಳಿಬಿಟ್ಟು ಹೇಳ್ತೀನಿ... ಏನು ಮಾಡಲಿ ನನಗೂ ಸ್ವತಂತ್ರ ವಿಲ್ಲ....' ಎಂದು ಸತ್ಯವನ್ನೇ ನುಡಿದಿದ್ದ. ಆದರೆ ವಾರ ಕಳೆದರೂ ಅವನಿಂದ ಮತ್ತೆ ಫೋನ್ ಬಂದಿರಲಿಲ್ಲ, ಶೇಷಗಿರಿ ಎರಡು ಬಾರಿ ಫೋನ್ ಮಾಡಿದಾಗಲೂ ಅವನು ಉತ್ತರಿಸಿರಲಿಲ್ಲ.. ತಾನೇಕೋ ಈ ಪ್ರಪಂಚದಲ್ಲಿ ಒಂಟಿ ಎಂಬ ಭಾವನೆ ಸುಡತೊಡಗಿ ಅದರ ಶಾಖದಲ್ಲಿ ಮನಸ್ಸು ಬೆಂದುಹೋಗುತ್ತಿತ್ತು.

ತನ್ನಂತಹವರಿಗೆ ವೃದ್ಧಾಶ್ರಮ ಇರುವ ವಿಚಾರ ತಿಳಿದಿತ್ತು, ತಮ್ಮವರಿಗಾಗಿ ಹಂಬಲಿಸುವ ಅವರುಗಳ ನೋವು ದುಃಖ ಸಂಕಟ ಕಾಡುವ ಒಂಟಿತನ ಸಾಕಷ್ಟು ಕೇಳಿದ್ದರು, ಅಂತಹ ಕಡೆ ಹೋಗಿ ಸೇರಿ ಇರುವ ಕಲ್ಪನೆಯೇ ಮನಸ್ಸಿಗೆ ತ್ರಾಸ ಕೊಟ್ಟಿತು. ಅಲ್ಲಿ ಹೋಗಲಾರೆ ಇಲ್ಲಿ ಇರಲಾರೆ... ಮತ್ತೇನು?

ಅದೊಂದು ದಿನ ನಿಶಾಂತ 'ನಾಲ್ಕೇ ದಿನ ತಾತ ಗೆಳೆಯನ ಎಸ್ಟೇಟು ಮನೆಗೆ ನಾವು ನಾಲ್ಕು ಜನ ಫ್ರೆಂಡ್ಸ್ ಹೋಗುತ್ತಿದ್ದೇವೆ...' ಎಂದಾಗ ಹರಿ ಏನೂ ಮಾತಾಡದೆ ತಲೆಯಾಡಿಸಿದ್ದ,

'ಹೋಗಿ ಬಾ ನಿಶಾಂತು... ನಿನ್ನ ಮನಸ್ಸಿಗೆ ಒಂದು ಬದಲಾವಣೆ ಸಿಗಲಿ...' ಎಂದು ಶೇಷಗಿರಿ ಕಳಿಸಿಕೊಟ್ಟರು, ಮೊಮ್ಮಗನ ಮನಸ್ಸಿನ ನೋವಿಗೆ ಎಲ್ಲೋ ಮುಲಾಮು ಸಿಕ್ಕರೆ ಸಾಕು ಎಂದು ಹಂಬಲಿಕೆ.

ಈಗ ಮನೆಯಲ್ಲಿ ಮಾವ ಅಳಿಯ ಇಬ್ಬರೇ.. ಪಕ್ಕದ ಬೀದಿಯ ಮೆಸ್‌ನಿಂದ ಉಮಾ ಹೋದಾಗಿನಿಂದ ಊಟ ತಿಂಡಿ ಹೊತ್ತು ಹೊತ್ತಿಗೆ ಬರುತ್ತಿತ್ತು... ಮನೆ ಕೆಲಸದವಳು ಬಂದು ಬೇರೆ ಕೆಲಸ ಮಾಡುತ್ತಿದ್ದಳು... ಹೇಗೋ ಮನೆಯ ಕೆಲಸ ಕಾರ್ಯಗಳು ಯಾಂತ್ರಿಕವಾಗಿ ನಡೆಯುತ್ತಿತ್ತಷ್ಟೇ... ಹರಿ ಬೆಳಿಗ್ಗೆ ಹೋದರೆ ರಾತ್ರಿಯೇ ಬರುತ್ತಿದ್ದುದು... ಒಂಟಿಯಾಗಿ ಮನೆಯಲ್ಲಿ ಕಾಲ ಕಳೆಯುವುದು ಶೇಷಗಿರಿಗೆ ತುಂಬಾ ಕಷ್ಟವಾಗುತ್ತಿತ್ತು, ಟಿ.ವಿ ಪುಸ್ತಕಗಳು ನೊಂದ ಮನಸ್ಸಿಗೆ ಸಮಾಧಾನ ಕೊಡುತ್ತಿರಲಿಲ್ಲ... ಯೋಚನೆಗಳೊಂದಿಗೆ ಮಲಗಿಬಿಡುತ್ತಿದ್ದರು. ಈಗ ನಿಶಾಂತನೂ ಮನೆಯಲ್ಲಿ ಇಲ್ಲ, ಅಚ್ಚರಿಯೆಂಬಂತೆ ಸಂಜೆ ಬೇಗನೆ ಹರಿ ಮನೆಗೆ ಬಂದ 'ನಿಮಗೆ ಒಬ್ಬರೇ ಬೇಸರವೇನೋ..' ಎಂದ ಆತ್ಮೀಯವಾಗಿ 'ಸ್ವಲ್ಪ...' ಶೇಷಗಿರಿ ಮಂಕಾಗಿ ನುಡಿದರು.

'ರೆಡಿಯಾಗಿ ಬರ್ತೀನಿ ಇಲ್ಲೇ ಸುತ್ತಾಡಿ ಬರೋಣ...' ಎಂದು ಒಳಗೆ ಹೋದ ಅವರನ್ನು ರಾಯರ ಮಠ, ದೇವಸ್ಥಾನಗಳಿಗೆ , ನಂತರ ಹೋಟೆಲ್ಲಿಗೆ ಕರೆದೊಯ್ದು ತಿಂಡಿ ಕೊಡಿಸಿ ಸುತ್ತಾಡಿಸಿ ಮನೆಗೆ ಬಂದಾಗ ಬೇಯ್ತುತ್ತಿದ್ದ ಮನಕ್ಕೆ ಸಣ್ಣ ಬದಲಾವಣೆ ಚೂರು ತಂಪು ಕೊಟ್ಟಿತು. ರಾತ್ರಿ ಅವನೇ ಅವರಿಗೆ ಹಾಲು ಕಾಯಿಸಿ ಕೊಟ್ಟು ಮಾತ್ರೆಗಳನ್ನೆಲ್ಲ ಪರಿಶೀಲಿಸಿ ಕೊಟ್ಟು "ಬೆಳಿಗೆ ಒಂಬತ್ತಕ್ಕೆ ರೆಡಿಯಾಗಿರಿ... ಒಂದು ಕಡೆ ಹೋಗೋಣ...' ಎಂದಾಗ ಶೇಷಗಿರಿ, "ನಿಮಗೆ ನಾನು ಭಾರವಾಗುತ್ತಿದ್ದೇನೆ... ತೊಂದರೆಯಾಗುತ್ತಿದೆ ನನ್ನಿಂದ..' ಎಂದು ಮೆಲುವಾಗಿ ಸಂಕೋಚದಿಂದ ಹೇಳಿದಾಗ ಹರಿ ಥಟ್ಟನೆ" ಛೀ... ಹಾಗೆಲ್ಲಾ ಯೋಚಿಸಬೇಡಿ...ಮಲಗಿ...." ಎಂದು ಹೇಳಿದ್ದ. ಅವನ ಮನದೊಳಗೆ ಏನಿದೆಯೋ...? ನಿಟ್ಟುಸಿರುಬಿಟ್ಟರು.

ಮರುದಿನ ಅವರಿಗೆ ತಿಂಡಿ, ಕಾಫಿ ಕೊಟ್ಟು ಒಂಬತ್ತಕ್ಕೆಲ್ಲಾ ಮನೆಯಿಂದ ಹೊರಡಿಸಿದ್ದ. ಕಾರಿನೊಳಗೆ ಏನೇನೋ ಕವರ್‌ಗಳನ್ನು ತುಂಬಿಸಿಕೊಂಡ, ಶೇಷಗಿರಿ ಅರ್ಥವಾಗದೆ ನೋಡುತ್ತಿದ್ದರು. ಎಲ್ಲಿಗೆ ಎಂದು ಕೇಳಲಾಗಲಿಲ್ಲ, ಕಾರು ಒಂದೆಡೆ ನಿಂತಾಗ ಹರಿ; "ಇದು ವೃದ್ಧಾಶ್ರಮ ಮಾವ... ಬನ್ನಿ ಒಳಗೆ ಹೋಗೋಣ..." ಎಂದಾಗ ಶೇಷಗಿರಿ ಹೃದಯ ಕಂಪಿಸಿತ್ತು ಅಂದರೆ ಹರಿ ತನ್ನನ್ನು ಇಲ್ಲಿಗೆ ಸೇರಿಸುತ್ತಿದ್ದಾನಾ? ಹಾಗಾದಲ್ಲಿ... ಕಣ್ಣು ಮಂಜಾಯಿತು, ಉಮಾ ನೆನಪು ಬಂದು ದುಃಖದಿಂದ ಅರೆ ಗಳಿಗೆ ಮಂಕಾದರು

ಹರಿ ಆಫೀಸಿನ ಒಳಗೆ ಹೋಗಿ ಮ್ಯಾನೇಜರ್‌ನೊಂದಿಗೆ ಏನೋ ಮಾತಾಡುತ್ತಿದ್ದ, ನಂತರ ಕಾರಿನಲ್ಲಿದ್ದ ಪ್ಯಾಕೇಟ್ ಕವರ್ ಎಲ್ಲವನ್ನೂ ಒಳಗೆ ತಂದು ಬನ್ನಿ ಮಾವ.... ಇದನ್ನೆಲ್ಲಾ ನೀವೇ ಹಂಚಿ.." ಎಂದ, ಏನು ಏಕೆ ಎಂದು ಅರಿಯದ ಶೇಷಗಿರಿಗೆ ಕಕ್ಕಾಬಿಕ್ಕಿಯಾಯಿತು, ಅಯೋಮಯರಾಗಿ ಅಳಿಯನತ್ತ ನೋಡಿದಾಗ ಹರಿ, ಮಾವ... ಮರೆತುಬಿಟ್ರಿ... ಇವತ್ತು ಉಮಾ ಹುಟ್ಟಿದ ದಿನ.. ಅದಕ್ಕೆ ಎಲ್ಲರಿಗೂ ಹೊಸಬಟ್ಟೆ ಹಣ್ಣು ಹಂಚುತ್ತಿರೋದು..." ಎಂದಾಗ ತನ್ನ ತಪ್ಪು ಕಲ್ಪನೆಗೆ ಶೇಷಗಿರಿಗೆ ಸಂಕೋಚ ವಾಯಿತು, ಹೌದು ಇಂದು ಉಮಾ ಹುಟ್ಟಿದ ದಿನ, ಹೇಗೆ ಮರೆತೆ ನಾನು?... ತಬ್ಬಿಬ್ಬಾಗಿಯೇ ಎಲ್ಲವನ್ನೂ ವಿತರಿಸಿದರು, ಮ್ಯಾನೇಜರ್ ಎಲ್ಲರನ್ನೂ ಪರಿಚಯಿಸಿದರು, ವೃದ್ಧರೊಂದಿಗೆ ಹರಿ ಪ್ರೀತಿಯಿಂದ ಮಾತ ನಾಡಿಸುತ್ತಾ ಒಡಾಡಿದ, ಉಮಾಳ ನೆನಪಿನಲ್ಲೇ ಶೇಷಗಿರಿ ಮುಳುಗಿಹೋಗಿದ್ದರು.

ಮಧ್ಯಾಹ್ನದವರೆಗೂ ಅಲ್ಲಿಯೇ ಇದ್ದು ಎಲ್ಲವನ್ನೂ ನೋಡಿ ಅವರೊಂದಿಗೆ ಸಮಯ ಕಳೆದು ಊಟ ಮಾಡಿ ಹೊರಟಾಗ ಶೇಷಗಿರಿಯ ಮನಸ್ಸು ತುಂಬಿ ಬಂದಿತ್ತು. ಇದೇ ಮೊದಲ ಬಾರಿ ಅವರು ವೃದ್ಧಾಶ್ರಮವನ್ನು ನೋಡಿದ್ದು, ಅಲ್ಲಿ ನಮ್ಮವರೆನ್ನುವ ಜೀವಗಳನ್ನು ಬಿಟ್ಟರೆ ಬದುಕಲು ಬೇಕಾದ ಎಲ್ಲಾ ಅನುಕೂಲತೆಯಿತ್ತು. ಆದರೆ, ಅಷ್ಟು ಸಾಕೆ?..ಒಂಟಿ ಜೀವಗಳು ಯಾವುದೋ, ಯಾರದೋ ನಿರೀಕ್ಷೆಯಲ್ಲಿ ಕಾಯುವವರಂತೆ ಕಂಡಾಗ ಮನಸ್ಸು ಮೂಕವಾಗಿತ್ತು. ಮಗಳ ಮೇಲಿದ್ದ ಅಳಿಯನ ಪ್ರೇಮ ಕಂಡು ಹೆಮ್ಮೆಯೂ ಆಯಿತು.

ನಿಶಾಂತನ ಗೈರಿನಲ್ಲಿ ಹರಿ ಮಾವನ ಪೂರಾ ಜವಾಬ್ದಾರಿ ತಾನೇ ಹೊತ್ತಿದ್ದ, ಅವರ ಸಕಲ ಬೇಕು- ಬೇಡಗಳನ್ನು ಗಮನಿಸಿ, ಮುತುವರ್ಜಿಯಿಂದ ನೋಡಿಕೊಳ್ಳುತ್ತಿದ್ದ. ಮರುದಿನ ಅವರನ್ನು ಡಾಕ್ಟರ್ ಬಳಿ ಕರೆದೊಯ್ದು ಪೂರಾ ಆರೋಗ್ಯ ತಪಾಸಣೆ ಮಾಡಿಸಿ ಎಲ್ಲವೂ ನಾರ್ಮಲ್ ಎಂದಾಗ ತೃಪ್ತನಾಗಿದ್ದ. ಇದನ್ನೆಲ್ಲಾ ನೋಡಿ ಶೇಷಗಿರಿ ಒಳಗೊಳಗೇ ಅತ್ತರು, ಒಬ್ಬ ಮಗನಂತೆ ನಿಂತು ಹರಿ ಎಲ್ಲವನ್ನೂ ಮಾಡುತ್ತಿದ್ದ, ಹೃದಯದೊಳಗೆ ಅಗ್ನಿಕುಂಡವೇ ಇದ್ದರೂ ಹೊರಗೆ ತಣ್ಣಗೆ ಇದ್ದ.

ಮತ್ತದೇ ಸಂಕೋಚದಿಂದ ಶೇಷಗಿರಿ "ನಿಮಗೆ ನಾನು ಹೊರೆಯಾಗಿದ್ದೇನೆ.." ಎಂದಾಗ ಹರಿ ಅವರತ್ತ ನೋಡಿ, ಹಾಗೇನು ಇಲ್ಲ ಮಾವ..." ಎಂದುಬಿಟ್ಟಿದ್ದ. ರಾತ್ರಿ ಹರಿ ಮಾವನ ಬಳಿಯೇ ಕುರ್ಚಿ ಎಳೆದು ಹಾಕಿ ಕುಳಿತುಕೊಂಡ. ಹಾಗೆ ಎಂದೂ ಅವನು ಅವರೊಂದಿಗೆ ಕುಳಿತು ಮಾತಾಡಿದವನಲ್ಲ. ಅವರ ಕೈ ಹಿಡಿದು "ನನ್ನಿಂದ ನಿಮಗೆ ತೊಂದರೆ ಆಗುತ್ತಿದೆಯಾ ಮಾವ.." ಎಂದಾಗ ತಬ್ಬಿಬ್ಬಾದರು. ಶೇಷಗಿರಿ.

ನಿಮ್ಮಿಂದಾ... ಯಾಕೆ? ಯಾರು ಹಾಗೆಂದವರು?.."

ಮತ್ತೆ ನನ್ನ ನಿಶಾಂತನ್ನ ಬಿಟ್ಟು ಹೊರಟು ನಿಂತಿದ್ದೀರಿ.. ಉಮಾ ಹೋದ ತಕ್ಷಣ ನಾವು ಬೇರೆಯವರಾಗಿ ಬಿಟ್ವಾ?.. ಅಥವಾ ಎಲ್ಲವೂ ಮುಗಿದು ಹೋಯಿತಾ?.." ಎಂದ ಅವನ ದನಿಯಲ್ಲಿದ್ದ ನೋವು ಶೇಷಗಿರಿಗೆ ತಟ್ಟಿತು

ನಾನೆಲ್ಲಿಗೆ ಹೋಗುತ್ತಿದ್ದೀನಿ.." ಎಂದರು ಗೊಂದಲದಿಂದ. ನನ್ನ ನೋವಿನಲ್ಲಿ ನಾನಿದ್ದೆ ಮಾವ. ನಿಮ್ಮನ್ನು ಸರಿಯಾಗಿ ಗಮನಿಸಿಕೊಳ್ಳಲಿಲ್ಲ. ಆದರೆ ಇನ್ನು ಮುಂದೆ ಹಾಗಲ್ಲ, ನಿಮ್ಮನ್ನು ಸರಿಯಾಗಿ ನೋಡಿಕೊಳ್ಳುತ್ತೇನೆ.. ಆದರೆ ನಮ್ಮನ್ನು ಬಿಟ್ಟು ನೀವೆಲ್ಲಿಗೂ ಹೋಗಬೇಡಿ ಮಾವ. ಉಮಾ ನನ್ನನ್ನು ಕ್ಷಮಿಸೋದೇ ಇಲ್ಲಾ... ಅಷ್ಟಕ್ಕೂ ನಮಗೆ ನಿಮ್ಮನ್ನು ಬಿಟ್ಟು ಇರಲು ಆಗುವುದೂ ಇಲ್ಲ... ನೀವು ಹಿರಿಯರು ಈ ಮನೆಯಲ್ಲಿ ನೀವಿದ್ದರೆ ನನಗೆ ಉಮಾ ಇಲ್ಲೇ ಇದಾಳೆ ಅಂತ ಅನ್ನಿಸುತ್ತೆ.. ಮನಸ್ಸಿಗೆ ಸಮಾಧಾನ ಸಿಗುತ್ತೆ.." ಎಂದ ಹರಿಯ ಕಣ್ಣಾಲಿಗಳಲ್ಲಿ ನೀರಿನ ಹನಿಗಳು ತುಂಬಿದ್ದವು, ಶೇಷಗಿರಿಗೆ ಏನು ಮಾತಾಡಲೂ ಆಗುತ್ತಿಲ್ಲ, ನಾನೆಲ್ಲಿಗೆ ಹೋಗುತ್ತಿದ್ದೇನೆ. ಶಂಕರ ಇನ್ನೂ ಒಪ್ಪಿಲ್ಲ... ಬಹುಶ: ಒಪ್ಪುವುದೂ ಇಲ್ಲ ಹೀಗಿರುವಾಗ ಹರಿ ಏನು ಹೇಳುತ್ತಿದ್ದಾನೆ, ಗೊಂದಲವಾಯಿತು.

"ನಾನಿರಲಿ .. ನಿಶಾಂತ ನಿಮ್ಮನ್ನು ಬಿಟ್ಟು ಇರಲಾರ ಮಾವ, ಉಮಾಳನ್ನು ನಿಮ್ಮಲ್ಲಿ ಅವನು ನೋಡುತ್ತಿದ್ದಾನೆ.. ಅವನು ತುಂಬಾ ಮನಸ್ಸಿಗೆ ಹಚ್ಚಿಕೊಂಡಿದ್ದಾನೆ...ಅವನಿಗೆ ಶಾಕ್ ಆಗುತ್ತೆ..." ಹರಿ ಹೇಳುತ್ತಿದ್ದ

ಇಲ್ಲ ಹರಿ...ಅಷ್ಟಕ್ಕೂ ನಾನೆಲ್ಲಿಗೆ ಹೋಗಲಿ.." ಎಂದರು.

ಎರಡು ದಿನದ ಹಿಂದೆ ಶಂಕು ಮಾವ ಫೋನ್ ಮಾಡಿ ನೀವು ಅಲ್ಲಿಗೆ ಬರುತ್ತೀನಿ ಎಂದ ವಿಷಯ ಹೇಳಿದರು.. ಇನ್ನೊಂದೆರಡು ದಿನಗಳಲ್ಲಿ ನಿಮ್ಮನ್ನು ಬಂದು ಕರೆದು ಕೊಂಡು ಹೋಗುತ್ತೀನಿ ಎಂದರು... ಇದನ್ನು ಕೇಳಿದಾಗಿನಿಂದ ನನಗೆ ತುಂಬಾ ನೋವಾಗುತ್ತಿದೆ ಮಾವ... ನಮ್ಮನ್ನು ಬಿಟ್ಟು ಹೋಗುವ ಮನಸ್ಸು ಹೇಗೆ ಮಾಡಿದಿರಿ ನೀವು.."

ಶೇಷಗಿರಿಗೆ ಕರೆಂಟ್ ಹೊಡೆದಂತಾಯಿತು, ಹರಿ ಮತ್ತೆ ಹೇಳಿದ


"ಪ್ಲೀಸ್ ಮಾವ... ಆ ತರಹ ಯೋಚನೆ ಮಾಡಬೇಡಿ, ಇದು ನಿಮ್ಮದೇ ಮನೆ. ನೀವಿಲ್ಲೇ ನಮ್ಮ ಜೊತೆಯಲ್ಲಿ ಇರಬೇಕು... ಉಮಾ ಇದ್ದ ಮನೆ ಬಿಟ್ಟು ಹೋಗಲು ನಿಮಗೆ ಮನಸ್ಸಾಗುತ್ತದೆಯಾ?... ನಿಮ್ಮ ಸಂಕೋಚ ಅರ್ಥವಾಗುತ್ತದೆ. ನನ್ನನ್ನು ಅಳಿಯನಾಗಲ್ಲ ಮಗನಾಗಿ ನೋಡಿದರೆ ಯಾವ ಸಂಕೋಚವಾಗಲ್ಲ. ನಾನು ಶಂಕರ ಮಾವನಿಗೆ, ಅವರನ್ನು ಯಾರ ಮನೆಗೂ ಕಳಿಸಲ್ಲ, ಅವರ ಮಗನ ಮನೆಯಲ್ಲಿ ಅವರಿರುತ್ತಾರೆ ಎಂದು ಬಿಟ್ಟೆ..' ಎಂದ ಹರಿ ಹೃದಯದಾಳದ ಮಾತುಗಳನ್ನು ಹೇಳಿದಾಗ ಶೇಷಗಿರಿ ಸ್ತಬ್ಧರಾದರು. ಪ್ರೀತಿಯ ಪ್ರತಿಫಲನ ಹರಿಯ ಕಣ್ಣಲ್ಲಿ ಕಂಡಿತು. ತನ್ನ ಯೋಚನೆಗಳಲ್ಲೇ ತಪ್ಪಿದೆ ಎಂಬ ಭಾವನೆಯಿಂದ ಮನಸ್ಸಿಗೆ ಇರಿಸುಮುರುಸಾದರೂ ಹರಿಯ ಹೃದಯದ ಪ್ರೀತಿಗೆ ಸೋಲದೆ ಇರಲಾಗಲಿಲ್ಲ. ಹೌದು, ಇದು ನನ್ನ ಮಗನ ಮನೆ.. ಇಲ್ಲಿ ಬಿಟ್ಟು ನಾನೆಲ್ಲಿಗೋ ಹೇಗೆ ಹೋಗಲಿ?... ಯಾಕೆ ಹೋಗಲಿ?..ನನ್ನ ನೆಮ್ಮದಿಯ ತಾಣವಿದು... ಉಮಾಳೆಲ್ಲೋ ಒಳಗಿದ್ದಾಳೆ..ನನ್ನ ಬಿಟ್ಟು ಎಲ್ಲೂ ಹೋಗಿಲ್ಲ.... ಮಗಳು ಇಲ್ಲೇ ಇದ್ದಾಳೆ..

ಮನಸ್ಸು ಬಿರುಗಾಳಿಯಿಂದ ಪ್ರಶಾಂತತೆಗೆ ಜಾರಿತು.. ಆಗಲೇ ಉಮಾಳ ಫೋಟೋ ಮೇಲಿದ್ದ ಮಲ್ಲಿಗೆಯ ಹಾರ ಜಾರಿ ಕೆಳಗೆ ಬಿತ್ತು, ಅದನ್ನು ಎತ್ತಿಕೊಳ್ಳುತ್ತಾ ಹರಿ," ನೋಡಿ ಉಮಾ ಕೂಡಾ ಇದನ್ನೇ ಹೇಳುತ್ತಿದ್ದಾಳೆ..." ಎಂದಾಗ ಶೇಷಗಿರಿ ಮುಖದಲ್ಲಿ ತೆಳು ನಗು ಹರಡಿತು,

ಇಲ್ಲ ಹರಿ ಈ ಮನೆಯನ್ನು, ನಿಮ್ಮನ್ನೆಲ್ಲಾ ಬಿಟ್ಟು ನನಗೆ ಇರಲು ಆಗುತ್ತದಾ... ನನ್ನ ಉಳಿದ ದಿನಗಳು ಇಲ್ಲೇ..." ಎಂದರು,

ತಾತಾ... ನಾನು ಬಂದೆ.. ಹೇಗಿದ್ದಿರಿ... ನಿಮ್ಮ ನೆನಪು ತುಂಬಾ ಬರುತ್ತಿತ್ತು...." ಮಾತಾಡುತ್ತಾ ತೆರೆದ ಬಾಗಿಲಿನಿಂದ ನಿಶಾಂತ ಒಳಬರುತ್ತಿದ್ದ.. ಕತ್ತಲು ಸರಿದು ಬೆಳಕು ಒಳ ಹರಿಯಿತು....

ವಾರ ಭವಿಷ್ಯ



8.05.2022 ರಿಂದ 14.05.2022

ಈ ವಾರದಲ್ಲಿ ಗ್ರಹಗಳ ರಾಶಿ ಸಂಚಾರ

ರವಿ-ಮೇಷ, ವೃಷಭ, ಚಂದ್ರ-ಕಟಕ, ಸಿಂಹ, ಕನ್ಯಾ, ತುಲಾ ಕುಜ-ಕುಂಭ, ಬುಧ-ಮೇಷ, ಗುರು-ಮೀನ, ಶುಕ್ರ-ಮೀನ, ಶನಿ- ಕುಂಭ, ರಾಹು-ಮೇಷ ಮತ್ತು ಕೇತು-ತುಲಾ.



ವಿ.ಕೇಶವಮೂರ್ತಿ
ಜ್ಯೋತಿಷ್ಯ ವಿದ್ವಾಂಸರು, 'ಭಾವಸಾರ ರತ್ನ' 'ಚೈತನ್ಯಶ್ರೀ ಪ್ರಶಸ್ತಿ ಪುರಸ್ಕೃತರು". ಕಲ್ಪದ್ರುಮ ಜ್ಯೋತಿಷ್ಯ ಅಧ್ಯಯನ ಕೇಂದ್ರ, ವಿಳಾಸ : 533, 6ನೇ ಕ್ರಾಸ್, ಬೋಗಾದಿ ಉತ್ತರ 2ನೇ ಹಂತ, ಮೈಸೂರು ನಿರ್ಮಿತಿ ಕೇಂದ್ರ ಹತ್ತಿರ, ಮೈಸೂರು.
ಮೊ.9740973224, 9739548720

ಮೇಷ (ಚು.ಚೆ.ಲ.ಲಿ.ಲು.ಲೆ.ಲೋ.ಅ)
ವಾರದ ಆದಿಗೆ ಚಂದ್ರಗ್ರಹ ಸಂಚಾರದಿಂದ ಧನಾಗಮನ, ಹರ್ಷದ ವಾತಾವರಣ. ಆಪ್ತ ಬಂಧು-ಮಿತ್ರರ ಮಿಲನ. ಜನ್ಮ ರಾಹು ಇರುವಾಗ ಯಾವ ವಿಷಯದ ಬಗ್ಗೆಯೂ ಅನಾವಶ್ಯಕ ಖರ್ಚುಗಳು, ಅಪ್ರಿಯವಾದ ಸುದ್ದಿ ಕೇಳಬೇಕಾದೀತು. ಪುತ್ರ-ಪುತ್ರಿಯರ ಆಶೋತ್ತರಗಳಿಗೆ ಸಕಾರಾತ್ಮಕವಾಗಿ ಸ್ಪಂದಿಸಿ. ಮಠಾಧೀಶರೊಬ್ಬರ ಮಾರ್ಗದರ್ಶನದಿಂದ ಸನ್ಮತಿ ಪ್ರಾಪ್ತಿ
- ಶ್ರೀ ಸುಬ್ರಹ್ಮಣ್ಯ ಸ್ತುತಿ. ಶುಭಸಂಖ್ಯೆ-4.

ತುಲಾ (ರ.ರಿ.ರು.ರೆ.ರೊ.ತ.ತಿ.ತು.ತೆ)
ದೈನಂದಿನ ಉದ್ಯೋಗ, ವ್ಯವಹಾರಗಳು ನಿಯಮಿತವಾಗಿ ಸಾಗುವವು. ಮನೆಗೆ ನೆಂಟರಿಷ್ಟರ ಆಗಮನ, ಅವರ ಆದರಾತಿಥ್ಯಕ್ಕೆ ಧಾರಾಳ ಧನವ್ಯಯ. ಸಾಮಾಜಿಕ ಕಾರ್ಯಕರ್ತರು ಗೌರವಾದರಗಳಿಗೆ ಭಾಜನರಾಗುವಿರಿ. ಸಾರಾಸಗಟಾಗಿ ಎಲ್ಲರನ್ನೂ ನಂಬಿ ಮೋಸ ಹೋಗದಿರಿ. ಸಾಲ-ಸೋಲಗಳು ತೀರದೆ ಚಿಂತೆ ಆವರಿಸುವುದು. ನಿಮ್ಮ ಆರೋಗ್ಯದಲ್ಲಿ ಏರು-ಪೇರುಗಳು ಉಂಟಾದೀತು. ವಾರದ ಕಡೆಗೆ ಮಠ-ಮಾನ್ಯಗಳ ಭೇಟಿಯಿಂದ ಧನ್ಯತಾಭಾವ. - ನಿಮ್ಮ ಕುಲದೇವತಾ ದರ್ಶನ, ಶುಭಸಂಖ್ಯೆ-9

ವೃಷಭ (ಇ.ಉ.ಎ.ಒ.ವ.ವಿ.ವು.ವೆ.ವೊ)
ಮನೆಯಲ್ಲಿ ಸಂತಸದ ವಾತಾವರಣ, ಶುಭವಾರ್ತೆ ಬಂದು ಪುಳಕಿತರಾಗುವಿರಿ. ಡೈರಿ, ರೆಡಿಮೇಡ್ ವರ್ತಕರಿಗೆ ಅಧಿಕವಾದ ಲಾಭವಾಗುವುದು. ವಾರಮಧ್ಯೆ ಉತ್ತಮ ಆಹಾರ- ವಿಹಾರಗಳು. ಹಲವರಿಗೆ ಮಧುಚಂದಕ್ಕೆ ಸಜ್ಜಾಗುವ ಯೋಗವಿದೆ. ಆಸ್ತಿ ವಿಚಾರಗಳನ್ನು ಸಹೋದರರು ಸೌಹಾರ್ದಯುತವಾದ ವಾತಾವರಣದಲ್ಲಿ ಇತ್ಯರ್ಥ ಮಾಡಿಕೊಳ್ಳಿ. ವಾರಾಂತ್ಯಕ್ಕೆ ಕುಟುಂಬ ಸಮೇತ ಪುಣ್ಯಕ್ಷೇತ್ರ ಸಂದರ್ಶನ.
- ಶ್ರೀದೇವೀ ಉಪಾಸನೆ, ಶುಭಸಂಖ್ಯೆ-8.

ವೃಶ್ಚಿಕ (ತೊ.ನ.ನಿ.ನು.ನೆ.ನೊ.ಯ.ಯಿ.ಯು)
ಗುರುಬಲ ಬಂದಿದೆ. ನೂತನ ಯೋಜನೆಗಳ ಸಾಕಾರಕ್ಕೆ ಹೊಸ ಹುಮ್ಮಸ್ಸಿನಿಂದ ಪ್ರಯತ್ನಿಸುವಿರಿ. ಗೃಹ-ನಿವೇಶನ ಹೊಂದುವ ನಿಮ್ಮ ಅಭಿಲಾಷೆಗೆ ಗ್ರಹಗಳು ಪೂರಕವಾಗಿದೆ. ನೂತನ ಒಡವೆ ವಸ್ತು ಖರೀದಿಸುವಿರಿ. ಫರ್ನಿಚರ್ ವ್ಯಾಪಾರಿಗಳಿಗೆ ಹೇರಳ ಧನಲಾಭವಾಗುವುದು. ವಿವಾಹ ಯೋಗ್ಯರಿಗೆ ಕಂಕಣಬಲ ಕೂಡಿಬರುವುದು. ಅಶುಭ ಶನಿದೇವನಿಂದಾಗಿ ಸಾಲಕ್ಕೆ ಕೈ ಚಾಚಬೇಕಾದೀತು. ಆತುರದ ವಾಹನ ಸಂಚಾರದಿಂದ ತೊಂದರೆ.
- ಶ್ರೀನೃಸಿಂಹಸ್ವಾಮಿ ದರ್ಶನ, ಶುಭಸಂಖ್ಯೆ-4.

ಮಿಥುನ (ಕ.ಕಿ.ಕು.ಘ.ಙ.ಛ.ಕೆ.ಕೊ.ಹ)
ಸಪ್ತಾಹದ ಆದಿಗೆ ಮಿತ್ರರ ಭೇಟಿಯೂ, ಮೃಷ್ಟಾನ್ನ ಭೋಜನ, ಶಯನ ಸುಖಗಳೂ ದೊರೆಯಲಿದೆ. ನೀವು ಇಷ್ಟಪಟ್ಟದ್ದು ತಾನೇತಾನಾಗಿ ದೊರೆಯುವುದು. ನಿಮ್ಮ ಆರೋಗ್ಯದಲ್ಲಿ ಸುಧಾರಣೆಯನ್ನು ಕಾಣುವಿರಿ. ಆಧ್ಯಾತ್ಮ ವಿಚಾರಗಳಲ್ಲಿ ಆಸಕ್ತಿ ಉಂಟಾಗುವುದು. ದಾನ-ಧರ್ಮ ಬುದ್ಧಿಯಿಂದ ಪ್ರಸಿದ್ಧಿಗೆ ಬರುವಿರಿ. ಮನೆಯಲ್ಲಿ ಹಿರಿಯರೊಬ್ಬರ ಆರೋಗ್ಯ ಕೆಡಬಹುದು. ಶಸ್ತ್ರಯಂತ್ರಗಳನ್ನು ಬಳಸುವಾಗ ಜಾಗ್ರತೆಯಿಂದ ಇರಿ. - ಶ್ರೀಕೃಷ್ಣಾಷ್ಟಕ ಪಠಿಸಿ, ಶುಭಸಂಖ್ಯೆ-7.

ಧನುಸ್ಸು (ಯೆ.ಯೊ.ಬ.ಬಿ.ಬು.ಧ.ಭ.ಢ.ಬೆ)
ಈ ವಾರ ಪೂರ್ವಭಾವಿ ತಯಾರಿ ಇಲ್ಲದೆ ಯಾವ ಕೆಲಸವನ್ನೂ ಮಾಡಬೇಡಿ. ಹಲವು ಮೂಲಗಳಿಂದ ಧನ ಸಂಚಯವಾದರೂ ಮನಸ್ಸಿನ ಅಸ್ಥಿರತೆ ನಿವಾರಣೆಯಾಗದು. ವಿದ್ಯಾ ವ್ಯಾಸಂಗಗಳಲ್ಲಿ ಗೌರವ, ಪ್ರಶಸ್ತಿ ಪ್ರಾಪ್ತಿ. ಹೈನುಗಾರಿಕೆ, ಹೋಟೇಲ್ ಉದ್ಯಮದಾರರಿಗೆ ಉತ್ತಮ ಧನಲಾಭವಾಗುವುದು. ರಾಹು-ಕೇತು ಪ್ರಭಾವದಿಂದ ಉದ್ವೇಗಕ್ಕೆ ಒಳಗಾಗುವ ಸಾಧ್ಯತೆ ಇದ್ದು, ಸಮಾಧಾನ ಚಿತ್ತರಾಗಿ ವ್ಯವಹರಿಸಿರಿ. ಪಿತ್ತ ಜನಿತ ಕಾಯಿಲೆ ಕಾಡಬಹುದು. -ಶ್ರೀ ಔದುಂಬರ ವೃಕ್ಷ ಪ್ರದಕ್ಷಿಣೆ, ಶುಭಸಂಖ್ಯೆ-3.

ಕಟಕ (ಹಿ.ಹು.ಹೆ.ಹೊ.ಡ.ಡಿ.ಡು)
ವಾರದಾರಂಭಕ್ಕೆ ಮನೋಹರ್ಷ, ಶುಭ ವಾರ್ತೆಯ ಓಲೆಯೊಂದು ಬರಲಿದೆ. ಮಂಥನ ಮಾಡದೆ ಅಮೃತ ದೊರೆಯದು. ಗುರುಬಲವಿದೆ. ವಧು-ವರ ಅನ್ವೇಷಣೆ ಫಲಪ್ರದವಾಗುವುದು. ಅಧ್ಯಾಪಕ ವರ್ಗದವರಿಗೆ ಪುರಸ್ಕಾರ, ಸನ್ಮಾನಗಳೂ ದೊರೆಯುತ್ತವೆ. ಉದ್ಯೋಗಾಕಾಂಕ್ಷಿಗಳಿಗೆ ಕ್ಯಾಂಪಸ್ ಸೆಲೆಕ್ಷನ್ ಆದೀತು. ಅಷ್ಟಮ ಶನಿಯ ಕಾರಣ ತನ್ನವರಲ್ಲಿ ವೈಮನಸ್ಸುಗಳು ಉಂಟಾಗುವುದು. ವಿಕೋಪಕ್ಕೆ ಹೋಗದಂತೆ ತಾಳ್ಮೆ ವಹಿಸಿ. - ಶ್ರೀ ರಾಘವೇಂದ್ರರ ಸೇವೆ, ಶುಭಸಂಖ್ಯೆ-3.

ಮಕರ (ಬೊ.ಜ.ಜಿ.ಶಿ.ಶು.ಶೆ.ಶೊ.ಗ.ಗಿ.)
ಗ್ರಹಗಳು ನಿಮ್ಮನ್ನು ಆತುರದ ನಿರ್ಧಾರಕ್ಕೆ ಪ್ರೇರೇಪಿಸಬಲ್ಲದು, ಆದರೆ, ಅದು ಸಲ್ಲದು. ಪ್ರತಿಫಲವಿಲ್ಲದ ಓಡಾಟಗಳಿಂದ ದೇಯಾಯಾಸಗುವುದು. ತಿಳಿಯದ ದಂಧೆ ಮಾಡಿ ಕೈ ಸುಟ್ಟುಕೊಳ್ಳುವಿರಿ. ವಾರಮಧ್ಯೆ ಆಪ್ತೇಷ್ಟರ ಒಡನಾಟದಿಂದ ಮನಸ್ಸು ಮುದಗೊಳ್ಳುವುದು. ಜಾತ್ರಾ ಉತ್ಸವಗಳಲ್ಲಿ ಭಾಗಿಯಾಗುವುದರಿಂದ ಧನ್ಯತಾಭಾವ. ಯಾವುದೇ ಒಪ್ಪಂದ ಒಡಂಬಡಿಕೆಗಳಿಗೆ ಸಹಿ ಮಾಡುವ ಮೊದಲು ವಕೀಲರ ಸಲಹೆ ಪಡೆಯಿರಿ.
- ಶಿವ ಪಂಚಾಕ್ಷರಿ ಜಪಿಸಿ, ಶುಭಸಂಖ್ಯೆ-2.

ಸಿಂಹ (ಮ.ಮಿ.ಮು.ಮೆ.ಮೊ.ಟ.ಟಿ.ಟು.ಟೆ)
ನಡೆಯಬೇಕಿದ್ದ ಕಾರ್ಯಕಲಾಪಗಳು ಅಲ್ಲಲ್ಲೇ ನಿಂತು ಮನಸ್ಸಿಗೆ ಬೇಸರವಾಗುವುದು. ಸಂಚಯವಾದ ಹಣ ಕ್ಷಣ ಮಾತ್ರದಲ್ಲಿ ಖಾಲಿಯಾಗುವುದು. ಆದಾಯ-ವೆಚ್ಚಗಳನ್ನು ಸರಿದೂಗಿಸಲು ಹೆಣಗಾಡುವಿರಿ. ವಾರಮಧ್ಯೆ ಪ್ರೀತಿ-ಪ್ರಣಯ ವಿಷಯಗಳಲ್ಲಿ ಮಧುರ ಕ್ಷಣಗಳನ್ನು ಅನುಭವಿಸುವಿರಿ. ನಿಮ್ಮ ಎದುರು ಪಾರ್ಟಿಯವರು ಮಿತ್ರತ್ವ ಬಯಸಿ ಬರುವರು. ವಾರಾಂತ್ಯಕ್ಕೆ ನಡೆಯುವ ಸಂತೋಷ ಕೂಟಗಳಲ್ಲಿ ಸಂಯಮ ಪಾಲಿಸಿ. - ಶ್ರೀ ದತ್ತಗುರು ಪ್ರಾರ್ಥನೆ, ಶುಭಸಂಖ್ಯೆ-2.

ಕುಂಭ (ಗು.ಗೆ.ಗೊ.ಸ.ಸಿ.ಸು.ಸೆ.ಸೊ.ದ)
ಕೈಗೊಂಡ ಕೆಲಸ ಕಾರ್ಯಗಳಲ್ಲಿ ವಿಜಯ ಪತಾಕೆ ಹಾಗೂ ಮನಸ್ಸಿಗೆ ಹರ್ಷ ತರುವ ಪ್ರಸಂಗಗಳೊಂದಿಗೆ ವಾರಕ್ಕೆ ಸ್ವಾಗತ. ಮಹಿಳಾ ಮಣಿಯರು ಅಲಂಕಾರಿಕ ವಸ್ತುಗಳಿಗೆ ಹೆಚ್ಚಿನ ಹಣ ವ್ಯಯಿಸುವರು. ನಿಮ್ಮ ಉನ್ನತ ಧ್ಯೇಯಗಳಿಗೆ ವಿಶ್ವಾಸ ಪಾತ್ರರ ಮಾರ್ಗದರ್ಶನ ದೊರೆಯುವುದು. ರಾಶಿ ಸ್ಥಿತ ಕುಜನಿಂದ ಸಹೋದರರಲ್ಲಿ ಒಡಕು ಉಂಟಾಗುವುದು. 'ಮಾತೇ ಮುತ್ತು' ದುಡುಕು ಮಾತನಾಡದಿರಿ. ಮನಃಶಾಂತಿಗೆ ಮನೆದೇವರ ದರ್ಶನ.
- ಶ್ರೀ ಶಮೀ ವೃಕ್ಷ ಪ್ರದಕ್ಷಿಣೆ, ಶುಭಸಂಖ್ಯೆ-5.

ಕನ್ಯಾ (ಟೊ.ಪ.ಪಿ.ಪು.ಷ.ಣ.ಠ.ಪೆ.ಪೊ)
ವಾರದ ಪ್ರಾರಂಭಕ್ಕೆ ಧನ-ಧಾನ್ಯಾದಿ ಸಂಗ್ರಹ, ಬಂಗಾರ ವ್ಯಾಪಾರಿಗಳಿಗೆ, ಅಕ್ಕಸಾಲಿಗರಿಗೆ ಹೇರಳ ಧನಲಾಭ. ಹೊಸ ವ್ಯವಹಾರ ಆರಂಭಿಸಲು ಸಮಯ ಸೂಕ್ತವಾಗಿದೆ. ಬ್ಯಾಂಕ್ ಸಾಲಕ್ಕೂ ಪ್ರಯತ್ನಿಸಬಹುದು. ಸರ್ಕಾರಿ ನೌಕರರಿಗೆ ವರ್ಗಸಹಿತ ಪ್ರಮೋಷನ್ ದೊರೆಯಬಹುದು. ಷಷ್ಠಿ ಶನಿಯ ಕಾರಣ ತಂದೆ-ಮಕ್ಕಳಲ್ಲಿ ವಿರಸ ಉಂಟಾದೀತು. ರಾಜಿ ಸೂತ್ರ ಸದಾ ಒಳ್ಳೆಯದು. ವಾರಾಂತ್ಯಕ್ಕೆ ಗುರುಜನರ ದರ್ಶನ, ಆಶೀರ್ವಾದ.
- ಶ್ರೀವಿಷ್ಣು ನಾಮ ಸ್ಮರಣೆ, ಶುಭಸಂಖ್ಯೆ-1.

ಮೀನ (ದಿ.ದು.ಖ.ಝ.ಥ.ತೆ.ದೊ.ಚ.ಚಿ)
ನೀವು ಇಷ್ಟಪಟ್ಟಿದನ್ನು ಪಡೆಯಲು ಅವಿರತವಾಗಿ ಶ್ರಮಿಸಬೇಕಿದೆ. ಹಾಗೆ ಬಂದ ಹಣ ಹೀಗೆ ಖರ್ಚಾಯಿತೆಂದು ಯೋಚನೆಬೇಡ. ಸದ್ಯಕ್ಕೆ ಯಾವುದೇ ರೀತಿಯಲ್ಲಿ ದೊಡ್ಡ ಬಂಡವಾಳ ಹೂಡಲು ಗುರುಬಲವಿಲ್ಲ. ತೆರಿಗೆ ಅಧಿಕಾರಿಗಳಿಂದ ತೊಂದರೆ ಉಂಟಾಗಬಹುದು. ದೀರ್ಘ ಪ್ರಯಾಣಗಳನ್ನು ಮುಂದೂಡಿ. ಡ್ರೈವಿಂಗ್ ಮಾಡುವಾಗ ಮನೆಯಲ್ಲಿ ನಿಮ್ಮನ್ನು ಪ್ರೀತಿಸುವವರು ಇದ್ದಾರೆ ಎಂಬ ನೆನಪಿರಲಿ.
- ಶ್ರೀ ಗುರು ಚರಣ ಬಿಡದಿರಿ, ಶುಭಸಂಖ್ಯೆ-7.

ಮೈಸೂರು ಮಿತ್ರ ಭಾನುವಾರ 8 ಮೇ 2022

ಅರಕೆರೆ ಶಾಲಾ ಕಾಂಪೌಂಡ್ ನಿರ್ಮಾಣಕ್ಕೆ ಪ್ರಭಾವಿಗಳ ಅಡ್ಡಗಾಲು: ಶಾಸಕ ರವೀಂದ್ರ ಆರೋಪ

ಮಂಡ್ಯ,ಮೇ.7(ಮೋಹನ್‌ರಾಜ್)–ಶ್ರೀರಂಗಪಟ್ಟಣ ವಿಧಾನಸಭಾ ಕ್ಷೇತ್ರದ ಅರೆಕೆರೆ ಗ್ರಾಮದ ಶಾಲಾ ಕಾಂಪೌಂಡ್ ನಿರ್ಮಾಣಕ್ಕೆ ಮಾಜಿ ಶಾಸಕ ರಮೇಶ್ ಬಂಡಿಸಿದ್ದೇಗೌಡ, ಪ್ರಭಾವಿ ಸಚಿವರೊಬ್ಬರು ಹಾಗೂ ಜಿಲ್ಲಾಧಿಕಾರಿ ಅಡ್ಡಗಾಲು ಹಾಕುತ್ತಿದ್ದು, ಇದರಿಂದ ಶಾಲೆಯ ವಿದ್ಯಾರ್ಥಿಗಳಿಗೆ ಸಮಸ್ಯೆಯಾಗುತ್ತಿದೆ ಎಂದು ಶಾಸಕ ರವೀಂದ್ರಶ್ರೀಕಂಠಯ್ಯ ಆರೋಪಿಸಿದರು.

ಶನಿವಾರ ನಗರದ ಪತ್ರಿಕಾ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಶಾಲಾ ಕಟ್ಟಡ ಶಿಥಿಲಗೊಂಡಿದ್ದು, ಮಳೆಗಾಲದಲ್ಲಿ ಶಾಲೆಯ ಕಾಂಪೌಂಡ್ ಉರುಳಿ ಬಿದ್ದಿತ್ತು ನಂತರ ಬಂದ ಶಾಸಕರು ನಿರ್ಲಕ್ಷ್ಯ ಮಾಡುತ್ತಾ ಬಂದಿದ್ದರು. ಆದರೆ ನನ್ನ ಅವಧಿಯಲ್ಲಿ ಸಂಯುಕ್ತ ಅನುದಾನ 19 ಲಕ್ಷ ರೂ. ವೆಚ್ಚದಲ್ಲಿ ಕಾಂಪೌಂಡ್, ಶಿಥಿಲಗೊಂಡ ಕೊಠಡಿ ದುರಸ್ತಿ ಮಾಡಲು ಮುಂದಾಗಿದ್ದಾಗ ಮಾಜಿ ಶಾಸಕ ರಮೇಶ್ ಬಂಡಿಸಿದ್ದೇಗೌಡ ಸೇರಿದಂತೆ ಬೆಂಬಲಿಗರು ತಡೆಯೊಡ್ಡಿದ್ದಾರೆ ಎಂದು ಆರೋಪಿಸಿದರು.



ಕಾಂಪೌಂಡ್ ಪಕ್ಕದಲ್ಲಿಯೇ ಇರುವ ಮಾಜಿ ಶಾಸಕ ರಮೇಶ್ ಬಂಡಿಸಿದ್ದೇಗೌಡರು ಗ್ಯಾಸ್ ಅಂಗಡಿಗೆ ಶಾಲಾ ಕಾಂಪೌಂಡ್ ಜಾಗದಲ್ಲಿಯೇ ರಸ್ತೆ ಮಾಡಲು ಮುಂದಾಗಿದ್ದಾರೆ. ಶಾಲಾ ಕಾಂಪೌಂಡ್ ಸೇರಿದಂತೆ ದುರಸ್ತಿ ಕಾಮಗಾರಿಗಳಿಗೆ ಬಿಡುಗಡೆಯಾಗಿದ್ದ ಸಂಯುಕ್ತ ಅನುದಾನ ಕಳೆದ ಮಾ. 31ಕ್ಕೆ ವಾಪಸಾಗಿದೆ. ಇದಕ್ಕೆ ಜಿಲ್ಲಾಧಿಕಾರಿ ನೇರ ಕಾರಣರಾಗಿದ್ದಾರೆ. ಪ್ರಕರಣದಲ್ಲಿ ಮಂತ್ರಿಯೊಬ್ಬರ ಕೈವಾಡವಿದೆ ಮಾಜಿ ಶಾಸಕ ಹಾಗೂ ಮಂತ್ರಿಯೊಬ್ಬರ ಮಾತನ್ನು ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕೇಳುತ್ತಿದ್ದಾರೆ. ಸರ್ಕಾರಿ ಆಸ್ತಿ ಉಳಿಸಿಕೊಳ್ಳುವ ಬದಲು ಅಕ್ರಮಕ್ಕೆ ಸಹಕಾರ ನೀಡುತ್ತಿದ್ದಾರೆ. ಶಿಕ್ಷಣ ಹಾಗೂ ಕಾನೂನು ಸಚಿವರ ಮೂಲಕವೂ ಮನದಟ್ಟು ಮಾಡಿದಾಗ, ಹೈಕೋರ್ಟ್ ತಡೆಯಾಜ್ಞೆ ಇದೆ ಎಂದು ಜಿಲ್ಲಾಧಿಕಾರಿ ಸಮಜಾಯಿಷಿ ನೀಡುತ್ತಾರೆ. ಆದರೆ ತಡೆಯಾಜ್ಞೆ ಮುಗಿದಿದ್ದರೂ ಜಿಲ್ಲಾಧಿಕಾರಿ ಅದರ ಬಗ್ಗೆ ನನಗೆ ಮಾಹಿತಿ ಇಲ್ಲ ಎಂದು ಸಬೂಬು ಹೇಳುತ್ತಿದ್ದಾರೆ ಎಂದು ದೂರಿದರು.

ಹೈಕೋರ್ಟ್‌ನಲ್ಲಿ ಮಾಜಿ ಶಾಸಕ ರಮೇಶ್ ಬಂಡಿಸಿದ್ದೇಗೌಡ ಅವರು ತಡೆಯಾಜ್ಞೆ ತಂದಿದ್ದರು. ಆ ತಡೆಯಾಜ್ಞೆಯ ದಿನಾಂಕ ಮುಗಿದಿದೆ. ಇದರ ಬಗ್ಗೆ ಜಿಲ್ಲಾಧಿಕಾರಿಗೂ ಮಾಹಿತಿ ಇದೆ. ಹಿರಿಯ ವಕೀಲರ ಮೂಲಕ ತಿಳಿಸಿದರೂ ಯಾವುದೇ ಕ್ರಮ ಕೈಗೊಳ್ಳುತ್ತಿಲ್ಲ. ತಹಸೀಲ್ದಾರ್, ಬಿಇಓ ಸೇರಿದಂತೆ ಅಧಿಕಾರಿಗಳ ಸಭೆ ನಡೆಸಿ ತಡೆಯಾಜ್ಞೆ ಮುಂದುವರೆದಿದೆಯೋ ಅಥವಾ ಇಲ್ಲವೋ ಎಂಬುದು ಹೈಕೋರ್ಟ್‌ನಿಂದ ನಮಗೆ ಯಾವುದೇ ಮಾಹಿತಿ ಬಂದಿಲ್ಲ. ಹೈಕೋರ್ಟ್‌ನಿಂದ ಮಾಹಿತಿ ಬರುವವರೆಗೂ ಯಾವುದೇ ನಿರ್ಧಾರ ಕೈಗೊಳ್ಳಲು ಸಾಧ್ಯವಿಲ್ಲ ಎಂದು ನಿರ್ಣಯ ಮಾಡಿ ಅಧಿಕಾರಿಗಳು ಸಹಿ ಮಾಡಿ ತಡೆ ಹಿಡಿದಿದ್ದಾರೆ ಎಂದರು.

ಹೆಚ್‌ಡಿಕೆಗೆ ಯಾವ ವಿಚಾರದಲ್ಲೂ ಸ್ಪಷ್ಟತೆ ಇಲ್ಲ

ಇಂಧನ ಸಚಿವ ವಿ.ಸುನಿಲ್ ಕುಮಾರ್ ಟೀಕೆ

ಶ್ರೀರಂಗಪಟ್ಟಣ,ಮೇ 7(ವಿನಯ್ ಕಾರೇಕುರ)–ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಅವರ ಯಾವ ವಿಚಾರವು ಈವರೆಗೂ ಸ್ಪಷ್ಟವಾಗಿಲ್ಲ. ಯಾರಿಗೂ ಅರ್ಥವೂ ಆಗಿಲ್ಲ ಎಂದು ಇಂಧನ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವ ವಿ.ಸುನಿಲ್ ಕುಮಾರ್ ತಿಳಿಸಿದ್ದಾರೆ.

ತಾಲೂಕಿನ ಗಂಜಾಂನ ನಿಮಿಷಾಂಬ ದೇವಾಲಯಕ್ಕೆ ಪತ್ನಿ ಪ್ರಿಯಾಂಕಾ ಸೇರಿದಂತೆ ಕುಟುಂಬ ಸಮೇತ ಭೇಟಿ ನೀಡಿ ಪೂಜೆ ಸಲ್ಲಿಸಿದ ಸಚಿವರು, ಪಿಎಸ್‌ಐ ಹಗರಣದ ಕಿಂಗ್‌ಪಿನ್ ಹೆಸರು ಹೇಳಿದರೆ ಬಿಜೆಪಿ ಸರ್ಕಾರವೇ ಬಿದ್ದು ಹೋಗುತ್ತದೆ ಎಂಬ ಹೆಚ್‌ಡಿಕೆ ಹೇಳಿಕೆ ಕುರಿತು ಸುದ್ದಿಗಾರರಿಗೆ ಪ್ರತಿಕ್ರಿಯಿಸಿದರು.

ಕುಮಾರಸ್ವಾಮಿ ಯಾವ ವಿಚಾರವನ್ನು ಇಲ್ಲಿಯವರೆಗೆ ಸ್ಪಷ್ಟವಾಗಿ ಜನರ ಮುಂದೆ ಇಟ್ಟಿದ್ದಾರೆ ಹೇಳಿ? ಎಂದು ಮಾಧ್ಯಮದವರನ್ನೇ ಪ್ರಶ್ನಿಸಿದ ಅವರು, ಪಿಎಸ್‌ಐ ಹಗರಣದ ವಿಚಾರವನ್ನು ಸಾಕ್ಷ್ಯಾಧಾರ ಸಹಿತ ಸ್ಪಷ್ಟಪಡಿಸಲಿ. ಹಾಗೊಂದು ವೇಳೆ ಮಾಡಿದರೆ ನಮ್ಮ ಪಕ್ಷದ ವರಿಷ್ಠರು ಮುಂದಿನ ಕ್ರಮ ಕೈಗೊಳ್ಳಲಿದ್ದಾರೆ ಎಂದು ತಿರುಗೇಟು ನೀಡಿದರು.



ಕೇಂದ್ರದವರು ಮುಖ್ಯಮಂತ್ರಿ ಹುದ್ದೆಗೆ 2,500 ಕೋಟಿ ಹಣ ಕೇಳಿದ್ದರು ಎಂಬ ವಿಜಯಪುರ ಶಾಸಕ ಬಸನಗೌಡ ಪಾಟೀಲ ಯತ್ನಾಳ್ ಹೇಳಿಕೆಗೆ ಪ್ರತಿಕ್ರಿಯಿಸಿದ ಸಚಿವರು, ಬಿಜೆಪಿಯಲ್ಲಿ ಹಣ ಪಡೆದು ಮುಖ್ಯಮಂತ್ರಿ ಮಾಡುವ ಅನಿವಾರ್ಯತೆಯಿಲ್ಲ. ಅವರು ಯಾವ ಹಿನ್ನೆಲೆಯಲ್ಲಿ ಈ ಹೇಳಿಕೆ ನೀಡಿದ್ದಾರೋ ನನಗೆ ಗೊತ್ತಿಲ್ಲ. ಈ ಬಗ್ಗೆ ಮುಖ್ಯಮಂತ್ರಿಗಳು ಹಾಗೂ ಬಿಜೆಪಿ ರಾಜ್ಯಾಧ್ಯಕ್ಷರು ಯತ್ನಾಳ್‌ರೊಂದಿಗೆ ಮಾತನಾಡಿ ಸೂಕ್ತ ಕ್ರಮ ಕೈಗೊಳ್ಳಲಿದ್ದಾರೆ. ಬಿಜೆಪಿ ಇದುವರೆಗೂ ತನ್ನ ತತ್ವಸಿದ್ಧಾಂತಗಳಿಗೆ ಬದ್ಧವಾಗಿದ್ದು, 35 ವರ್ಷಗಳಿಂದ ನಾನು ಸಾಮಾನ್ಯ ಕಾರ್ಯಕರ್ತನಾಗಿ ದುಡಿದು ಇಂದು ಇಷ್ಟು ದೊಡ್ಡ ಹುದ್ದೆಗೆ ಬಂದಿದ್ದೇನೆ ಅಂದರೆ ಅದಕ್ಕೆ ಪಕ್ಷವೇ ಕಾರಣ. ಜೊತೆಗೆ ಇಷ್ಟು ವರ್ಷದ ನನ್ನ ಅನುಭವದಲ್ಲಿ ಈ ರೀತಿ ಹಣ ಪಡೆದು ಮುಖ್ಯಮಂತ್ರಿಗಳಾಗಿರುವ ಉದಾಹರಣೆಗಳೂ ನನ್ನ ಕಣ್ಣ ಮುಂದೆ ಇಲ್ಲ ಎಂದು ಯತ್ನಾಳ್ ಹೇಳಿಕೆಯನ್ನು ತಳ್ಳಿ ಹಾಕಿದರು.

ಸಚಿವರ ಭೇಟಿ ವೇಳೆ ತಹಸೀಲ್ದಾರ್ ಶ್ವೇತಾ ಎನ್.ರವೀಂದ್ರ, ನಿಮಿಷಾಂಬ ದೇವಾಲಯ ಇಓ ಮಹೇಶ್, ಅಭಿವೃದ್ಧಿ ಮಂಡಳಿ ಅಧ್ಯಕ್ಷ ಕೃಷ್ಣಪ್ಪ, ಬಿಜೆಪಿ ರಾಜ್ಯ ರೈತ ಮೋರ್ಚಾದ ಕೆ.ಎಸ್.ನಂಜುಂಡೇಗೌಡ, ತಾಲೂಕು ಬಿಜೆಪಿ ಅಧ್ಯಕ್ಷ ಪಿ.ಹಳ್ಳಿ ರಮೇಶ್, ಮುಖಂಡ ಸುನೀಲ್ ಸೇರಿದಂತೆ ಇತರರು ಉಪಸ್ಥಿತರಿದ್ದರು.

ಕಿರಂಗೂರು ಗ್ರಾಪಂ ಅಧ್ಯಕ್ಷರಾಗಿ ಗೋವಿಂದರಾಜು ಪುನರಾಯ್ಕೆ



ಶ್ರೀರಂಗಪಟ್ಟಣ, ಮೇ 7(ವಿನಯ್‌ಕಾರೇಕುರ)–ತಾಲೂಕಿನ ಕಿರಂಗೂರು ಗ್ರಾಪಂನ ಅಧ್ಯಕ್ಷ ಸ್ಥಾನಕ್ಕೆ ಗೋವಿಂದರಾಜು ಪುನರಾಯ್ಕೆಯಾದರು.

ಒಟ್ಟು 20 ಮಂದಿ ಸದಸ್ಯ ಬಲದ ಪಂಚಾಯಿತಿಯಲ್ಲಿ ಅಧ್ಯಕ್ಷ ಸ್ಥಾನಕ್ಕೆ ರಮ್ಯಾ ಹಾಗೂ ಗೋವಿಂದರಾಜು ಇಬ್ಬರು ನಾಮಪತ್ರ ಸಲ್ಲಿಸಿದರು. ರಮ್ಯಾ ಅವರು ನಿಗದಿತ ಸಮಯದಲ್ಲಿ ತಮ್ಮ ನಾಮಪತ್ರ ಹಿಂಪಡೆದ ಕಾರಣ ಗೋವಿಂದರಾಜು ಅವಿರೋಧ ಆಯ್ಕೆಯಾಗಿರುವುದಾಗಿ ಚುನಾವಣಾಧಿಕಾರಿಯೂ ಆದ ಇಓ ನಿಶಾಂತ್ ಕೀಲಾರ ಘೋಷಿಸಿದರು.

ಗೋವಿಂದರಾಜು ಮರು ಆಯ್ಕೆ : ಒಡಂಬಡಿಕೆಯಂತೆ ಗೋವಿಂದರಾಜು ತಮ್ಮ ಅಧ್ಯಕ್ಷ ಸ್ಥಾನಕ್ಕೆ ರಾಜೀನಾಮೆ ನೀಡಿದ್ದು, ಮೇ 7 ರಂದು ಚುನಾವಣೆ ನಿಗದಿಯಾಗಿತ್ತು. ಚುನಾವಣೆ ಘೋಷಣೆ ನಂತರ ಕಾಂಗ್ರೆಸ್‌ನ, ಜೆಡಿಎಸ್ ಕಿರಂಗೂರು ಗ್ರಾಪಂ ಅಧಿಕಾರ ಚುಕ್ಕಾಣೆ ಹಿಡಿಯುವ ಸಲುವಾಗಿ ಚುನಾವಣಾ ತಂತ್ರ ಹೆಣೆದಿದ್ದರು. ಅಚ್ಚರಿ ಬೆಳವಣಿಗೆ ಮೂಲಕ ಮತ್ತೊಮ್ಮೆ ಜೆಡಿಎಸ್ ಬೆಂಬಲಿತ ಗೋವಿಂದರಾಜು ಅವರೇ ಮರು ಆಯ್ಕೆಯಾದರು. ಈ ವೇಳೆ ಪಿಡಿಓ ಪ್ರಶಾಂತ್ ಬಾಬು, ಉಪಾಧ್ಯಕ್ಷೆ ಕೆಂಪಮ್ಮ, ಸದಸ್ಯರಾದ ಶ್ರೀನಿವಾಸ್, ಮಹೇಂದ್ರ, ಪುಟ್ಟರಾಜು, ಕುಮಾರಸ್ವಾಮಿ, ಉಷಾ, ಜಗದೀಶ್, ಜೆಡಿಎಸ್ ಮುಖಂಡರಾದ ತಿಲಕ್‌ಕುಮಾರ್, ನೆಲಮನೆ ದಯಾನಂದ್, ಕಿರಂಗೂರು ಕುಮಾರಸ್ವಾಮಿ, ರಾಜಲಕ್ಷ್ಮಿ, ಚಿಕ್ಕರಾಮಾಂಜೇಗೌಡ, ರಂಗಪ್ಪ ಮರೀಗೌಡ, ಶಿವರಾಮು, ತಿಮ್ಮೇಗೌಡ, ಮಾಯಪ್ಪ, ಶ್ರೀನಿವಾಸ್ ಸೇರಿದಂತೆ ಜೆಡಿಎಸ್ ಮುಖಂಡರು ಹಾಜರಿದ್ದು, ನೂತನ ಅಧ್ಯಕ್ಷರನ್ನು ಅಭಿನಂದಿಸಿದರು.

ಚಿಕ್ಕಾಡೆಯಲ್ಲಿ ನೂತನ ಬಿಎಂಸಿ ಕೇಂದ್ರ ಉದ್ಘಾಟನೆ

ಪಾಂಡವಪುರ,ಮೇ 7–ತಾಲೂಕಿನ ಚಿಕ್ಕಾಡೆ ಗ್ರಾಮದ ಹಾಲು ಉತ್ಪಾದಕರ ಸಹಕಾರ ಸಂಘದಲ್ಲಿ ನೂತನವಾಗಿ ಆರಂಭಗೊಂಡ ಬಿಎಂಸಿ ಕೇಂದ್ರವನ್ನು ಶಾಸಕ ಸಿ.ಎಸ್.ಪುಟ್ಟರಾಜು ಉದ್ಘಾಟಿಸಿದರು.

ಬಳಿಕ ಮಾತನಾಡಿದ ಅವರು, ಡೇರಿಗಳಲ್ಲಿ ಬಿಎಂಸಿ ಘಟಕಗಳು ಸರಿಯಾಗಿ ಕೆಲಸ ನಿರ್ವಹಿಸದೆ ಹೋದರೆ ಒಕ್ಕೂಟಗಳೇ ಮುಚ್ಚಿಹೋಗುವ ಪರಿಸ್ಥಿತಿ ಇದೆ. ಹಾಗಾಗಿ ಬಿಎಂಸಿ ಕೇಂದ್ರಗಳನ್ನು ಸಮರ್ಪಕವಾಗಿ ನಿರ್ವಹಿಸಬೇಕು ಎಂದು ತಿಳಿಸಿದರು.



ಬಿ.ಆರ್.ರಾಮಚಂದ್ರು ಅವರು ಮನ್‌ಮುಲ್ ಅಧ್ಯಕ್ಷರಾದ ಬಳಿಕ ಮೇಲುಕೋಟೆ ವಿಧಾನಸಭಾ ಕ್ಷೇತ್ರದ ಎಲ್ಲಾ ಗ್ರಾಮಗಳಲ್ಲೂ ಸಹ ಡೇರಿಯ ಅಭಿವೃದ್ಧಿಗೆ ಸಹಕಾರ ನೀಡುತ್ತಿದ್ದಾರೆ ಎಂದು ಬಣ್ಣಿಸಿದರು.

ಮನ್‌ಮುಲ್ ಅಧ್ಯಕ್ಷ ಬಿ.ಆರ್.ರಾಮಚಂದ್ರು ಮಾತನಾಡಿ, ಚಿಕ್ಕಾಡೆ ಗ್ರಾಮಕ್ಕೆ ನೀಡಲಾಗಿರುವ ಬಿಎಂಸಿ ಘಟಕವನ್ನು ಮಂಡ್ಯಕ್ಕೆ ನೀಡಲಾಗಿತು. ಆದರೆ ಗ್ರಾಮಸ್ಥರ ಒತ್ತಾಯದ ಮೇರೆಗೆ ಚಿಕ್ಕಾಡೆ ಗ್ರಾಮಕ್ಕೆ ನೀಡಲಾಗಿದೆ ಇದನ್ನು ಸದ್ಬಳಕೆ ಮಾಡಿ ಕೊಳ್ಳಬೇಕು ಎಂದರು.

ರೈತರು ಡೇರಿಗೆ ಹಾಕಿದಂತಹ ಹಾಲು ಗುಣಮಟ್ಟದಿಂದ ಇರಬೇಕು ಎನ್ನುವ ಉದ್ದೇಶದಿಂದ ಬಿಎಂಸಿ ಘಟಕವನ್ನು ನಿರ್ಮಾಣ ಮಾಡಲಾಗುತ್ತಿದೆ. ಒಂದು ಬಿಎಂಸಿ ಘಟಕ ನಿರ್ಮಾಣ ಮಾಡುವುದಕ್ಕೆ ಸುಮಾರು 25 ಲಕ್ಷ ರೂ. ಖರ್ಚಾಗುತ್ತದೆ. ಡೇರಿಗಳಲ್ಲಿ ಹಾಲಿನ ಗುಣಮಟ್ಟದ ಮೇಲೆ ರೈತರಿಗೆ ಹಾಲಿನ ದರ ನಿಗದಿಪಡಿಸಬೇಕು. ಒಕ್ಕೂಟದ ಅಭಿವೃದ್ಧಿಗೆ ಎಲ್ಲರ ಸಹಕಾರ ಅಗತ್ಯವಾಗಿದೆ ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಡೇರಿ ಅಧ್ಯಕ್ಷ ಸಿ.ಎಸ್. ರಾಜೇಂದ್ರ ಮನ್‌ಮುಲ್ ವ್ಯವಸ್ಥಾಪಕ ನಿರ್ದೇಶಕ ಡಾ.ಪಿ.ಆರ್.ಮಂಜೇಶ್, ಉಪವ್ಯವಸ್ಥಾಪಕ ಆರ್.ಪ್ರಸಾದ್, ವಿಸ್ತರಣಾಧಿಕಾರಿ ಸಿದ್ದರಾಜು, ಗ್ರಾಪಂ ಅಧ್ಯಕ್ಷ ಮಹದೇವು, ಮಾಜಿ ಅಧ್ಯಕ್ಷ ಚಂದ್ರಶೇಖರ್, ಡೇರಿ ಉಪಾಧ್ಯಕ್ಷ ಸಿ.ಎಂ.ಪ್ರದೀಪ್, ನಿರ್ದೇಶಕರಾದ ಗಿರೀಗೌಡ, ಚನ್ನೇಗೌಡ, ಸಿ.ಎಂ.ಮಹೇಶ್, ಉಮೇಶ್, ಕೃಷ್ಣ, ಲೋಕೇಶ್, ನಿಂಗಮ್ಮ, ಪ್ರಭಾಮಣಿ, ಪುಷ್ಪಾ, ಜಯಂತಿ, ಜೆಡಿಎಸ್ ಮುಖಂಡ ಪ್ರಸನ್ನಕುಮಾರ್, ಕಾರ್ಯದರ್ಶಿ ನಾಗೇಂದ್ರ, ಪರೀಕ್ಷ ರಾಘವೇಂದ್ರ ಇತರರು ಇದ್ದರು.



ನಾಗಮಂಗಲ ತಾಲೂಕು ದಂಡಿಗನಹಳ್ಳಿ ಗ್ರಾಮದಲ್ಲಿ ಮಳೆಯಿಂದ ಹಾನಿಗೊಳಗಾದ ಬಾಳೆ ತೋಟಕ್ಕೆ ಜಿಲ್ಲಾಧಿಕಾರಿ ಸಿ. ಅಶ್ವಥಿ ಭೇಟಿ ನೀಡಿ ಪರಿಶೀಲಿಸಿದರು. ಕೃಷಿ ಅಧಿಕಾರಿ ಜಯರಾಮ್ ಇತರರಿದ್ದರು.

ಊರಮಾರಮ್ಮ ದೇವಾಲಯದಲ್ಲಿ ಕಳ್ಳತನ

ಮಂಡ್ಯ,ಮೇ7(ಮೋಹನ್‌ರಾಜ್)– ತಾಲೂಕಿನ ಕೊತ್ತತ್ತಿ ಹೋಬಳಿಯ ಟಿ.ಮಲ್ಲಿಗೆರೆ ಗ್ರಾಮದ ಊರಮಾರಮ್ಮ ದೇವಾಲಯದ ಹುಂಡಿಗಳನ್ನು ಒಡೆದು ಲಕ್ಷಾಂತರ ನಗದು ಕಾಣಿಕೆ ರೂ. ದೋಚಿರುವ ಘಟನೆ ಶುಕ್ರವಾರ ರಾತ್ರಿ ನಡೆದಿದೆ.

ಕಳೆದ ಎರಡು ವರ್ಷಗಳ ಹಿಂದೆ ಗ್ರಾಮದ ಹೊರವಲಯದಲ್ಲಿ ಜೀರ್ಣೋದ್ಧಾರಗೊಂಡಿದ್ದ ಪುರಾತನ ಮಾರಮ್ಮ ದೇವಾಲಯದಲ್ಲಿ ಏಪ್ರಿಲ್‌ನಲ್ಲಿ ಕೊಂಡ–ಬಂಡಿ ಉತ್ಸವ ಸೇರಿದಂತೆ ಹಲವು ಧಾರ್ಮಿಕ ಕಾರ್ಯಗಳು ನೆರವೇರಿದ್ದವು. ಅಪಾರ ಸಂಖ್ಯೆಯ ಭಕ್ತರು ದೇವಾಲಯಕ್ಕೆ ಆಗಮಿಸಿ, ಲಕ್ಷಾಂತರ ರೂ. ನಗದು ಹಾಗೂ ಆಭರಣಗಳನ್ನು ಕಾಣಿಕೆಯಾಗಿ ಅರ್ಪಿಸಿದ್ದರು. ದೇವಾಲಯದ ಕಬ್ಬಿಣದ ಗ್ರಿಲ್‌ಗಳನ್ನು ಮುರಿದು ಒಳ ಪ್ರವೇಶಿಸಿರುವ ದುಷ್ಕರ್ಮಿಗಳು ಎರಡು ಬೃಹತ್ ಹುಂಡಿಗಳನ್ನು ಒಡೆದು ಅದರಲ್ಲಿದ್ದ ಹಣ ಹಾಗೂ ಆಭರಣಗಳನ್ನು ದೋಚಿ ಪರಾರಿಯಾಗಿದ್ದಾರೆ.

ಗ್ರಾಮಸ್ಥರ ದೂರಿನ ಮೇರೆಗೆ ಗ್ರಾಮಾಂತರ ಠಾಣೆ ಸಿಪಿಐ ಸಿದ್ದಪ್ಪ, ಪಿಎಸ್‌ಐಗಳಾದ ರವಿಕುಮಾರ್, ಸುನೀತಾ ಹಾಗೂ ಪೇದೆಗಳಾದ ರಾಜೇಂದ್ರ, ಚಿಕ್ಕಂಣ್ಯ ಶ್ವಾನದಳ ಹಾಗೂ ಬೆರಳಚ್ಚು ತಜ್ಞರೊಂದಿಗೆ ಭೇಟಿ ನೀಡಿ ಸ್ಥಳ ಪರಿಶೀಲಿಸಿದರಲ್ಲದೆ, ಪ್ರಕರಣ ದಾಖಲಿಸಿಕೊಂಡು ಮುಂದಿನ ಕ್ರಮ ಕೈಗೊಂಡಿದ್ದಾರೆ.

ಜಿಲ್ಲೆಯಲ್ಲಿ 107 ಗೃಹರಕ್ಷಕರು ಆಯ್ಕೆ

ಮಂಡ್ಯ,ಮೇ7–ಜಿಲ್ಲಾ ಗೃಹರಕ್ಷಕದಳ ಸಂಸ್ಥೆಯಲ್ಲಿ ಖಾಲಿ ಇದ್ದ 277 ಗೃಹರಕ್ಷಕ ಸ್ಥಾನಗಳಿಗೆ 217 ಅಭ್ಯರ್ಥಿಗಳು ಅರ್ಜಿ ಸಲ್ಲಿಸಿದ್ದು, ಮೇ 4ರಂದು ನಡೆದ ನೇಮಕಾತಿ ಸಂದರ್ಶನದಲ್ಲಿ 121 ಅಭ್ಯರ್ಥಿಗಳು ಹಾಜರಿದ್ದರು. 98 ಪುರುಷ ಮತ್ತು 9 ಮಹಿಳೆಯರು ಸೇರಿದಂತೆ ಒಟ್ಟು 107 ಅಭ್ಯರ್ಥಿಗಳನ್ನು ಸಮಿತಿಯು ಗೃಹರಕ್ಷಕರನ್ನಾಗಿ ಆಯ್ಕೆ ಮಾಡಿದೆ. ಸದರಿ ಆಯ್ಕೆ ಸಮಿತಿಯಲ್ಲಿ ಎಸ್ಪಿ ಎನ್.ಯತೀಶ್, ಡಿಸಿ ಕಚೇರಿ ಶಿರಸ್ತೇದಾರ್ ಗಾಯತ್ರಿ, ಡಿಡಿಪಿಐ ಜವರೇಗೌಡ, ಗೃಹರಕ್ಷಕ ಆಯ್ಕೆ ಸಮಿತಿ ಸದಸ್ಯರಾದ ಡಿ.ವಿನೋದ್‌ಖನ್ನಾ, ಗೃಹರಕ್ಷಕದಳದ ಸಮಾದೇಷ್ಟರು, ಆರಕ್ಷಕ ಅಧೀಕ್ಷಕ ಕೆ.ಆರ್.ವಿರೂಪಾಕ್ಷಗೌಡ, ಆರಕ್ಷಕ ನಿರೀಕ್ಷಕ ಟಿ.ಬಿ.ಸತೀಶ ಇತರರು ಹಾಜರಿದ್ದರು.

ಒಂದನೇ ಪುಟದಿಂದ

ವಿದ್ಯುತ್ ಚಾರ್ಜಿಂಗ್ ಕೇಂದ್ರ ಸ್ಥಾಪನೆ

ಪೆಟ್ರೋಲ್, ಡೀಸೆಲ್‌ನಿಂದ ಸಂಚರಿಸುವ ವಾಹನಗಳಿಂದ ಉತ್ಪತ್ತಿಯಾಗುವ ಕಾರ್ಬನ್ ಡೈಆಕ್ಸೈಡ್ ಪರಿಸರಕ್ಕೆ ಹೆಚ್ಚಿನ ಪ್ರಮಾಣದಲ್ಲಿ ಸೇರುತ್ತಿದೆ. ಇದರಿಂದ ಪರಸರ ಮಾಲಿನ್ಯವೂ ಹೆಚ್ಚಾಗುತ್ತಿದೆ. ಇದನ್ನು ಮನಗಂಡು ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಪರಿಸರ ಮಾಲಿನ್ಯ ತಡೆಗಟ್ಟಲು ಹಾಗೂ ಹಸಿರು ಇಂಧನ, ನವೀಕರಿಸಬಹುದಾದ ಇಂಧನ ಬಳಕೆಗೆ ಉತ್ತೇಜನ ನೀಡುತ್ತಿದ್ದು, ವಿದ್ಯುತ್ ಚಾಲಿತ ವಾಹನಗಳ ಬಳಕೆ ಹೆಚ್ಚಿಸಲು ತೀರ್ಮಾನಿಸಿದೆ. ವಿದ್ಯುತ್ ಚಾಲಿತ ವಾಹನಗಳ ಸಂಖ್ಯೆ ಹೆಚ್ಚಾಗಬೇಕಾದರೆ, ಅದಕ್ಕೆ ಪೂರಕವಾಗಿ ಚಾರ್ಜಿಂಗ್ ಕೇಂದ್ರಗಳೂ ಇರಬೇಕಾಗುತ್ತದೆ. ಈ ಹಿನ್ನೆಲೆಯಲ್ಲಿ ಸರ್ಕಾರ ರಾಜ್ಯಾದ್ಯಂತ ಎಲ್ಲಾ ಕಡೆ ಚಾರ್ಜಿಂಗ್ ಕೇಂದ್ರಗಳ ಸ್ಥಾಪನೆಗೆ ಮುಂದಾಗಿದೆ ಎಂದರು.

ರಾಜ್ಯ ಸರ್ಕಾರ ಇ–ವಾಹನಗಳ ಚಾರ್ಜಿಂಗ್ ಕೇಂದ್ರ ಸ್ಥಾಪನೆಗಾಗಿ ವಿಶೇಷ ಅಭಿಯಾನ ಆರಂಭಿಸಿದೆ. ರಾಜ್ಯದ ಎಲ್ಲಾ ಜಿಲ್ಲಾ ಕೇಂದ್ರ, ಪ್ರವಾಸಿ ತಾಣಗಳು, ರಾಜ್ಯ–ರಾಷ್ಟ್ರೀಯ ಹೆದ್ದಾರಿ ಮತ್ತು ಎಲ್ಲಾ ಸರ್ಕಾರಿ ಕಚೇರಿ ಆವರಣದಲ್ಲಿ ಚಾರ್ಜಿಂಗ್ ಕೇಂದ್ರ ಸ್ಥಾಪನೆಗೆ ಮುಂದಾಗಿದೆ. ಸೆಸ್ಕ್ ವತಿಯಿಂದಲೇ 707 ಕೇಂದ್ರಗಳು ಸ್ಥಾಪನೆಯಾಗಲಿದ್ದು, ಬೆಸ್ಕಾಂ, ಹೆಸ್ಕಾಂ, ಮೆಸ್ಕಾಂ ಮತ್ತು ಜೆಸ್ಕಾಂ ಕೂಡ ಈ ನಿಟ್ಟಿನಲ್ಲಿ ಕ್ರಮ ವಹಿಸಲಿವೆ ಎಂದರು.

ನವೀಕರಿಸಬಹುದಾದ ಇಂಧನ ಮೂಲಗಳಿಂದ 10 ಗೀಗಾ ವ್ಯಾಟ್ ವಿದ್ಯುತ್ ಅನ್ನು ಮುಂದಿನ 5 ವರ್ಷದಲ್ಲಿ ಉತ್ಪಾದನೆ ಮಾಡಲಾಗುವುದು. ಅದಕ್ಕಾಗಿ ಸಿದ್ಧತೆ ಮಾಡಿಕೊಳ್ಳಲಾಗುತ್ತಿದ್ದು, ಸ್ಥಳ ಗುರುತಿಸಿ ಹೊಸ ಕಂಪನಿಗಳನ್ನು ಆಹ್ವಾನಿಸಲಾಗುವುದು. ಪ್ರಧಾನಿ ನರೇಂದ್ರ ಮೋದಿ ಹಸಿರು ವಿದ್ಯುದ್ದೀಕರಣಕ್ಕೆ ಆದ್ಯತೆ ನೀಡಿದ್ದು, ರಾಜ್ಯ ಸರ್ಕಾರವೂ ಕೂಡ ಪ್ರಸ್ತುತ ಸಾಲಿನ ಬಜೆಟ್‌ನಲ್ಲಿ ಸೌರಶಕ್ತಿ ಆಧಾರಿತ ಹೈಬ್ರಿಡ್ ವಾಹನಗಳ ಬಳಕೆಗೆ ಉತ್ತೇಜನ ನೀಡುವ ಕಾರ್ಯಕ್ರಮ ರೂಪಿಸುವುದಾಗಿ ಘೋಷಿಸಲಾಗಿದೆ. ಜತೆಗೆ, ನವೀಕರಿಸಬಹುದಾದ ಇಂಧನ ಕುರಿತು ನೀತಿ ರಚಿಸಲಾಗಿದ್ದು, ಈ ವಿಷಯದಲ್ಲಿ ಬೇರೆ ರಾಜ್ಯಗಳಿಗಿಂತ ಕರ್ನಾಟಕವು ಮುಂಚೂಣಿಯಲ್ಲಿದೆ. ಸದ್ಯಕ್ಕೆ 30 ಸಾವಿರ ಮೆಗಾ ವ್ಯಾಟ್ ವಿದ್ಯುತ್ ಉತ್ಪಾದನೆ ಮಾಡಲಾಗುತ್ತಿದೆ. ಈ ಪ್ರಮಾಣವನ್ನು ಮುಂದಿನ 2032ರ ಹೊತ್ತಿಗೆ 40 ಸಾವಿರ ಮೆಗಾ ವ್ಯಾಟ್‌ನಷ್ಟು ವಿದ್ಯುತ್ ಉತ್ಪಾದನೆ ಮಾಡುವ ಗುರಿ ಹಾಕಿಕೊಳ್ಳಲಾಗಿದೆ ಎಂದು ವಿವರಿಸಿದರು.

ಕೈಗೆಟಕುವ ದರ: ವಿದ್ಯುತ್ ಚಾಲಿತ ವಾಹನಗಳನ್ನು ನಿರ್ಮಿಸುವ ಕಂಪನಿಗಳು ಗ್ರಾಹಕರ ಕೈಗೆಟಕುವ ದರದಲ್ಲಿ ಇ–ವಾಹನಗಳನ್ನು ಮಾರಾಟ ಮಾಡಬೇಕು ಎಂದು ಸಚಿವರು ಇದೇ ಸಂದರ್ಭದಲ್ಲಿ ಮನವಿ ಮಾಡಿದರು.

ಇದಕ್ಕೂ ಮುನ್ನ ಸೆಸ್ಕ್‌ನ ವ್ಯವಸ್ಥಾಪಕ ನಿರ್ದೇಶಕ ಜಯವಿಭವ ಸ್ವಾಮಿ ಮಾತನಾಡಿ, ಮುಂಬರುವ ದಿನಗಳಲ್ಲಿ ವಿದ್ಯುತ್ ಚಾಲಿತ ವಾಹನಗಳ ಸಂಖ್ಯೆ ಹೆಚ್ಚಾಗಲಿದೆ. ಇದನ್ನು ಮನವರಿಕೆ ಮಾಡಿಕೊಂಡಿರುವ ಕೆಲವು ಕಂಪನಿಗಳು ವಿದ್ಯುತ್ ಚಾಲಿತ ವಾಹನಗಳ ತಯಾರಿಕೆಯಲ್ಲಿ ತೊಡಗಿವೆ. ಇದರಿಂದಾಗಿ ವಿವಿಧ ಕಂಪನಿ ಹಾಗೂ ವಿನ್ಯಾಸ ಎಲೆಕ್ಟ್ರಿಕ್ ವಾಹನಗಳು ಮಾರುಕಟ್ಟೆಗೆ ಬರುತ್ತಿವೆ. ಗ್ರಾಹಕರ ಬೇಡಿಕೆಗೆ ಅನುಗುಣವಾಗಿ ವಿದ್ಯುತ್ ಚಾರ್ಜಿಂಗ್ ಕೇಂದ್ರಗಳನ್ನು ಸ್ಥಾಪಿಸಲಾಗುತ್ತಿದೆ. ಖಾಸಗಿ ಸಂಸ್ಥೆಯವರು ಚಾರ್ಜಿಂಗ್ ಕೇಂದ್ರ ಸ್ಥಾಪಿಸಲು ಮುಂದಾದರೆ ಒಂದು ಯುನಿಟ್‌ಗೆ 5.30 ರೂ. ದರದಲ್ಲಿ ವಿದ್ಯುತ್ ಪೂರೈಸಲಾಗುವುದು. ಬಾಡಿಗೆ ಆಧಾರದಲ್ಲಿ ಸ್ಥಾಪಿತವಾಗುವ ಕೇಂದ್ರಗಳಲ್ಲಿ ಸ್ಥಳದ ಮಾಲೀಕರಿಗೆ ಒಂದು ಯುನಿಟ್‌ಗೆ ಒಂದು ರೂ. ನೀಡುವ ವ್ಯವಸ್ಥೆ ಜಾರಿಗೊಳಿಸಲಾಗುವುದು ಎಂದರು.

ಇ–ವಾಹನಗಳ ಬಳಕೆಗೆ ಮೂಲಸೌಕರ್ಯ ಕಲ್ಪಿಸುವುದು ಇಂಧನ ಇಲಾಖೆಯ ಕರ್ತವ್ಯವಾಗಿದೆ. ಮುಂದಿನ ದಿನಗಳಲ್ಲಿ ಎಲ್ಲ ಭಾಗದಲ್ಲೂ ಚಾರ್ಜಿಂಗ್ ಕೇಂದ್ರ ತೆರೆಯಲು ಸಿದ್ಧತೆ ಮಾಡಿಕೊಳ್ಳಲಾಗಿದೆ ಎಂದರು. ಇ–ವಾಹನಗಳು ಭವಿಷ್ಯದ ವಾಹನಗಳು. ಪರಿಸರ ಸ್ನೇಹಿಯಾಗಿದ್ದು ವಾತಾ ವರಣದಲ್ಲಿ ಇಂಗಾಲ ಡೈ ಆಕ್ಸೈಡ್ ಹೊರಸೂಸುವಿಕೆ ಕಡಿಮೆಯಾಗಿ ಜಾಗತಿಕ ತಾಪಮಾನವೂ ತಗ್ಗಲಿದೆ. ಜತೆಗೆ, ಪೆಟ್ರೋಲ್, ಡಿಸೇಲ್ ಆಮದು ಕಡಿಮೆಯಾಗಿ ದೇಶ ಸ್ವಾವಲಂಬನೆ ಸಾಧಿಸಲು ನೆರವಾಗಲಿದೆ. ಕಡಿಮೆ ಖರ್ಚಿನಲ್ಲಿ ಜನರಿಗೂ ವಾಹನ ದೊರೆಯಲಿದೆ ಎಂದರು.

ಪ್ರಶಂಸೆ: ಸೆಸ್ಕ್ ವ್ಯಾಪ್ತಿಯಲ್ಲಿ ವಿದ್ಯುತ್ ಕರ ವಸೂಲಿಯಲ್ಲಿ ಪ್ರಗತಿ ಸಾಧಿಸಿದ ಅರಸಿಕೆರೆ, ನಾಗಮಂಗಲ, ಪಾಂಡವಪುರ, ಮೈಸೂರಿನ ನರಸಿಂಹರಾಜ ಮೊಹಲ್ಲಾ ಮತ್ತು ವಿ.ವಿ.ಮೊಹಲ್ಲಾ ವಿಭಾಗವನ್ನು ಅಭಿನಂದಿಸಲಾಯಿತು. ಅತ್ಯುತ್ತಮವಾಗಿ ಕಾರ್ಯನಿರ್ವಹಿಸಿದ ಪವರ್ ಮ್ಯಾನ್‌ಗಳಾದ ಗಣೇಶ್, ವೆಂಕಟೇಶ್, ಹನುಮಂತಪ್ಪ, ಸತೀಶ್, ಶಿವರುದ್ರಚಾರ್ಯ ಅವರಿಗೆ ನಗದು ಬಹುಮಾನ ನೀಡಲಾಯಿತು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶಾಸಕ ಜಿ.ಟಿ.ದೇವೇಗೌಡ ವಹಿಸಿದ್ದರು. ಈ ಸಂದರ್ಭದಲ್ಲಿ ಶಾಸಕ ಬಿ.ಹರ್ಷವರ್ಧನ್, ವಿಧಾನ ಪರಿಷತ್ ಸದಸ್ಯ ಸಿ.ಎನ್. ಮಂಜೇಗೌಡ, ಕ್ರೆಡಲ್ ವ್ಯವಸ್ಥಾಪಕ ನಿರ್ದೇಶಕ ಕೆ.ಪಿ.ರುದ್ರಪ್ಪಯ್ಯ, ಬೆಂಗಳೂರಿನ ಬೆಸ್ಕಾಂನ ತಾಂತ್ರಿಕ ನಿರ್ದೇಶಕ ಡಿ.ನಾಗಾರ್ಜುನ, ಕಲಬುರಗಿಯ ಜೆಸ್ಕಾಂನ ತಾಂತ್ರಿಕ ನಿರ್ದೇಶಕ ಸೋಮಶೇಖರ್, ಸೆಸ್ಕ್ ತಾಂತ್ರಿಕ ನಿರ್ದೇಶಕ ಮಂಜಪ್ಪ, ಕವಿಮಂ ಇಂಜಿನಿಯರ್‌ಗಳ ಸಂಘದ ಅಧ್ಯಕ್ಷ ಟಿ.ಎಂ.ಶಿವಪ್ರಕಾಶ್, ಬಿಜೆಪಿ ಮುಖಂಡ ಅರುಣ್‌ಕುಮಾರ್‌ಗೌಡ ಸೇರಿದಂತೆ ಇನ್ನಿತರರು ಪಾಲ್ಗೊಂಡಿದ್ದರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ 2 ಎಕರೆ ಜಾಗ ಕಬಳಿಕೆ ಯತ್ನ ಆರೋಪ

ಸಚಿವ ಸುನೀಲ್‌ಕುಮಾರ್ ಸ್ಥಳ ಪರಿಶೀಲನೆ: ಸಂರಕ್ಷಣೆಗೆ ಸೂಚನೆ



ಮೈಸೂರು, ಮೇ 7(ಎಸ್‌ಬಿಡಿ)– ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವ ವಿ.ಸುನಿಲ್ ಕುಮಾರ್ ಶನಿವಾರ ಮೈಸೂರಿನ ಶ್ರೀರಾಂಪುರ 2ನೇ ಹಂತ ಎಸ್‌ಬಿಎಂ ಬಡಾವಣೆಯಲ್ಲಿರುವ ಇಲಾಖೆ ವಶದಲ್ಲಿರುವ ಜಾಗಕ್ಕೆ ತೆರಳಿ ಪರಿಶೀಲನೆ ನಡೆಸಿದರು.

ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ (ಮುಡಾ)ದಿಂದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಗೆ ಮಂಜೂರಾಗಿರುವ ಈ ಜಾಗದಲ್ಲಿ 'ಗಾಂಧಿ ವಿಚಾರ ಪರಿಷದ್'ನ ನಾಮಫಲಕ ಅಳವಡಿಸಲಾಗಿತ್ತು. 'ಗಾಂಧಿ ಭವನದ ನಿವೇಶನ' ಎಂದು ಆ ಫಲಕದಲ್ಲಿ ಬರೆಯಲಾಗಿತ್ತು. ಇದರಿಂದ ಇಲಾಖೆ ಜಾಗವನ್ನು ಕಬಳಿಸುವ ಹುನ್ನಾರ ನಡೆದಿದೆ ಎಂಬ ಆರೋಪ ಕೇಳಿಬಂದಿತ್ತು.

ಈ ಮೊದಲು ಸ್ಥಳ ಪರಿಶೀಲನೆ ನಡೆಸಿದ ರಂಗಾಯಣ ನಿರ್ದೇಶಕ ಅಡ್ಡಂಡ ಕಾರ್ಯಪ್ಪ, 'ಗಾಂಧಿ ವಿಚಾರ ಪರಿಷದ್' ಫಲಕ ತೆರವುಗೊಳಿಸಿ, ಕಬಳಿಕೆ ಯತ್ನದ ಬಗ್ಗೆ ಸರ್ಕಾರದ ಗಮನಕ್ಕೆ ತಂದಿದ್ದರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಮುಡಾಕ್ಕೆ 75 ಲಕ್ಷ ರೂ. ಪಾವತಿಸಿ ಈ ಜಾಗವನ್ನು 30 ವರ್ಷಗಳ ಲೀಸ್‌ಗೆ ಖರೀದಿಸಿತ್ತು. ಈಗ 25 ಲಕ್ಷ ರೂ. ಖರ್ಚು ಮಾಡಿ, ಕಾಂಪೌಂಡ್ ನಿರ್ಮಾಣ ಮಾಡಿ ಜಾಗ ಸಂರಕ್ಷಿಸಲಾಗುತ್ತಿದೆ. ಈ ಹಿನ್ನೆಲೆಯಲ್ಲಿ ಸಚಿವ ಸುನಿಲ್‌ಕುಮಾರ್ ಶನಿವಾರ ಸ್ಥಳ ಪರಿಶೀಲನೆ ನಡೆಸಿದರು. ಈ ವೇಳೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ಮಲ್ಲಿಕಾರ್ಜುನ ಸ್ವಾಮಿ, ಸಹಾಯಕ ನಿರ್ದೇಶಕ ಎಚ್.ಚನ್ನಪ್ಪ ಅವರಿಂದ ಜಾಗದ ಸಂಬಂಧ ವಿವರಣೆ ಪಡೆದರಲ್ಲದೆ, ಇಲಾಖೆ ಸುಪರ್ದಿಯಲ್ಲಿರುವ ಜಾಗವನ್ನು ಭದ್ರಪಡಿಸಿಕೊಂಡು, ನಾಮಫಲಕ ಅಳವಡಿಸುವಂತೆ ಸೂಚನೆ ನೀಡಿದರು.

ಸಂಸದ ಪ್ರತಾಪ್ ಸಿಂಹ, ಶಾಸಕ ಎಲ್. ನಾಗೇಂದ್ರ, ರಂಗಾಯಣ ನಿರ್ದೇಶಕ ಅಡ್ಡಂಡ ಸಿ.ಕಾರ್ಯಪ್ಪ, ಮೈಲ್ಯಾಕ್ ಅಧ್ಯಕ್ಷ ಎನ್.ವಿ.ಫಣೀಶ್, ಬಿಜೆಪಿ ಚಾಮುಂಡೇಶ್ವರಿ ಕ್ಷೇತ್ರದ ಮಾಜಿ ಅಧ್ಯಕ್ಷ ಅರುಣ್ ಕುಮಾರ್‌ಗೌಡ, ಮುಖಂಡ ಬಿ.ಎಂ.ರಘು ಮತ್ತಿತರರು ಸಚಿವರೊಂದಿಗಿದ್ದರು.

ಈ ಸಂಬಂಧ 'ಮೈಸೂರು ಮಿತ್ರ'ನಿಗೆ ಪ್ರತಿಕ್ರಿಯಿಸಿದ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶನ ಚನ್ನಪ್ಪ, ಎಸ್‌ಬಿಎಂ ಬಡಾವಣೆಯ 2 ಎಕರೆ ಭೂಮಿಯನ್ನು ಮುಡಾ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಗೆ 30 ವರ್ಷಗಳ ಗುತ್ತಿಗೆ ಆಧಾರದಲ್ಲಿ ಮಂಜೂರು ಮಾಡಿದೆ. ಈ ಜಾಗ ಈಗಲೂ ಇಲಾಖೆ ನಿರ್ದೇಶಕರ ಹೆಸರಿನಲ್ಲಿದ್ದು, ಸುತ್ತಲೂ ಕಾಂಪೌಂಡ್ ನಿರ್ಮಿಸಲಾಗುತ್ತಿದೆ. ಇಂದು ಸಚಿವರು ಸ್ಥಳ ಪರಿಶೀಲನೆ ನಡೆಸಿದರು. ಜಾಗ ಇಲಾಖೆ ಹೆಸರಿನಲ್ಲಿ ಇದೆ ಎಂದು ತಿಳಿದು, ಕಾಂಪೌಂಡ್ ನಿರ್ಮಿಸುವಂತೆ ಸೂಚಿಸಿದರು ಎಂದು ತಿಳಿಸಿದರು.

'ಮೈಸೂರಿನ ಎಸ್‌ಬಿಎಂ ಬಡಾ ವಣೆಯ ಕೋಟ್ಯಾಂತರ ರೂ. ಬೆಲೆಯ ಆಸ್ತಿಯನ್ನು ಗಾಂಧಿ ಹೆಸರಿನ ಟ್ರಸ್ಟ್ ಹೆಸರಿನಲ್ಲಿ ಪ್ರಭಾವಿಗಳು ಕಬಳಿಸಲು ಹೊರಟಿದ್ದಾರೆ. ಮುಡಾಗೆ 75 ಲಕ್ಷ ರೂ. ನೀಡಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಪಡೆದಿರುವ ಈ ಜಾಗದಲ್ಲಿ 25 ಲಕ್ಷ ರೂ. ವೆಚ್ಚದಲ್ಲಿ ಕಾಂಪೌಂಡ್ ನಿರ್ಮಿಸಲಾಗುತ್ತಿದೆ. ಆದರೆ ಆ ಜಾಗದಲ್ಲಿ ಟ್ರಸ್ಟ್‌ನ ಬೋರ್ಡ್ ಇದೆ. ಇಲಾಖೆ ಅಧಿಕಾರಿಗಳೇ ನೀವು ಏನು ಮಾಡುತ್ತಿದ್ದೀರಿ?' ಎಂದು ರಂಗಾಯಣ ನಿರ್ದೇಶಕ ಅಡ್ಡಂಡ ಸಿ.ಕಾರ್ಯಪ್ಪ, ಇತ್ತೀಚೆಗೆ ಸಾಮಾಜಿಕ ಜಾಲತಾಣದ ಮೂಲಕ ಪ್ರಶ್ನಿಸಿದ್ದರು.

ಸರ್ಕಾರದ ವಿರುದ್ಧ ಎಸ್‌ಡಿಪಿಐ ಪ್ರತಿಭಟನೆ



ಮೈಸೂರು, ಮೇ 7(ಎಸ್‌ಬಿಡಿ)– ರಾಜ್ಯ ಬಿಜೆಪಿ ಸರ್ಕಾರ ಭ್ರಷ್ಟಾಚಾರದ ಕೂಪವಾಗಿದೆ ಎಂದು ಆರೋಪಿಸಿ ಸೋಷಿಯಲ್ ಡೆಮಾಕ್ರಟಿಕ್ ಪಾರ್ಟಿ ಆಫ್ ಇಂಡಿಯಾ(ಎಸ್‌ಡಿಪಿಐ) ಕಾರ್ಯಕರ್ತರು ಶನಿವಾರ ಸರ್ಕಾರದ ಅಣಕು ಶವಯಾತ್ರೆಯೊಂದಿಗೆ ಪ್ರತಿಭಟನೆ ನಡೆಸಿದರು.

ಮೈಸೂರಿನ ಅಶೋಕ ರಸ್ತೆ ಸೇಂಟ್ ಫಿಲೊಮಿನಾ ಚರ್ಚ್ ಜಂಕ್ಷನ್‌ನಿಂದ ಮಹಾತ್ಮ ಗಾಂಧಿ ವೃತ್ತದವರೆಗೆ ಸರ್ಕಾರದ ಅಣಕು ಶವಯಾತ್ರೆ ನಡೆಸಿ, ಕೆಲ ಕಾಲ ಪ್ರತಿಭಟನೆ ನಡೆಸಿದರು. ಇದರಲ್ಲಿ ಭಾಗಿಯಾಗಿದ್ದ 60ಕ್ಕೂ ಹೆಚ್ಚು ಕಾರ್ಯಕರ್ತರು, ಘೋಷಣಾ ಫಲಕ ಹಿಡಿದು ಸರ್ಕಾರದ ವಿರುದ್ಧ ಘೋಷಣೆ ಕೂಗಿದರು. ಈ ವೇಳೆ ಎಸ್‌ಡಿಪಿಐ ರಾಜ್ಯ ಸಮಿತಿ ಸದಸ್ಯ ಅಮ್ಜದ್ ಖಾನ್ ಮಾತನಾಡಿ, ಗಡಿಪಾರು ಮಾಡಿದ್ದ ಪ್ರಮೋದ್ ಮುತಾಲಿಕ್‌ನನ್ನು ಮೈಸೂರಿನ ಪೊಲೀಸರು ತಮ್ಮ ಕಚೇರಿಯಲ್ಲಿ ಕೂರಿಸಿ, ಗೌರವದಿಂದ ನಡೆಸಿಕೊಂಡಿದ್ದಾರೆ. ಸಮಾಜದಲ್ಲಿ ಕೋಮು ಸೌಹಾರ್ದತೆ ಹಾಳು ಮಾಡುತ್ತಿರುವವರಿಗೆ ಬೆಂಬಲವಾಗಿರುವ ಸರ್ಕಾರ, ಪೊಲೀಸ್ ಇಲಾಖೆಯನ್ನೂ ದುರ್ಬಳಕೆ ಮಾಡಿಕೊಳ್ಳುತ್ತಿದೆ. ಸಿಎಂ ಹುದ್ದೆಗೆ 2,500 ಸಾವಿರ ಕೋಟಿ ರೂ. ನೀಡಬೇಕೆಂದು ಬಿಜೆಪಿ ಶಾಸಕರೇ ಹೇಳಿದ್ದು, ಈಗಿನ ಸಿಎಂ ಕೂಡ ಹಣ ನೀಡಿರುವ ಅನುಮಾನ ಮೂಡಿದೆ. ಸ್ವಜನ ಪಕ್ಷಪಾತ, ಸಂವಿಧಾನ ವಿರೋಧಿ ನಡವಳಿಕೆ, ಅಲ್ಪಸಂಖ್ಯಾತರ ಮೇಲೆ ದಾಳಿಗಳು ನಡೆಯುತ್ತಿದ್ದು, ಇದಕ್ಕೆಲ್ಲಾ ಬಿಜೆಪಿ ಸರ್ಕಾರವೇ ಕುಮ್ಮಕ್ಕು ನೀಡುತ್ತಿದೆ ಎಂದು ಆರೋಪಿಸಿದರು.

ಎಸ್‌ಡಿಪಿಐ ಜಿಲ್ಲಾ ಉಪಾಧ್ಯಕ್ಷ ಎಸ್.ಸ್ವಾಮಿ, ಮಹಮದ್ ಷಫಿ, ಇಬ್ರಾಹಿಂ ಪಠಾಣ್, ಜುನೈದ್ ಸೇರಿದಂತೆ ಅನೇಕ ಮುಖಂಡರು, ಕಾರ್ಯಕರ್ತರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

ಮೈಸೂರಿನಲ್ಲಿ ವೈಭವದ ಕರಗ ಮಹೋತ್ಸವ



ಮೈಸೂರು,ಮೇ.7(ಜಿಎ)– ಮೈಸೂರಿನ ಇಟ್ಟಿಗೆಗೂಡಿನಲ್ಲಿರುವ ಶ್ರೀ ರೇಣುಕಾದೇವಿ ಕರಗ ದೇವಸ್ಥಾನ ಟ್ರಸ್ಟ್ ವತಿಯಿಂದ ಆಯೋಜಿಸಿದ್ದ 98ನೇ ವರ್ಷದ ಕರಗ ಮಹೋತ್ಸವ ಶನಿವಾರ ರಾತ್ರಿ ಮಳೆಯ ನಡುವೆಯೂ ಅತ್ಯಂತ ವಿಜೃಂಭಣೆಯಿಂದ ನಡೆಯಿತು.


ಇಟ್ಟಿಗೆಗೂಡಿನ ದೇವಸ್ಥಾನದಿಂದ ಹೊರಟ ಕರಗ ಉತ್ಸವ ನಗರದ ಪ್ರಮುಖ ರಸ್ತೆಗಳಲ್ಲಿ ಮಂಗಳವಾದ್ಯ, ಡೊಳ್ಳು ಕುಣಿತ, ಹುಲಿ ವೇಷ ಹಾಗೂ ವಿವಿಧ ಸಾಹಸ ಪ್ರದರ್ಶನ ಸೇರಿದಂತೆ ಕಲಾತಂಡಗಳು, ಜೊತೆಗೆ ಮೈತುಂಬ ಅರಿಶಿಣ ಹಚ್ಚಿಕೊಂಡ ಸಾಹಸಿ ಯುವಕರ ದಂಡು ಕಾಲಿಗೆ ಗೆಜ್ಜೆ ಕಟ್ಟಿ, ಕಾಲುಂಗರ ತೊಟ್ಟು, ಲುಂಗಿಯುಟ್ಟು ಒಬ್ಬರು ಚಾಮುಂಡೇಶ್ವರಿ ಹಾಗೂ ಮತ್ತೊಬ್ಬರು ಮಾರಿಯಮ್ಮ ದೇವಿಯ ಕರಗ ಹೊತ್ತು ಸಾಗಿದರೆ ಇನ್ನುಳಿದವರು ತ್ರಿಶೂಲ, ಕತ್ತಿ ಆಯುದಗಳನ್ನಿಡಿದು ಸಾಗಿದರು.

ಉತ್ಸವದಲ್ಲಿ ಮಾಜಿ ಶಾಸಕರಾದ ಎಂ.ಕೆ.ಸೋಮಶೇಖರ್, ಸಂದೇಶ್ ನಾಗರಾಜು ಇಟ್ಟಿಗೂಡು ಗ್ರಾಮಸ್ಥರು ಸೇರಿದಂತೆ ಸಾವಿರಾರು ಭಕ್ತರು ಭಾಗವಹಿಸಿ ದೈವಿ ಕೃಪೆಗೆ ಪಾತ್ರರಾದರು.

ಸಂದರ್ಶಕ ಪ್ರಾಧ್ಯಾಪಕರಾಗಿ ಪ್ರೊ.ಇಂದಿರಾ



ಮೈಸೂರು, ಮೇ 7– ಮೈಸೂರು ವಿಶ್ವವಿದ್ಯಾನಿಲಯದ ಡಾ.ಬಿ.ಆರ್.ಅಂಬೇಡ್ಕರ್ ಸಂಶೋಧನ ಮತ್ತು ವಿಸ್ತರಣ ಕೇಂದ್ರದ ಡಾ.ಬಿ.ಆರ್.ಅಂಬೇಡ್ಕರ್ ಅಧ್ಯಯನ ಪೀಠದ ಸಂದರ್ಶಕ ಪ್ರಾಧ್ಯಾಪಕರಾಗಿ ಸಮಾಜಶಾಸ್ತ್ರಜ್ಞೆ ಮತ್ತು ಸ್ತ್ರೀವಾದಿ ಚಿಂತಕಿ–ಲೇಖಕಿ ಪ್ರೊ.ಆರ್.ಇಂದಿರಾ ಅವರನ್ನು ಒಂದು ವರ್ಷದ ಅವಧಿಗೆ ಆಹ್ವಾನಿಸಲಾಗಿದೆ. ಪ್ರೊ. ಇಂದಿರಾ ಅವರು ಈ ಹಿಂದೆ ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಸಮಾಜಶಾಸ್ತ್ರ ಪ್ರಾಧ್ಯಾಪಕರಾಗಿ, ಅಂತಾರಾಷ್ಟ್ರೀಯ ಕೇಂದ್ರ ಮತ್ತು ಮಹಿಳಾ ಅಧ್ಯಯನ ಕೇಂದ್ರದ ನಿರ್ದೇಶಕರಾಗಿ ಸೇವೆ ಸಲ್ಲಿಸಿದ್ದಾರೆ.



ಮೈಸೂರಿನ ರಂಗಾಯಣದಲ್ಲಿ ಆಯೋಜಿಸಿರುವ ವ್ಯಂಗಚಿತ್ರ ಕಲಾವಿದ ನಾಗೇಂದ್ರ ಬಾಬು ರಚಿಸಿರುವ ವ್ಯಂಗ್ಯ ಚಿತ್ರಗಳ ಪ್ರದರ್ಶನವನ್ನು ಶ್ರೀರಾಮಸೇನೆಯ ಪ್ರಮೋದ್ ಮುತಾಲಿಕ್ ವೀಕ್ಷಿಸಿದರು. ಈ ವೇಳೆ ರಂಗಾಯಣ ನಿರ್ದೇಶಕ ಅಡ್ಡಂಡ ಕಾರ್ಯಪ್ಪ, ಮುಖಂಡರಾದ ಸಂಜಯ್, ರಾಕೇಶ್ ಭಟ್, ಸಂದೇಶ್, ಜೀವನ್, ಕುಮಾರ್, ಸುಂದರರಾಜ್ ಇನ್ನಿತರರಿದ್ದರು.

ಮೈಸೂರು ಮಿತ್ರ

ಶೋಷಿತರು, ಸಣ್ಣ ಸಮುದಾಯದ ಮೀಸಲಾತಿಗೆ ವಿಧಾನಸಭೆ–ಲೋಕಸಭೆಯಲ್ಲಿ ಗಂಭೀರ ಚರ್ಚೆ: ಎ.ನಾರಾಯಣಸ್ವಾಮಿ



ಸಕ್ರಿಯ ಪಾಕ್ ಏಜೆಂಟ್‌ಗಳನ್ನು ಮಟ್ಟ ಹಾಕುತ್ತೇವೆ

ಚಾಮರಾಜನಗರ: ಪಾಕಿಸ್ತಾನದಲ್ಲಿ ಸರ್ಕಾರ ಬದಲಾಗುತ್ತಿದ್ದಂತೆ ಐಎಸ್‌ಐ ಪ್ರೇರಿತ ಪಾಕ್ ಏಜೆಂಟ್‌ಗಳು ಹೆಚ್ಚುತ್ತಿದ್ದು, ಅವರನ್ನು ಮಟ್ಟ ಹಾಕುತ್ತೇವೆ ಎಂದು ಕೇಂದ್ರ ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಖಾತೆ ರಾಜ್ಯ ಸಚಿವ ಎ.ನಾರಾಯಣಸ್ವಾಮಿ ಹೇಳಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ರಾಜ್ಯವಷ್ಟೇ ಅಲ್ಲ ರಾಷ್ಟ್ರದ ವಿವಿಧೆಡೆ ಪಾಕ್ ಏಜೆಂಟ್‌ಗಳು ಸಕ್ರಿಯವಾಗಿದ್ದಾರೆ. ಮಂಗಳೂರು, ಕೇರಳದಲ್ಲಿ ಹುಟ್ಟುವ ಈ ಏಜೆಂಟ್‌ಗಳು ಎಲ್ಲಾ ಕಡೆ ವ್ಯಾಪಿಸುತ್ತಿದ್ದಾರೆ. ಆದ್ದರಿಂದಲೇ ಕಾಶ್ಮೀರಕ್ಕೆ ಇದ್ದ ವಿಶೇಷ ಸ್ಥಾನಮಾನ ತೆಗೆದುಹಾಕಿ ರಾಷ್ಟ್ರೀಯತೆ, ಸಾರ್ವಭೌಮತ್ವ ಮೂಡಿಸುವ ಕೆಲಸ ಮಾಡಿದೆವು ಎಂದರು. ಈಗಾಗಲೇ ಕೌಲಂದೆ ಪ್ರಕರಣಕ್ಕೆ ಸಂಬಂಧಿಸಿದ ವ್ಯಕ್ತಿಗಳನ್ನು ಬಂಧಿಸಲಾಗಿದೆ. ಯಾವುದೇ ಕಾರಣಕ್ಕೂ ಸಾರ್ವಭೌಮತ್ವಕ್ಕೆ ಧಕ್ಕೆ ತರುವ ವ್ಯಕ್ತಿಗಳನ್ನು ಸುಮ್ಮನೇ ಬಿಡಲ್ಲ. ಈ ಬಗ್ಗೆ ಸರ್ಕಾರ ಗಂಭೀರವಾಗಿ ತನಿಖೆ ನಡೆಸುತ್ತಿದ್ದು, ನಿರ್ಲಕ್ಷ್ಯ ವಹಿಸುವ ಪ್ರಶ್ನೆಯೇ ಇಲ್ಲ ಎಂದರು.

ಚಾಮರಾಜನಗರ, ಮೇ 7– ಶೋಷಿತರು ಹಾಗೂ 75 ವರ್ಷಗಳಿಂದ ಮೀಸಲಾತಿಯನ್ನು ಪಡೆದುಕೊಳ್ಳಲು ಸಾಧ್ಯವಾಗದಿರುವ ಸಣ್ಣ ಸಮುದಾಯಗಳಿಗೆ ಮೀಸಲಾತಿ ಕಲ್ಪಿಸುವ ನಿಟ್ಟಿನಲ್ಲಿ ವಿಧಾನಸಭೆ ಹಾಗೂ ಲೋಕಸಭೆಯಲ್ಲಿ ಗಂಭೀರ ಚರ್ಚೆಯಾಗಬೇಕಾಗಿದೆ ಎಂದು ಕೇಂದ್ರ ಸರ್ಕಾರ ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ರಾಜ್ಯ ಸಚಿವ ಎ.ನಾರಾಯಣಸ್ವಾಮಿ ಹೇಳಿದರು.

ನಗರದ ಡಾ.ಬಿ.ಆರ್.ಅಂಬೇಡ್ಕರ್ ಭವನದಲ್ಲಿ ಜಿಲ್ಲಾ ಮಾದಿಗ ಸಂಘಟನೆಗಳ ಒಕ್ಕೂಟದ ವತಿಯಿಂದ ನಡೆದ ಸಂವಿಧಾನ ರತ್ನ ಡಾ.ಬಿ.ಆರ್.ಅಂಬೇಡ್ಕರ್ ಹಾಗೂ ಹಸಿರು ಕ್ರಾಂತಿಯ ಹರಿಕಾರ ಡಾ.ಬಾಬು ಜಗಜೀವನರಾಂ ಅವರ ಜಯಂತಿ ಹಾಗೂ ಸಾಧಕರಿಗೆ ಸನ್ಮಾನ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಅಂಬೇಡ್ಕರ್ ಅವರು ದೇಶದ ಅಭಿವೃದ್ಧಿಗೆ ಪೂರಕವಾದ ಹಾಗೂ ಎಲ್ಲಾ ಸಮಾಜದವರಿಗೂ ಸಾಮಾಜಿಕ ನ್ಯಾಯವನ್ನು ಕಲ್ಪಿಸುವ ಉದ್ದೇಶದಿಂದ ಉತ್ಕೃಷ್ಟವಾದ ಸಂವಿಧಾನ ನೀಡಿದ್ದಾರೆ. ಅವರ ಆಶಯದಂತೆ 75 ವರ್ಷಗಳಿಂದ ಸಂವಿಧಾನ ಸಮರ್ಪಕವಾಗಿ ಅನುಷ್ಠಾನವಾಗಿದ್ದರೆ, ಇಂದು ನಾವು ನ್ಯಾಯಮೂರ್ತಿ ಸದಾಶಿವ ಆಯೋಗದ ವರದಿಯಂತೆ ಜನಸಂಖ್ಯೆಗೆ ಅನುಗುಣವಾಗಿ ಮೀಸಲಾತಿ ನೀಡಿ ಎಂದು ಹೋರಾಟ ಮಾಡುವ ಅನಿವಾರ್ಯತೆ ಬರುತ್ತಿರಲಿಲ್ಲ ಎಂದರು.

ಒಳ ಮೀಸಲಾತಿ ಜಾರಿ ಮಾಡಿ ನಿಮ್ಮ ಬಳಿ ಬರುತ್ತೇವೆ: ನಮ್ಮದು ನುಡಿದಂತೆ ನಡೆಯುವ ಸರ್ಕಾರ. ಕಳೆದ ಅವಧಿಯಲ್ಲಿ ಸದಾಶಿವ ಆಯೋಗ ವರದಿ ಜಾರಿ ಮಾಡಲು ಸಿದ್ದರಾಮಯ್ಯ ಸರ್ಕಾರ ಹಿಂದೇಟು ಹಾಕಿತ್ತು. ಆದರೆ, ರಾಜ್ಯ ಹಾಗೂ ದೇಶದಲ್ಲಿರುವ ಬಿಜೆಪಿ ಸರ್ಕಾರ ಒಳ ಮೀಸಲಾತಿ ಜಾರಿ ಮಾಡುತ್ತದೆ. ಪ್ರಣಾಳಿಕೆಯಲ್ಲಿ ಅಳವಡಿಸಿದಂತೆ ರಾಜ್ಯದಲ್ಲಿ ಜಾರಿ ಮಾಡಿ, ಅನುಷ್ಠಾನಕ್ಕಾಗಿ ಕೇಂದ್ರಕ್ಕೆ ಕಳುಹಿಸಿಕೊಡುತ್ತೇವೆ. ಇದು ಶತಸಿದ್ಧ ಎಂದು ನಾರಾಯಣಸ್ವಾಮಿ ವಾಗ್ದಾನ ಮಾಡಿದರು.

ಕೆಪಿಸಿಸಿ ಕಾರ್ಯಾಧ್ಯಕ್ಷ ಆರ್.ಧ್ರುವನಾರಾಯಣ್ ಮಾತನಾಡಿ, ಅಂಬೇಡ್ಕರ್ ಅವರು ಅಪ್ರತಿಮ ನಾಯಕರಾಗಿ ಪ್ರಪಂಚಕ್ಕೆ ವಿಶಿಷ್ಟ ಸಂವಿಧಾನ ನೀಡಿದ್ದಾರೆ. ಅವರು ಆದರ್ಶ ವ್ಯಕ್ತಿಯಾಗಿದ್ದರು. ಅವರ ಜೀವನ ಚರಿತ್ರೆ ತೆರೆದ ಪುಸ್ತಕವಾಗಿದೆ. ವಿದೇಶ ದಲ್ಲಿ ವ್ಯಾಸಂಗ ಮಾಡಿ ಬಹಳ ಪಾಂಡಿತ್ಯ ಹೊಂದಿದ್ದರು. ಶೋಷಿತರಿಗಾಗಿ ತಮ್ಮ ಸರ್ವಸ್ವವನ್ನೇ ತ್ಯಾಗ ಮಾಡುವ ಮೂಲಕ ತ್ಯಾಗ ಮೂರ್ತಿಯಾಗಿದ್ದಾರೆ ಎಂದರು.

ಕೇಂದ್ರದ ಮಾಜಿ ಸಚಿವ ಕೆ.ಹೆಚ್.ಮುನಿಯಪ್ಪ ಶಾಸಕ ಎನ್‌ಮಹೇಶ್ ಮಾತನಾಡಿದರು.

ಸನ್ಮಾನ: ರಾಜ್ಯ ಮಟ್ಟದ ಪ್ರಶಸ್ತಿ ಪುರಸ್ಕೃತ ಆರ್.ಎಂ.ಕಾಂತರಾಜ್, ಕೇಂದ್ರ ಪರಿಹಾರ ಸಮಿತಿ ಅಧ್ಯಕ್ಷ ಎಂ.ರಾಮಚಂದ್ರ, ಸಫಾಯಿ ಕರ್ಮಚಾರಿ ಆಯೋಗದ ಅಧ್ಯಕ್ಷ ಕೋಟೆ ಎಂ.ಶಿವಣ್ಣ, ವಿಧಾನಪರಿಷತ್ ಸದಸ್ಯ ಡಾ.ಡಿ.ತಿಮ್ಮಯ್ಯ ಅವರನ್ನು ಸನ್ಮಾನಿಸಲಾಯಿತು.

ವಿವಿಧ ಕ್ಷೇತ್ರದಲ್ಲಿ ಸಾಧನೆ ಮಾಡಿದ ಡಾ.ಬಾಬುಜಗಜೀವನರಾಂ ಆದಿ ಬಂಜಾರ ಅಭಿವೃದ್ಧಿ ನಿಗಮದ ವ್ಯವಸ್ಥಾಪಕ ನಿರ್ದೇಶಕ ಟಿ.ಕುಮಾರ್, ನಿವೃತ್ತ ಉಪನಿರ್ದೇಶಕರಾದ ಸಿ.ಮಹದೇವಯ್ಯ, ರೇವಣ್ಣ, ಎಸ್.ಬಸವರಾಜು, ಹೆಚ್.ಎಸ್.ಪ್ರೇಮನಾಥ್, ಎಂ.ಡಿ.ಶಿವಕುಮಾರ್, ಎಲ್.ಶಶಿಕುಮಾರ್, ಎಸ್.ರಾಜಣ್ಣ, ಕೆ.ಆರ್.ರಾಚಯ್ಯ, ಕೆ.ಎಸ್.ರಾಚಯ್ಯ, ನಾಗಮ್ಮ, ರಾಚಪ್ಪ, ಗಂಗಾಧರ್, ನಿಂಗರಾಜು ಅವರನ್ನು ಗೌರವಿಸಲಾಯಿತು.

ಹಂಪಿ ಮಾತಂಗ ಆಶ್ರಮದ ಶ್ರೀಮುನಿ ಸ್ವಾಮೀಜಿ ಕಾರ್ಯಕ್ರಮದ ದಿವ್ಯ ಸಾನ್ನಿಧ್ಯ ವಹಿಸಿದರು. ಶಾಸಕ ಸಿ.ಪುಟ್ಟರಂಗಶೆಟ್ಟಿ ಅಧ್ಯಕ್ಷತೆ ವಹಿಸಿದ್ದರು. ಶಾಸಕರಾದ ಆರ್.ನರೇಂದ್ರ, ಮಾಜಿ ಸದಸ್ಯ ಸಿ.ರಮೇಶ್, ಅರಗು ಮತ್ತು ಬಣ್ಣ ಕಾರ್ಖಾನೆ ಕೃಷ್ಣ, ಡಾ.ಬಾಬು ಜಗಜೀವನರಾಂ ಯುವ ಜಾಗೃತಿ ವೇದಿಕೆ ಅಧ್ಯಕ್ಷ ಎಂ.ಶಿವಮೂರ್ತಿ, ಮಾದಿಗ ಮೀಸಲಾತಿ ಹೋರಾಟ ಸಮಿತಿ ಅಧ್ಯಕ್ಷ ಬಸವನಪುರ ರಾಜಶೇಖರ್ ಹಾಜರಿದ್ದರು.

ನಾಳೆ ವಿಶೇಷಚೇತನರ ಕುಂದುಕೊರತೆ ಸಭೆ

ಚಾಮರಾಜನಗರ, ಮೇ 7– ಚಾಮರಾಜನಗರ ತಾಲೂಕು ಮಟ್ಟದ ವಿಶೇಷ ಚೇತನರ ಕುಂದುಕೊರತೆ ಸಭೆಯು ತಹಸೀಲ್ದಾರ್‌ರವರ ಅಧ್ಯಕ್ಷತೆಯಲ್ಲಿ ಮೇ 9ರಂದು ಬೆಳಗ್ಗೆ 11 ಗಂಟೆಗೆ ತಹಸೀಲ್ದಾರ್ ಕಚೇರಿಯಲ್ಲಿ ನಡೆಯಲಿದೆ.

ವಿಶೇಷಚೇತನರು ತಮ್ಮ ಸಮಸ್ಯೆ, ಕುಂದು–ಕೊರತೆಗಳಿದ್ದಲ್ಲಿ ಅರ್ಜಿಗಳನ್ನು ನೇರವಾಗಿ ತಹಸೀಲ್ದಾರ್ ಸಮ್ಮುಖದಲ್ಲಿ ಸಲ್ಲಿಸಬಹುದಾಗಿದೆ. ಸಭೆಯಲ್ಲಿ ತಾಲೂಕಿನ ಎಲ್ಲಾ ವಿಶೇಷಚೇತನರು ಪಾಲ್ಗೊಳ್ಳಲು ಹಾಗೂ ಮಾಹಿತಿಗಾಗಿ ಶಿಶು ಅಭಿವೃದ್ಧಿ ಯೋಜನಾಧಿಕಾರಿ ಕಚೇರಿ ದೂ.ಸಂ.08226–222603, 223688 ಅನ್ನು ಸಂಪರ್ಕಿಸಬೇಕು ಎಂದು ಪ್ರಕಟಣೆ ತಿಳಿಸಿದೆ.

ಕೆಎಸ್‌ಆರ್‌ಟಿಸಿ ಘಟಕದ ವ್ಯವಸ್ಥಾಪಕ ಜಯಕುಮಾರ್‌ಗೆ ಬೀಳ್ಕೊಡುಗೆ

ಗುಂಡ್ಲುಪೇಟೆ, ಮೇ 7(ಸೋಮ್.ಜಿ)– ಪಟ್ಟಣದ ಕೆಎಸ್‌ಆರ್‌ಟಿಸಿ ಘಟಕದಲ್ಲಿ ವ್ಯವಸ್ಥಾಪಕರಾಗಿ ಸೇವೆ ಸಲ್ಲಿಸಿ ಮೈಸೂರಿಗೆ ವರ್ಗಾವಣೆಗೊಂಡಿರುವ ಜಯಕುಮಾರ್ ಅವರನ್ನು ಸಾರಿಗೆ ಘಟಕದ ಸಿಬ್ಬಂದಿ ಆತ್ಮೀಯವಾಗಿ ಬೀಳ್ಕೊಟ್ಟರು.



ಸಾರಿಗೆ ಡಿಪೋನಲ್ಲಿ ಏರ್ಪಡಿಸಲಾಗಿದ್ದ ಸಮಾರಂಭದಲ್ಲಿ ಜಯಕುಮಾರ್ ದಂಪತಿಯನ್ನು ಸನ್ಮಾನಿಸಿದರು. ಈ ವೇಳೆ ಘಟಕದ ಸಿಬ್ಬಂದಿ ವರ್ಗದವರು ಹಾಜರಿದ್ದರು.

ಚಾ.ನಗರದಲ್ಲಿ ಇಂದು ಭಗೀರಥ ಜಯಂತಿ

ಚಾಮರಾಜನಗರ, ಮೇ 7– ಜಿಲ್ಲಾಡಳಿತ, ಜಿಪಂ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಂಯುಕ್ತಾಶ್ರಯದಲ್ಲಿ ಶ್ರೀಭಗೀರಥ ಜಯಂತಿ ಮೇ 8ರಂದು ನಗರದಲ್ಲಿ ನಡೆಯಲಿದೆ. ಬೆಳಗ್ಗೆ 10 ಗಂಟೆಗೆ ನಗರದ ಪ್ರವಾಸಿ ಮಂದಿರದಲ್ಲಿ ವಿವಿಧ ಜಾನಪದ ಕಲಾ ತಂಡಗಳೊಂದಿಗೆ ಆರಂಭವಾಗಲಿರುವ ಶ್ರೀ ಭಗೀರಥ ಅವರ ಭಾವಚಿತ್ರದ ಮೆರವಣಿಗೆ ಜೈ ಭುವನೇಶ್ವರಿ ವೃತ್ತ (ಪಚ್ಚಪ್ಪ ವೃತ್ತ) ಮೂಲಕ ಸಮಾರಂಭ ನಡೆಯುವ ಪೇಟೆ ಪ್ರೈಮರಿ ಶಾಲೆ ಆವರಣದಲ್ಲಿ ಮುಕ್ತಾಯಗೊಳ್ಳಲಿದೆ. ಮಧ್ಯಾಹ್ನ 12 ಗಂಟೆಗೆ ನಗರದ ಪೇಟೆ ಪ್ರೈಮರಿ ಶಾಲಾ ಆವರಣದಲ್ಲಿ ವೇದಿಕೆ ಸಮಾರಂಭ ನಡೆಯಲಿದೆ.

ಮಗುಚಿ ಬಿದ್ದ ಕಬ್ಬಿನ ಲಾರಿ: ಇಬ್ಬರು ಪಾದಚಾರಿಗಳು ಸಾವು

ಚಾಮರಾಜನಗರ, ಮೇ 7– ರಸ್ತೆ ಬದಿಯಲ್ಲಿ ನಡೆದುಕೊಂಡು ಹೋಗುತ್ತಿದ್ದ ಪಾದಚಾರಿಗಳ ಮೇಲೆ ಕಬ್ಬಿನ ಲಾರಿಯೊಂದು ಮಗುಚಿ ಬಿದ್ದು, ಅವರು ಸಾವನ್ನಪ್ಪಿರುವ ಘಟನೆ ನಗರದ ಡೀವಿಯೇಷನ್ ರಸ್ತೆಯಲ್ಲಿ ಎನ್‌ಡಿಎ ಲಾಡ್ಜ್ ಬಳಿಯ ತಿರುವಿನಲ್ಲಿ ಶನಿವಾರ ಸಂಜೆ ನಡೆದಿದೆ. ಉತ್ತರ ಪ್ರದೇಶದ ಆಲಿಗಡ ಜಿಲ್ಲೆಯ ನಗಲಾ ಸರ್ದಾರ್ ಗ್ರಾಮದ ಮಯೂರ್ ಹಾಗೂ ಅತುಲ್ ಎಂದು ಗುರುತಿಸಲಾಗಿದೆ. ಇನ್ನೊಬ್ಬರಿಗೆ ಗಾಯವಾಗಿದೆ ಎಂದು ಹೇಳಲಾಗುತ್ತಿದ್ದು, ಸ್ಪಷ್ಟ ಮಾಹಿತಿ ಲಭ್ಯವಾಗಿಲ್ಲ.

ಮೃತಪಟ್ಟ ಇಬ್ಬರೂ ಬಟ್ಟೆ ವ್ಯಾಪಾರಿಗಳಾಗಿದ್ದು, ಎನ್‌ಡಿಎ ಲಾಡ್ಜ್‌ನಲ್ಲಿ ಉಳಿದುಕೊಂಡಿದ್ದರು. ಅವರ ಪರಿಚಯಸ್ಥರನ್ನು ಕರೆದುಕೊಂಡು ಬರುವುದಕ್ಕಾಗಿ ಬಸ್ ನಿಲ್ದಾಣಕ್ಕೆ ಹೋಗುತ್ತಿದ್ದರು. ಈ ಸಂದರ್ಭದಲ್ಲಿ ತಮಿಳುನಾಡಿನತ್ತ ಹೋಗುತ್ತಿದ್ದ ಕಬ್ಬಿನ ಲಾರಿಯು (ಟಿಎನ್ 28 ಯು–4779) ತಿರುವಿನಲ್ಲಿ ಚಾಲಕನ ನಿಯಂತ್ರಣ ತಪ್ಪಿ ರಸ್ತೆ ಬದಿಯಲ್ಲಿ ನಡೆದುಕೊಂಡು ಹೋಗುತ್ತಿದ್ದ ಮಯೂರ್ ಹಾಗೂ ಅತುಲ್ ಅವರ ಮೇಲೆ ಮಗುಚಿ ಬಿದ್ದಿದೆ.

ಕಬ್ಬಿನ ರಾಶಿಯ ನಡುವೆ ಸಿಕ್ಕಿಹಾಕಿಕೊಂಡ ಅವರನ್ನು ತಕ್ಷಣವೇ ಸ್ಥಳೀಯರು, ಅಗ್ನಿಶಾಮಕ ದಳದ ಸಿಬ್ಬಂದಿ ಹಾಗೂ ಪೊಲೀಸರು ಕಾರ್ಯಾಚರಣೆ ನಡೆಸಿ ಹೊರಗೆ ತೆಗೆದು ಯಡಬೆಟ್ಟದಲ್ಲಿರುವ ಸಿಮ್ಸ್ ಬೋಧನಾ ಆಸ್ಪತ್ರೆಗೆ ದಾಖಲಿಸಿದ್ದಾರೆ. ಆದರೆ, ಚಿಕಿತ್ಸೆ ಫಲಕಾರಿಯಾಗದೆ ಇಬ್ಬರು ಸಾವನ್ನಪ್ಪಿದ್ದಾರೆ. ಸ್ಥಳದಿಂದ ಲಾರಿ ಚಾಲಕ ಹಾಗೂ ಕ್ಲೀನರ್ ಪರಾರಿಯಾಗಿದ್ದಾರೆ. ಇಬ್ಬರ ಬಗ್ಗೆಯೂ ಮಾಹಿತಿ ಸಿಕ್ಕಿಲ್ಲ ಎಂದು ಪೊಲೀಸರು ತಿಳಿಸಿದ್ದಾರೆ. ಅತಿ ವೇಗ ಹಾಗೂ ಚಾಲಕನ ಅಜಾಗರೂಕತೆಯಿಂದ ಅಪಘಾತ ಸಂಭವಿಸಿದೆ ಎಂದು ಹೇಳಲಾಗಿದೆ. ಸಂಚಾರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಅಪಾಯಕಾರಿ ತಿರುವು: ಡೀವಿಯೇಷನ್ ರಸ್ತೆಯಲ್ಲಿ ಸಂತೇಮರಹಳ್ಳಿ ವೃತ್ತ ಹಾಗೂ ಭುವನೇಶ್ವರಿ ವೃತ್ತದ ನಡುವೆ ಸಿಗುವ ಈ ತಿರುವು ಕಡಿದಾಗಿದ್ದು, ಬಹಳ ಅಪಾಯಕಾರಿಯಾಗಿದೆ. ರಸ್ತೆ ಬದಿಯಲ್ಲಿ ಅಂಗಡಿಗಳು, ಮನೆಗಳು ಇವೆ. ವಾಹನಗಳು ನಿಧಾನವಾಗಿ ಬಂದರೆ ಯಾವುದೇ ಅಪಾಯ ಇರುವುದಿಲ್ಲ. ಆದರೆ ವೇಗವಾಗಿ ಬಂದು, ಏಕಾಏಕಿ ತಿರುವು ತೆಗೆದುಕೊಂಡರೆ ಅಪಘಾತ ಖಚಿತ. ರಾಷ್ಟ್ರೀಯ ಹೆದ್ದಾರಿಯಲ್ಲಿ ಇಂತಹ ತಿರುವು ಇರಬಾರದು. ಇದರಿಂದ ಅಪಾಯವೇ ಹೆಚ್ಚು ಎಂದು ಹೇಳುತ್ತಾರೆ ಸಂಚಾರ ಪೊಲೀಸರು. ಸಾರ್ವಜನಿಕರು ಕೂಡ ಇದೇ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದು, ತಿರುವು ಸಿಗದಂತೆ ಮಾಡಲು ಪರ್ಯಾಯ ವ್ಯವಸ್ಥೆ ಆಗಬೇಕು. ಆದಷ್ಟು ಬೇಗ ಹೊರ ವರ್ತುಲ ರಸ್ತೆ ನಿರ್ಮಾಣವಾದರೆ, ಈ ರಸ್ತೆಯನ್ನು ಬಳಸುವುದು ತಪ್ಪುತ್ತದೆ ಎಂದು ಹೇಳಿದ್ದಾರೆ.

ಮೇ 11, ಹೆಬ್ಬಸೂರು ಶಾಖಾ ಮಠಕ್ಕೆ ಶೃಂಗೇರಿ ಕಿರಿಯ ಶ್ರೀಗಳ ಭೇಟಿ

ಚಾಮರಾಜನಗರ, ಮೇ 7– ತಾಲೂಕಿನ ಹೆಬ್ಬಸೂರು ಗ್ರಾಮದಲ್ಲಿ ಮೇ 6ರಿಂದ ಮೇ 12ರವರೆಗೆ ನಾನಾ ಧಾರ್ಮಿಕ ಕಾರ್ಯಕ್ರಮಗಳ ಹಿನ್ನೆಲೆಯಲ್ಲಿ ಮೇ 11ರಂದು ಶೃಂಗೇರಿ ಶಾರದಾ ಪೀಠದ ಕಿರಿಯ ಶ್ರೀಗಳಾದ ವಿಧುಶೇಖರ ಭಾರತಿ ಸ್ವಾಮೀಜಿ ಜಿಲ್ಲೆಗೆ ಭೇಟಿ ನೀಡಲಿದ್ದು, ಹೆಬ್ಬಸೂರು ಶೃಂಗೇರಿ ಶಾರದಾ ಪೀಠದಿಂದ ನಡೆಯುವ ನಾನಾ ಧಾರ್ಮಿಕ ಪೂಜಾ ಕಾರ್ಯಕ್ರಮಗಳಲ್ಲಿ ಶ್ರೀಗಳು ಪಾಲ್ಗೊಳ್ಳಲಿದ್ದಾರೆ. ಇದಕ್ಕಾಗಿ ಎಲ್ಲಾ ಸಿದ್ಧತೆಗಳು ಪೂರ್ಣಗೊಂಡಿವೆ ಎಂದು ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಹೆಚ್.ವಿ. ರಾಜೀವ್ ಹೇಳಿದರು.




ನಗರದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಹೆಬ್ಬಸೂರು ಶಾರದಾ ಪೀಠ ಶಾಖಾ ಧರ್ಮಾಧಿಕಾರಿ ಶ್ರೀಧರ್‌ಪ್ರಸಾದ್ ನೇತೃತ್ವದಲ್ಲಿ ಶಾಖಾ ಪೀಠ ಅಭಿವೃದ್ಧಿ ಪಥದತ್ತ ದಾಪುಗಾಲಿಡುತ್ತಿದೆ. ಮೇ 6ರಂದು ಶಂಕರ ಜಯಂತಿ ಮಹೋತ್ಸವ ನಡೆಸಲಾಗಿದ್ದು, 7ರಂದು ಗಣಪತಿ ಹೋಮ ನೆರವೇರಿದೆ. 8ರಂದು ಶತಚಂಡಿಕಯಾಗ, 9ರಂದು ಸುಬ್ರಹ್ಮಣ್ಯ ಹೋಮ, 10ರಂದು ಸುಮಂಗಲಿಯರ ಪೂಜೆ ಜರುಗಲಿದೆ. 11ರಂದು ಚಾಮರಾಜನಗರಕ್ಕೆ ಶೃಂಗೇರಿ ಶಾರದಾ ಪೀಠದ ಜಗದ್ಗುರು ವಿಧುರಶೇಖರ ಸ್ವಾಮೀಜಿ ಆಗಮಿಸಲಿದ್ದು, ಬ್ರಾಹ್ಮಣ ಸಂಘದ ಮುಖಂಡರು, ಪದಾಧಿಕಾರಿಗಳು ಚಾಮರಾಜನಗರದಲ್ಲಿ ಸ್ವಾಗತಿಸುವ ಮೂಲಕ ಹೆಬ್ಬಸೂರು ಶಾರದಾ ಪೀಠಕ್ಕೆ ಕರೆತರಲಾಗುತ್ತದೆ ಎಂದು ತಿಳಿಸಿದರು.

ಮೇ 12ರಂದು ಹೆಬ್ಬಸೂರು ಗ್ರಾಮದ ಶಾಖಾ ಪೀಠದಲ್ಲಿ ಹೊಸದಾಗಿ ನಿರ್ಮಿಸಿರುವ ರಾಜಗೋಪುರ, ಕುಂಭಾಭಿಷೇಕ ಕಾರ್ಯಕ್ರಮದ ಉದ್ಘಾಟನೆ ನಡೆಯಲಿದೆ. ಈಗಾಗಲೇ ಗ್ರಾಮವನ್ನು ಗ್ರಾಮಸ್ಥರ ಸಹಯೋಗದಲ್ಲಿ ತಳಿರುತೋರಣಗಳಿಂದ ಸಿಂಗರಿಸಲಾಗಿದ್ದು, ಕಾರ್ಯಕ್ರಮ ನಡೆಯುವ ಎಲ್ಲಾ ದಿನಗಳಂದು ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುವವರಿಗೆ ಅನ್ನ ಸಂತರ್ಪಣೆ ಏರ್ಪಡಿಸಲಾಗಿದೆ ಎಂದರು.

ಗ್ರಾಮಕ್ಕೆ ಜಿಲ್ಲೆ ಸೇರಿದಂತೆ ನಾನಾ ಕಡೆಗಳಿಂದ ಭಕ್ತರು ಆಗಮಿಸಿ ವಾಸ್ತವ್ಯ ಹೂಡಿದ್ದು, ಪೂಜಾ ಕಾರ್ಯಕ್ರಮಗಳಲ್ಲಿ ಭಾಗವಹಿಸಲಿದ್ದಾರೆ ಎಂದರು. ಸುದ್ದಿಗೋಷ್ಠಿಯಲ್ಲಿ ಜಿ.ಎಂ.ಹೆಗಡೆ, ಸುರೇಶ್ ಋಗ್ವೇದಿ, ವೆಂಕಟೇಶ್ ಶೇಷನ್, ಕೃಷ್ಣಮೂರ್ತಿ ಹಾಜರಿದ್ದರು.

ಹುಲಿ ಉಗುರು ಮಾರುತ್ತಿದ್ದ ಇಬ್ಬರ ಬಂಧನ



ಮಡಿಕೇರಿ, ಮೇ 7– ಹುಲಿಯ 4 ಉಗುರುಗಳನ್ನು ಅಕ್ರಮವಾಗಿ ಮಾರಾಟ ಮಾಡಲು ಯತ್ನಿಸುತ್ತಿದ್ದ ಇಬ್ಬರು ಆರೋಪಿಗಳನ್ನು ಮಡಿಕೇರಿ ಸಿಐಡಿ ಪೊಲೀಸ್ ಅರಣ್ಯ ಘಟಕ ಬಂಧಿಸಿದೆ. ಗುಂಡ್ಲುಪೇಟೆ ಮೂಲದ ಕುಮಾರ ಮತ್ತು ವಿನು ಎಂಬವರೇ ಬಂಧಿತ ಆರೋಪಿಗಳಾಗಿದ್ದಾರೆ. ಮಡಿಕೇರಿ–ಮೈಸೂರು ರಾಜ್ಯ ಹೆದ್ದಾರಿಯ ಚೈನ್‌ಗೇಟ್ ಬಳಿಯಲ್ಲಿರುವ ಬಸ್ ನಿಲ್ದಾಣದ ಎಡ ಬದಿಯಲ್ಲಿ ಇಬ್ಬರು ಹುಲಿಯ 4 ಉಗುರುಗಳನ್ನು ಮಾರಾಟ ಮಾಡಲು ಯತ್ನಿಸುತ್ತಿರುವ ಬಗ್ಗೆ ಮೇ 6 ರಂದು ಮಡಿಕೇರಿ ತಾಲೂಕು ಸಿ.ಐ.ಡಿ ಪೊಲೀಸ್ ಅರಣ್ಯ ಸಂಚಾರಿ ದಳಕ್ಕೆ ಖಚಿತ ಮಾಹಿತಿ ಲಭಿಸಿತ್ತು. ಈ ಸಂದರ್ಭ ಸಿಬ್ಬಂದಿಗಳು ದಾಳಿ ನಡೆಸಿ ಆರೋಪಿಗಳನ್ನು ಮಾಲು ಸಹಿತ ಬಂಧಿಸಿದ್ದಾರೆ. ಆರೋಪಿಗಳ ವಶದಲ್ಲಿದ್ದ 4 ಉಗುರುಗಳನ್ನು ವಶಕ್ಕೆ ಪಡೆಯಲಾಗಿದೆ ಎಂದು ಪೊಲೀಸರು ಮಾಹಿತಿ ನೀಡಿದ್ದಾರೆ.

ಸಿ.ಐ.ಡಿ ಪೊಲೀಸ್ ಅರಣ್ಯ ಘಟಕದ ಹೆಚ್ಚುವರಿ ಪೊಲೀಸ್ ಮಹಾ ನಿರೀಕ್ಷಕ ಕೆ.ವಿ.ಶರತ್ ಚಂದ್ರ ಅವರ ನಿರ್ದೇಶನದ ಮೇರೆಗೆ, ಮಡಿಕೇರಿ ಸಿ.ಐ.ಡಿ ಪೊಲೀಸ್ ಅರಣ್ಯ ಘಟಕದ ಪ್ರಭಾರ ಅಧೀಕ್ಷಕ ಎನ್.ಟಿ. ಶ್ರೀನಿವಾಸ್ ರೆಡ್ಡಿ ಮಾರ್ಗದರ್ಶನದಲ್ಲಿ ಮಡಿಕೇರಿ ಸಿಐಡಿ ಪೊಲೀಸ್ ಅರಣ್ಯ ಸಂಚಾರಿ ದಳದ ಉಪ ನಿರೀಕ್ಷಕಿ ಸಿ.ಯು. ಸವಿ, ಸಿಬ್ಬಂದಿಗಳಾದ ಶೇಖರ್, ರಾಜೇಶ್, ರಾಘವೇಂದ್ರ, ಯೋಗೇಶ್, ಮೋಹನ, ಸ್ವಾಮಿ ಮತ್ತು ಮಂಜುನಾಥ್ ಅವರುಗಳು ಕಾರ್ಯಾಚರಣೆ ನಡೆಸಿದ್ದಾರೆ.

ನದಿಯಲ್ಲಿ ಸ್ನಾನಕ್ಕೆ ತೆರಳಿದ ವಿದ್ಯಾರ್ಥಿ ನೀರು ಪಾಲು

ಸಿದ್ದಾಪುರ, ಮೇ 7– ಸ್ನೇಹಿತರೊಂದಿಗೆ ಸ್ನಾನಕ್ಕೆ ತೆರಳಿದ್ದ ವಿದ್ಯಾರ್ಥಿಯೋರ್ವ ನೀರಿನಲ್ಲಿ ಮುಳುಗಿ ಮೃತಪಟ್ಟ ದುರ್ಘಟನೆ ಕುಶಾಲನಗರ ತಾಲೂಕಿನ ನೆಲ್ಯಹುದಿಕೇರಿ ಸಮೀಪದ ಬರಡಿ ಕಾವೇರಿ ನದಿಯಲ್ಲಿ ನಡೆದಿದೆ. ಬರಡಿ ಗ್ರಾಮದ ಮಣಿ ಎಂಬವರ ಮಗ ವಿಪಿನ್(18) ಸಿದ್ದಾಪುರ ಖಾಸಗಿ ಕಾಲೇಜಿನ ದ್ವಿತೀಯ ಪಿಯುಸಿ ವಿದ್ಯಾರ್ಥಿಯಾಗಿದ್ದಾನೆ. ತನ್ನ ಸ್ನೇಹಿತರೊಂದಿಗೆ ನದಿಗೆ ತೆರಳಿ ನೀರಿನಲ್ಲಿ ಇಳಿದ ಸಂದರ್ಭ ಆಕಸ್ಮಿಕವಾಗಿ ಆಳದ ಸುಳಿಯಲ್ಲಿ ಸಿಲುಕಿ ಮೃತಪಟ್ಟಿದ್ದಾನೆ.



ತಕ್ಷಣ ಸ್ಥಳೀಯರು ದೋಣಿಯ ಮೂಲಕ ನದಿಗಿಳಿದು ಹುಡುಕಾಟ ನಡೆಸಿದ ಸಂದರ್ಭ ಮೃತದೇಹ ಪತ್ತೆಯಾಗಿದೆ. ಸ್ಥಳಕ್ಕೆ ಪೊಲೀಸರು, ಅಗ್ನಿಶಾಮಕದಳ, ದುಬಾರೆಯ ರ‍್ಯಾಫ್ಟಿಂಗ್ ತಂಡ ಭೇಟಿ ನೀಡಿತ್ತು.

ಸಿದ್ದಾಪುರ ಆಸ್ಪತ್ರೆಯಲ್ಲಿ ಮರಣೋತ್ತರ ಪರೀಕ್ಷೆ ಬಳಿಕ ವಾರಸುದಾರರಿಗೆ ದೇಹ ನೀಡಲಾಗಿದ್ದು, ಸಿದ್ದಾಪುರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಸ್ಥಳಕ್ಕೆ ಠಾಣಾಧಿಕಾರಿ ಮೋಹನ್‌ರಾಜ್, ಗ್ರಾಪಂ ಅಧ್ಯಕ್ಷ ಸಾಬು ವರ್ಗಿಸ್, ಪಿಡಿಓ ಅನಿಲ್ ಕುಮಾರ್, ಸದಸ್ಯರುಗಳು ಹಾಜರಿದ್ದರು.

ರಸ್ತೆ ಬದಿ ನಿಂತಿದ್ದ ಪೊಲೀಸ್ ವಾಹನಕ್ಕೆ ಕಾರು ಡಿಕ್ಕಿ

ಗುಡ್ಡೆಹೊಸೂರು, ಮೇ 7– ರಸ್ತೆ ಬದಿ ನಿಲ್ಲಿಸಿದ್ದ ಪೊಲೀಸ್ ವಾಹನಕ್ಕೆ ಕಾರು ಡಿಕ್ಕಿ ಹೊಡೆದ ಘಟನೆ ಇಲ್ಲಿಗೆ ಸಮೀಪದ ಬಸವನಹಳ್ಳಿಯಲ್ಲಿ ಸಂಭವಿಸಿದೆ.



ಮಡಿಕೇರಿಯಿಂದ ಕುಶಾಲನಗರದತ್ತ ಚಲಿಸುತ್ತಿದ್ದ ಕಾರು (ಕೆಎ–12 ಎಂ.ಎ. 6025) ಬಸನಹಳ್ಳಿಯಲ್ಲಿ ಬಸ್‌ನ್ನು ಹಿಂದಿಕ್ಕುವ ಭರದಲ್ಲಿ ಡಿಕ್ಕಿ ಹೊಡೆದಿದೆ ಎನ್ನಲಾಗಿದೆ. ಪೊಲೀಸ್ ವಾಹನದಲ್ಲಿದ್ದ ಚಾಲಕ ಕೃಷ್ಣಶೆಟ್ಟಿ ಅವರು ಅಪಾಯದಿಂದ ಪಾರಾಗಿದ್ದಾರೆ. ಕಾರು ಚಾಲನೆ ಮಾಡುತ್ತಿದ್ದ ಅರಣ್ಯ ಇಲಾಖೆಯ ನಿವೃತ್ತ ಚಾಲಕ ಚಂದ್ರ ಅವರ ಎದೆ ಭಾಗಕ್ಕೆ ಪೆಟ್ಟಾಗಿದ್ದು, ಅವರನ್ನು ಆಸ್ಪತ್ರೆಯಲ್ಲಿ ದಾಖಲಿಸಲಾಗಿದೆ. ಈ ಸಂಬಂಧ ಕುಶಾಲನಗರ ಗ್ರಾಮಾಂತರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮೂರು ವರ್ಷದ ನಂತರ ಕೊಡವ ಕೌಟುಂಬಿಕ ಹಾಕಿ ಉತ್ಸವ

ವಿರಾಜಪೇಟೆ,ಮೇ 7–ಕೊಡವ ಕುಟುಂಬಗಳ ನಡುವೆ 2023ರಲ್ಲಿ 'ಕೊಡವ ಕೌಟುಂಬಿಕ ಹಾಕಿ ಉತ್ಸವ' ನಡೆಯಲಿದ್ದು, ಅಪ್ಪಚೆಟ್ಟೋಳಂಡ ಕುಟುಂಬ ಹಾಕಿ ಉತ್ಸವದ ಸಾರಥ್ಯ ವಹಿಸಿಕೊಂಡಿದೆ. ಆ ಮೂಲಕ ಕೊರೊನಾ ಕಾರಣದಿಂದಾಗಿ ಕಳೆದ 3 ವರ್ಷಗಳಿಂದ ಸ್ಥಗಿತಗೊಂಡಿದ್ದ 23ನೇ ವರ್ಷದ 'ಕೊಡವ ಹಾಕಿ ಉತ್ಸವ' 2023 ರಲ್ಲಿ ನಾಪೋಕ್ಲುವಿನಲ್ಲಿ ಆಯೋಜನೆಯಾಗುವುದು ಅಧಿಕೃತವಾದಂತಾಗಿದೆ.

ಅಪ್ಪಚೆಟ್ಟೋಳಂಡ ಕುಟುಂಬದ ಸಾರಥ್ಯ : ಧ್ವಜ ಹಸ್ತಾಂತರ



ಶನಿವಾರ ಬಾಳುಗೋಡುವಿನಲ್ಲಿ ನಡೆದ ಕೊಡವ ಹಾಕಿ ಅಕಾಡೆಮಿಯ ಹಾಲಿ ಆಡಳಿತ ಮಂಡಳಿಯ ವಾರ್ಷಿಕ ಮಹಾಸಭೆಯಲ್ಲಿ ಈ ಕುರಿತು ನಿರ್ಧಾರ ಕೈಗೊಳ್ಳಲಾಯಿತು. ಇದೇ ಸಂದರ್ಭ ಮುಂದಿನ ಸಾಲಿನ ಹಾಕಿ ಉತ್ಸವ ಆಯೋಜನೆಯ ಸಾರಥ್ಯ ವಹಿಸಿಕೊಂಡ ಅಪ್ಪಚೆಟ್ಟೋಳಂಡ ಕುಟುಂಬಕ್ಕೆ ಗಣ್ಯರು ಹಾಕಿ ಉತ್ಸವದ ಧ್ವಜ ಹಸ್ತಾಂತರಿಸುವ ಮೂಲಕ ಶುಭ ಹಾರೈಸಿದರು.

ಅಪ್ಪಚೆಟ್ಟೋಳಂಡ ಕುಟುಂಬದ ಪಟ್ಟೆದಾರ ಈರಪ್ಪ, ಅಧ್ಯಕ್ಷ ಮನು ಮುತ್ತಪ್ಪ, ಉಪಾಧ್ಯಕ್ಷ ಭೀಮಯ್ಯ, ಕಾರ್ಯದರ್ಶಿ ಮಿಥುನ್ ಮಾಚಯ್ಯ, ವಸಂತ್ ಮುತ್ತಪ್ಪ ಮತ್ತಿತರರು ಈ ಸಂದರ್ಭ ಹಾಜರಿದ್ದು, ಧ್ವಜ ಸ್ವೀಕರಿಸಿದರು.

ಕೊಡವ ಹಾಕಿ ಅಕಾಡೆಮಿ ಪ್ರಮುಖರಾದ ಕಾಳೇಂಗಡ ರಮೇಶ್ ಕಾರ್ಯಪ್ಪ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಹಲವು ವಿಚಾರಗಳ ಕುರಿತು ಚರ್ಚೆ ನಡೆಸಲಾಯಿತು. ಇದೇ ಸಂದರ್ಭ ನೂತನವಾಗಿ ರಚನೆಯಾಗಿರುವ ಆಡಳಿತ ಮಂಡಳಿ ಪದಾಧಿಕಾರಿಗಳಿಗೆ ಅಧಿಕಾರ ಹಸ್ತಾಂತರಿಸಲಾಯಿತು.

ನೂತನ ಅಧ್ಯಕ್ಷ ಪಾಂಡಂಡ ಸುಧೀರ್ ಬೋಪಣ್ಣ, ಕಾರ್ಯಾಧ್ಯಕ್ಷ ಮೇಕೇರಿರ ರವಿ ಪೆಮ್ಮಯ್ಯ, ಕಾರ್ಯದರ್ಶಿ ಮಾಳೇಟಿರ ಶ್ರೀನಿವಾಸ್, ಜಂಟಿ ಕಾರ್ಯದರ್ಶಿ ಮುಕ್ಕಾಟಿರ ಭೀಮಯ್ಯ, ಉಪಾಧ್ಯಕ್ಷರುಗಳಾಗಿ ಮಡಿಕೇರಿ ತಾಲೂಕಿನ ಬಡಕಡ ದೀನಾ ಪೂವಯ್ಯ, ವಿರಾಜಪೇಟೆ ತಾಲೂಕಿನ ಮಾದಂಡ ಎಸ್.ಪೂವಯ್ಯ, ಸೋಮವಾರಪೇಟೆ ತಾಲೂಕಿನ ಕುಕ್ಕೇರ ಜಯ ಚಿಣ್ಣಪ್ಪ ಮತ್ತಿತರರು ಅಧಿಕಾರ ವಹಿಸಿಕೊಂಡರು. ಎಲ್ಲರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಅಕಾಡೆಮಿಯನ್ನು ಮುನ್ನಡೆಸುವುದಾಗಿ ನೂತನ ಅಧ್ಯಕ್ಷ ಸುಧೀರ್ ಬೋಪಣ್ಣ ಸಭೆಗೆ ಭರವಸೆ ನೀಡಿದರು.

ಅಕಾಡೆಮಿಯ ಕಾರ್ಯದರ್ಶಿಯಾಗಿದ್ದ ಅಮ್ಮಣಿಚಂಡ ರವಿ ಉತ್ತಪ್ಪ ಸ್ವಾಗತಿಸಿದರು, ಜಂಟಿ ಕಾರ್ಯದರ್ಶಿ ಮಾರ್ಚಂಡ ಗಣೇಶ್ ಪೊನ್ನಪ್ಪ ವಾರ್ಷಿಕ ವರದಿ ಮಂಡಿಸಿದರು. ಮುಕ್ಕಾಟ್ಟಿರ ಕ್ಯಾಟಿ ಉತ್ತಪ್ಪ ವಂದಿಸಿದರು. ಜಿಲ್ಲೆಯ ಕೊಡವ ಕುಟುಂಬಗಳ ಹಾಕಿ ಅಕಾಡೆಮಿಯ ಪ್ರತಿನಿಧಿಗಳು ಸಭೆಯಲ್ಲಿ ಭಾಗವಹಿಸಿದ್ದರು

ಅರ್ಜಿ ಸಲ್ಲಿಸಲು ಕಾಲಾವಕಾಶ

ಮಡಿಕೇರಿ,ಮೇ 7–ಕರ್ನಾಟಕ ವೀರಶೈವ ಲಿಂಗಾಯತ ಅಭಿವೃದ್ಧಿ ನಿಗಮದ ಜೀವಜಲ ಯೋಜನೆಯಲ್ಲಿ 2021–22ನೇ ಸಾಲಿಗೆ ಸೌಲಭ್ಯ ಪಡೆಯಲು ಅರ್ಜಿ ಆಹ್ವಾನಿಸಿದ್ದು, ಅರ್ಜಿ ಹಾಗೂ ದಾಖಲಾತಿಗಳನ್ನು ಸಲ್ಲಿಸಲು ಮೇ 10 ರವರೆಗೆ ಕಾಲಾವಕಾಶ ನೀಡಲಾಗಿದೆ ಎಂದು ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮದ ಜಿಲ್ಲಾ ವ್ಯವಸ್ಥಾಪಕರು ತಿಳಿಸಿದ್ದಾರೆ.

ನಾಳೆ ಜಿಲ್ಲಾ ಸಹಕಾರ ಭಾರತಿ ಸದಸ್ಯತ್ವ ಆಂದೋಲನ

ಮಡಿಕೇರಿ, ಮೇ 7– ಜಿಲ್ಲಾ ಸಹಕಾರ ಭಾರತಿ ಸದಸ್ಯತ್ವ ಆಂದೋಲನವು ಮೇ 9 ರಂದು ಬೆಳಗ್ಗೆ 10.30 ಗಂಟೆಗೆ ಜಿಲ್ಲಾ ಸಹಕಾರ ಯೂನಿಯನ್ ಸಭಾಂಗಣದಲ್ಲಿ ನಡೆಯಲಿದೆ.

ಸಹಕಾರ ಭಾರತೀಯ ರಾಷ್ಟ್ರೀಯ ಸಂರಕ್ಷಕರಾದ ರಮೇಶ್ ವೈದ್ಯ, ರಾಜ್ಯ ಅಧ್ಯಕ್ಷ ರಾಜಶೇಖರ್ ಶೀಲಾವಂತ್, ರಾಜ್ಯ ಪ್ರಧಾನ ಕಾರ್ಯದರ್ಶಿ ಮೋಹನ್‌ದಾಸ್ ನಾಯಕ್, ರಾಜ್ಯ ಸಂಘಟನಾ ಕಾರ್ಯದರ್ಶಿ ಮಂಜುನಾಥ್, ರಾಜ್ಯ ಕಾರ್ಯದರ್ಶಿಗಳಾದ ಕೃಷ್ಣ ಪ್ರಸಾದ್, ಜಿಲ್ಲಾ ಸಹಕಾರ ಯೂನಿಯನ್ ಅಧ್ಯಕ್ಷ ಮನು ಮುತ್ತಪ್ಪ, ಜಿಲ್ಲಾ ಕೇಂದ್ರ ಬ್ಯಾಂಕಿನ ಮಾಜಿ ಅಧ್ಯಕ್ಷ ಬಿ.ಡಿ.ಮಂಜುನಾಥ್, ಸಹಕಾರ ಭಾರತಿ ರಾಜ್ಯ ಉಪಾಧ್ಯಕ್ಷ ಬಸಪ್ಪ, ಮಹಿಳಾ ಘಟಕದ ಸಂಘಟನಾ ಕಾರ್ಯದರ್ಶಿ ಬೀನಾ ಬೊಳ್ಳಮ್ಮ, ಸಹಕಾರ ಭಾರತಿ ಕೊಡಗು ಜಿಲ್ಲಾ ಅಧ್ಯಕ್ಷ ನಾಪಂಡ ಉಮೇಶ್ ಉತ್ತಪ್ಪ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಕನ್ನಂಡ ಸಂಪತ್, ಜಿಲ್ಲಾ ಸಂಘಟನಾ ಕಾರ್ಯದರ್ಶಿ ಕಾಳನರವಿ ಸಹಕಾರ ಭಾರತಿ ಜಿಲ್ಲಾ ಪದಾಧಿಕಾರಿಗಳು, ತಾಲೂಕು ಪದಾಧಿಕಾರಿಗಳು ಮಹಿಳಾ ಘಟಕ ಪದಾಧಿಕಾರಿಗಳು ಎಲ್ಲಾ ಸದಸ್ಯರು ಇತರರು ಪಾಲ್ಗೊಳ್ಳಲಿದ್ದಾರೆ.

ಮೇ 12, ಮಡಿಕೇರಿಯಲ್ಲಿ ಬಿಜೆಪಿ ರೈತ ಸಮಾವೇಶ

ಮಡಿಕೇರಿ,ಮೇ 7– ಕಂದಾಯ ಇಲಾಖೆಗೆ ಸಂಬಂಧಿಸಿದಂತೆ ಕೊಡಗು ಜಿಲ್ಲೆಯಲ್ಲಿ ರೈತರು ಎದುರಿಸುತ್ತಿರುವ ಹಲವು ಸಮಸ್ಯೆಗಳನ್ನು ಪರಿಹರಿಸುವ ನಿಟ್ಟಿನಲ್ಲಿ ಮೇ 12ರಂದು ಕಂದಾಯ ಸಚಿವರ ನೇತೃತ್ವದಲ್ಲಿ ರೈತ ಸಮಾವೇಶ ಆಯೋಜಿಸಲಾಗಿದೆ ಎಂದು ಜಿಲ್ಲಾ ಬಿಜೆಪಿ ಅಧ್ಯಕ್ಷ ರಾಬಿನ್ ದೇವಯ್ಯ ಅವರು ತಿಳಿಸಿದರು.



ನಗರದಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಜಿಲ್ಲೆಯ ಜನತೆ ಎದುರಿಸುತ್ತಿರುವ ವಿವಿಧ ಸಮಸ್ಯೆಗಳನ್ನು ಪರಿಹರಿಸುವ ನಿಟ್ಟಿನಲ್ಲಿ ಸರಕಾರವನ್ನೇ ಜನರ ಬಳಿಗೆ ಕರೆತರುವ ಕಾರ್ಯವನ್ನು ಬಿಜೆಪಿ ಮಾಡುತ್ತಿದ್ದು, ಇದರ ಮೊದಲ ಹಂತವಾಗಿ ಕಂದಾಯ ಸಚಿವರನ್ನು ಆಹ್ವಾನಿಸಲಾಗಿದೆ. ಮುಂದಿನ ದಿನಗಳಲ್ಲಿ ಇತರ ಇಲಾಖೆಗಳ ಸಚಿವರನ್ನೂ ಆಹ್ವಾನಿಸಲಾಗುವುದು ಎಂದು ವಿವರಿಸಿದರು.

ಮೇ 12ರ ಬೆಳಗ್ಗೆ 11 ಗಂಟೆಗೆ ನಗರದ ಕ್ರಿಸ್ಟಲ್ ಹಾಲ್ ಸಭಾಂಗಣದಲ್ಲಿ ನಡೆಯಲಿರುವ ಸಮಾವೇಶದಲ್ಲಿ ಕಂದಾಯ ಸಚಿವ ಆರ್.ಅಶೋಕ್, ಸಂಸದ ಪ್ರತಾಪ್ ಸಿಂಹ, ಶಾಸಕರಾದ ಕೆ.ಜಿ.ಬೋಪಯ್ಯ, ಅಪ್ಪಚ್ಚು ರಂಜನ್, ಸುಜಾ ಕುಶಾಲಪ್ಪ ಭಾಗವಹಿಸಲಿದ್ದು, ಮುಖ್ಯವಾಗಿ ಸರ್ಕಾರಿ(ಪೈಸಾರಿ) ಜಮೀನು ಒತ್ತುವರಿ ಮಾಡಿ ಕೃಷಿ ಮಾಡಿಕೊಂಡಿರುವವರನ್ನು ಒಕ್ಕಲೆಬ್ಬಿಸದೆ, ಅವರಿಗೆ ಅದೇ ಜಾಗವನ್ನು ನಿಗದಿತ ದರದಲ್ಲಿ 30 ವರ್ಷಗಳ ಕಾಲ ಗುತ್ತಿಗೆ ಕೊಡುವಂತೆ ಮತ್ತು ಕೊಡಗಿನಲ್ಲಿ ಬಹಳ ದಿನಗಳಿಂದ ಕಾಡುತ್ತಿರುವ ಪೌತಿ ಖಾತೆ ಸಮಸ್ಯೆಗೆ ಸಲಹೆ ಹಾಗೂ ಇತ್ಯರ್ಥ ಮತ್ತು ಕಂದಾಯ ಇಲಾಖೆಯ ಇತರ ಸಮಸ್ಯೆಗಳ ಬಗ್ಗೆ ರೈತರಿಂದ ಸಲಹೆ ಪಡೆಯಲಾಗುವುದು ಎಂದು ತಿಳಿಸಿದ ರಾಬಿನ್ ದೇವಯ್ಯ ಅವರು, ಸಮಾವೇಶದಲ್ಲಿ ವ್ಯಕ್ತವಾಗುವ ಅಭಿಪ್ರಾಯಗಳನ್ನು ಕ್ರೋಢೀಕರಿಸಿ ಮಧ್ಯಾಹ್ನದ ಬಳಿಕ ಸಚಿವರು ಅಧಿಕಾರಿಗಳೊಂದಿಗೆ ಚರ್ಚಿಸಿ ತೀರ್ಮಾನ ಕೈಗೊಳ್ಳಲಿದ್ದಾರೆ ಎಂದು ನುಡಿದರು.

ಜಿಲ್ಲೆಯ ರೈತರು ಸಮಾವೇಶದಲ್ಲಿ ತಮ್ಮ ಸಮಸ್ಯೆಗಳ ಬಗ್ಗೆ ಸಚಿವರಿಗೆ ಲಿಖಿತವಾಗಿ ಮನವಿ ಸಲ್ಲಿಸಬಹುದಾಗಿದ್ದು, ಈ ಸಮಾವೇಶದಲ್ಲಿ ರೈತರು ಹಾಗೂ ಸಾರ್ವಜನಿಕರು ಪಕ್ಷಾತೀತವಾಗಿ ಭಾಗವಹಿಸಬಹುದೆಂದು ತಿಳಿಸಿದರು.

ಪಿಎಸ್‌ಐ ಅಕ್ರಮ: ನ್ಯಾಯಾಂಗ ತನಿಖೆಗೆ ಆಗ್ರಹಿಸಿ ಪ್ರತಿಭಟನೆ



ಮಡಿಕೇರಿ,ಮೇ 7– ಪಿಎಸ್‌ಐ ನೇಮಕಾತಿಯಲ್ಲಿ ನಡೆದಿರುವ ಅಕ್ರಮದ ವಿರುದ್ಧ ನ್ಯಾಷನಲ್ ಸ್ಟೂಡೆಂಡ್ಸ್ ಯೂನಿಯನ್ ಆಫ್ ಇಂಡಿಯಾದ ಕೊಡಗು ಜಿಲ್ಲಾ ಘಟಕ ನಗರದಲ್ಲಿ ಪ್ರತಿಭಟನೆ ನಡೆಸಿತು. ನಗರದ ಇಂದಿರಾ ಗಾಂಧಿ ವೃತ್ತದಲ್ಲಿ ಜಮಾಯಿಸಿದ ಎನ್‌ಎಸ್‌ಯುಐನ ಪ್ರಮುಖರು ಹಾಗೂ ಕಾರ್ಯಕರ್ತರು ಪ್ರಕರಣವನ್ನು ನ್ಯಾಯಾಂಗ ತನಿಖೆಗೆ ಒಪ್ಪಿಸಬೇಕೆಂದು ಆಗ್ರಹಿಸಿದರು.

ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಧರ್ಮಜಾ ಉತ್ತಪ್ಪ ಮಾತನಾಡಿ, ರಾಜ್ಯ ಸರಕಾರ ನಡೆಸಿದ ಪಿ.ಎಸ್.ಐ ಹುದ್ದೆಗಳ ನೇಮಕಾತಿಯಲ್ಲಿ ಭಾರೀ ಅವ್ಯವಹಾರ ನಡೆದಿರುವುದು ಇದೀಗ ಬಹಿರಂಗವಾಗಿದೆ. ಬಿಜೆಪಿ ಸರಕಾರ ಅಧಿಕಾರಕ್ಕೆ ಬಂದಾಗಿನಿಂದಲೂ ವಿವಿಧ ಹಗರಣಗಳು ನಡೆಯುತ್ತಲೇ ಇದೆ ಎಂದು ಆರೋಪಿಸಿದರು. ಕೋಟ್ಯಾಂತರ ರೂ. ಹಗರಣದ ಪ್ರಕರಣದಲ್ಲಿ ಶಾಮೀಲಾಗಿರುವ ಆರೋಪ ಎದುರಿಸುತ್ತಿರುವ ಸಚಿವರುಗಳು ತಕ್ಷಣ ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಬೇಕೆಂದು ಒತ್ತಾಯಿಸಿದರು.

ಎಷ್ಟೋ ಅಭ್ಯರ್ಥಿಗಳು ಆತ್ಮಸ್ಥೈರ್ಯ ಕಳೆದುಕೊಂಡಿದ್ದು, ಮರುಪರೀಕ್ಷೆ ಮಾಡುವ ನಿರ್ಧಾರವನ್ನು ಕೈಬಿಡಬೇಕು ಮತ್ತು ಅಕ್ರಮದಲ್ಲಿ ಭಾಗಿಯಾದವರ ವಿರುದ್ಧ ಕಾನೂನು ಕ್ರಮ ಜರುಗಿಸಿ ಪ್ರಾಮಾಣಿಕರನ್ನು ನೇಮಕ ಮಾಡಿಕೊಳ್ಳಬೇಕು. ಹಗರಣವನ್ನು ನ್ಯಾಯಾಂಗ ತನಿಖೆಗೆ ಒಪ್ಪಿಸಬೇಕೆಂದು ಒತ್ತಾಯಿಸಿದರು.

ಮರು ಪರೀಕ್ಷೆ ಆದೇಶವನ್ನು ಹಿಂಪಡೆಯದಿದ್ದಲ್ಲಿ ಜಿಲ್ಲಾ ಎನ್.ಎಸ್.ಯು.ಐ ತೀವ್ರ ಪ್ರತಿಭಟನೆ ನಡೆಸಲಾಗುವುದು ಎಂದು ಎಚ್ಚರಿಕೆ ನೀಡಿದರು.

ಎನ್‌ಎಸ್‌ಯುಐ ಜಿಲ್ಲಾಧ್ಯಕ್ಷ ರೋಶನ್ ಗಣಪತಿ, ಸಾಮಾಜಿಕ ಜಾಲತಾಣ ಘಟಕದ ಅಧ್ಯಕ್ಷ ಸೂರಜ್ ಹೊಸೂರು, ಮಾಜಿ ಸೈನಿಕರ ಘಟಕದ ಅಧ್ಯಕ್ಷ ಗಣೇಶ್, ಎಸ್.ಸಿ ಘಟಕದ ಅಧ್ಯಕ್ಷ ಮುದ್ದುರಾಜ್, ಪ್ರಮುಖರಾದ ನಂದಿನೆರವಂಡ ಅಯ್ಯಪ್ಪ, ಪಿ.ಎಲ್.ಸುರೇಶ್, ಧ್ರುವ, ಪಿಯೂಶ್ ಪೆರೇರ, ಎನ್‌ಎಸ್‌ಯುಐ ಕಾರ್ಯಕರ್ತರಾದ ರಾಮಕುಮಾರ್, ಸಂಗಮ್, ಲಿಖಿನ್, ಹ್ಯಾರಿಸ್, ಸುಹೇಲ್ ಮತ್ತಿತರರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

ಒಂದನೇ ಪುಟದಿಂದ

ದಾಖಲೆ ನೀಡಬೇಕು

ಆರೋಪ ಮಾಡುವವರು ದಾಖಲೆ ಒದಗಿಸಬೇಕು. ದಾಖಲೆ ರಹಿತ ಆರೋಪ ಸರಿಯಲ್ಲ ಎಂದು ಹೇಳಿದ್ದಾರೆ. ಪಿಎಸ್ಐ ನೇಮಕಾತಿ ಅಕ್ರಮ, ಗುತ್ತಿಗೆದಾರರಿಂದ ಶೇ.40ರಷ್ಟು ಕಮಿಷನ್ ಆರೋಪ, ಮುಖ್ಯಮಂತ್ರಿ ಹುದ್ದೆಗೂ ಹಣ ನೀಡಬೇಕು ಎಂಬುದು ಸೇರಿದಂತೆ ಹಲವು ವಿಧದ ಆರೋಪಗಳು ಪಕ್ಷ ಹಾಗೂ ಸರ್ಕಾರದ ವಿರುದ್ಧ ಕೇಳಿ ಬಂದಿವೆ. ಪ್ರತಿಪಕ್ಷಗಳು ಈ ಆರೋಪಗಳನ್ನೇ ಪ್ರಮುಖ ಅಸ್ತ್ರವಾಗಿ ಬಳಸಿ ಸರ್ಕಾರವನ್ನು ಇಕ್ಕಟ್ಟಿಗೆ ಸಿಲುಕಿಸಿವೆ. ಇಂಥ ಸಂದರ್ಭದಲ್ಲೇ ಆಡಳಿತ ಪಕ್ಷದವರಿಂದಲೂ ಭ್ರಷ್ಟಾಚಾರದ ಆರೋಪಕ್ಕೆ ಪುಷ್ಟಿ ನೀಡುವ ಹೇಳಿಕೆ ಕೇಳಿ ಬಂದಿರುವುದು ಸರ್ಕಾರಕ್ಕೆ ಬಿಸಿ ತುಪ್ಪವಾಗಿ ಪರಿಣಮಿಸಿದ್ದು, ಮುಜುಗರ ಅನುಭವಿಸುವಂತಾಗಿದೆ. ಯತ್ನಾಳ್ ಅವರ ಹೆಸರನ್ನು ನೇರವಾಗಿ ಮುಖ್ಯಮಂತ್ರಿ ಪ್ರಸ್ತಾಪಿಸದಿದ್ದರೂ ಪರೋಕ್ಷವಾಗಿ ವಿರೋಧ ಪಕ್ಷಕ್ಕಿಂತ ತಮ್ಮ ಪಕ್ಷದವರನ್ನೇ ಗುರಿಯಾಗಿಸಿ ಹೀಗೆ ಹೇಳಿದ್ದಾರೆ. ಯಾರು ಏನೇನು ಹೇಳಿಕೆ ನೀಡುವರೋ ಅವರು ತಮ್ಮ ಹೇಳಿಕೆಗೆ ಬದ್ಧರಾಗಿ ಪೂರಕ ದಾಖಲೆ, ಪುರಾವೆ ಗಳನ್ನು ಒದಗಿಸುವುದು ಅವರ ಕರ್ತವ್ಯ ಮತ್ತು ಜವಾಬ್ದಾರಿ ಎಂದು ಮುಖ್ಯಮಂತ್ರಿ ಸುದ್ದಿಗಾರರಿಗೆ ಹೇಳಿದ್ದಾರೆ.

ಯಾರು ಹೇಳಿಕೆ ನೀಡುವರೋ ಅವರು ತಮ್ಮ ಹೇಳಿ ಕೆಗೆ ಸಂಬಂಧಿಸಿದ ಅಗತ್ಯ ದಾಖಲೆಗಳನ್ನು ನೀಡಿದರೆ ತನಿಖೆಗೆ ಒಳಪಡಿಸಿಕೊಳ್ಳುತ್ತೇವೆ ಎಂದು ತಿಳಿಸಿದ್ದಾರೆ. ಪಿ.ಎಸ್.ಐ ಹಗರಣಕ್ಕೆ ಸಂಬಂಧಿಸಿದಂತೆ ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಅವರು ನೀಡಿರುವ ಹೇಳಿಕೆ ಬಗ್ಗೆ ಪ್ರತಿಕ್ರಿಯೆ ನೀಡಿ, ದಾಖಲೆಗಳನ್ನು ಒದಗಿಸಿದರೆ ತನಿಖೆಗೆ ಒಳಪಡಿಸುತ್ತೇವೆ ಎಂದು ಹೇಳಿದ್ದಾರೆ. ಶಾಸಕ ಪ್ರಿಯಾಂಕ್ ಖರ್ಗೆ ಮಾಡಿರುವ ಟ್ವೀಟ್‌ಗೆ ಪ್ರತಿಕ್ರಿಯೆ ನೀಡಿರುವ ಅವರು, ಕಾಂಗ್ರೆಸ್ ಭ್ರಷ್ಟಾಚಾರದ ಗಂಗೋತ್ರಿ. ಖರ್ಗೆ ಮೂಲ ಕಾಂಗ್ರೆಸ್ಸಿಗರು. ಅವರಿಗೆ ಇದೆಲ್ಲವೂ ಕರಗತವಾಗಿದೆ. ಖರ್ಗೆಯವರಿಂದ ಪಾಠ ಕಲಿಯುವ ಅವಶ್ಯಕತೆ ಇಲ್ಲ ಎಂದು ತಿಳಿಸಿದ್ದಾರೆ.

ರಾಜ್ಯದಲ್ಲಿ ಬಿ.ಜೆ.ಪಿ ಪರವಾದ ಅಲೆಯಿದ್ದು, ಅದರ ಪ್ರಭಾವದಿಂದ ಹಲವಾರು ಕ್ಷೇತ್ರಗಳಲ್ಲಿ ಪ್ರಥಮ ಬಾರಿಗೆ ವಿಜಯವನ್ನು ಸಾಧಿಸುವ ಅವಕಾಶಗಳು ಸಿಕ್ಕಿವೆ. ಪಕ್ಷದ ಸಿದ್ಧಾಂತವನ್ನು ಒಪ್ಪಿ ಬರುವವರನ್ನು ಪಕ್ಷಕ್ಕೆ ಸೇರ್ಪಡೆ ಮಾಡಿಕೊಳ್ಳುವ ಕೆಲಸ ನಡೆಯುತ್ತಿದೆ. ಬರುವ ದಿನಗಳಲ್ಲಿ ಇನ್ನೂ ಹೆಚ್ಚಿನ ಜನ ಬಿಜೆಪಿ ಸೇರಲಿದ್ದಾರೆ.

ಯಾರನ್ನು ಪಕ್ಷಕ್ಕೆ ಸೇರಿಸಿಕೊಳ್ಳಬೇಕು ಎಂಬುದನ್ನು ಪಕ್ಷದ ಜಿಲ್ಲಾ ಮತ್ತು ರಾಜ್ಯ ಘಟಕ ನೋಡಿಕೊಳ್ಳುತ್ತದೆ ಎಂದರು. ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಹಾಗೂ ಸಂಸದ ಡಿ.ಕೆ.ಸುರೇಶ ಅವರ ಮೇಲಿನ ಆರೋಪಕ್ಕೆ ಸಂಬಂಧಿಸಿದಂತೆ ಕೇಳಿದ ಪ್ರಶ್ನೆಗೆ ಪ್ರತಿಕ್ರಿಯಿಸಿದ ಅವರು, ಸಂತ್ರಸ್ತರು ದೂರು ನೀಡಿದರೆ ತನಿಖೆಯಾಗುತ್ತದೆ ಎಂದು ಹೇಳಿದ್ದಾರೆ.

ಸಿಎಂ ಬದಲಾವಣೆ ಮಾತೇ ಇಲ್ಲ

ಆಗಲಿದ್ದಾರೆ ಎಂದು ಸುದ್ದಿ ಪ್ರಸಾರವಾಗುತ್ತಿದೆ ಎಂದು ಪ್ರಹ್ಲಾದ್ ಜೋಷಿ ಹೇಳಿದ್ದಾರೆ. PSI ನೇಮಕಾತಿಯಲ್ಲಿ ಅಕ್ರಮ ಕುರಿತು ಮಾತನಾಡಿದ ಅವರು, ಮೊದಲಿಗೆ ಸುದ್ದಿ ಕೊಟ್ಟ ಪ್ರಿಯಾಂಕ್ ಖರ್ಗೆ ಈಗ ಯಾಕೆ ತನಿಖೆಗೆ ಸಹಕಾರ ಕೊಡುತ್ತಿಲ್ಲ. ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ರುದ್ರಗೌಡ 24 ಗಂಟೆ ಪ್ರಿಯಾಂಕ್ ಮನೆಯಲ್ಲಿ ಇರುತ್ತಿದ್ದರು. ಅಂತಹವರು ಹಗರಣದಲ್ಲಿ ಭಾಗಿಯಾಗಿದ್ದಾರೆ. ಅದನ್ನು ಮರೆಮಾಚಲು ಪ್ರಿಯಾಂಕ್ ಯತ್ನಿಸಿದ್ದಾರೆ. ನ್ಯಾಯಾಂಗ ತನಿಖೆಯಲ್ಲಿ ಬಂಧನ ಸಾಧ್ಯತೆ ಕಡಿಮೆ. ಅದಕ್ಕಾಗಿ ನ್ಯಾಯಾಂಗ ತನಿಖೆಗೆ ಆಗ್ರಹ ಮಾಡುತ್ತಿದ್ದಾರೆ ಆರೋಪಿಸಿದ್ದಾರೆ.

50 ಸಾವಿರ ಎಕರೆ ಭೂಸ್ವಾಧೀನ

ಉತ್ಪನ್ನಗಳೊಂದಿಗೆ ತೊಡಗಿಸಿಕೊಂಡಿರುವ ಉದ್ಯಮಿಗಳು ಯೋಜನಾ ವೆಚ್ಚದ ಶೇ.35 ರಷ್ಟು ಕ್ರೆಡಿಟ್-ಲಿಂಕ್ಡ್ ಕ್ಯಾಪಿಟಲ್ ಸಬ್ಸಿಡಿಯನ್ನು ಪ್ರತಿ ಯೂನಿಟ್‌ಗೆ ಗರಿಷ್ಠ 10 ಲಕ್ಷ ರೂಪಾಯಿ ಪಡೆಯಬಹುದು ಎಂದು ಸಲಹೆ ಮಾಡಿದರು.

ರಾಜ್ಯದಾದ್ಯಂತ ಸಮತೋಲಿತ ಕೈಗಾರಿಕೀಕರಣವನ್ನು ಉತ್ತೇಜಿಸಲು ನಾವು ತೆಗೆದುಕೊಂಡಿರುವ ಮತ್ತೊಂದು ಪ್ರಮುಖ ನಿರ್ಧಾರವೆಂದರೆ ಉತ್ಪನ್ನ ನಿರ್ದಿಷ್ಟ ಕೈಗಾರಿಕಾ ಕ್ಲಸ್ಟರ್. ಈ ಯೋಜನೆ ಮೂಲಕ ಹಲವು ಕೈಗಾರಿಕಾ ಸಮೂಹಗಳನ್ನು ಗುರುತಿಸಲಾಗಿದ್ದು, ಪ್ರತಿ ಕ್ಲಸ್ಟರ್‌ಗೆ ಆಯಾ ಉತ್ಪನ್ನ ವಲಯಕ್ಕೆ ನಿರ್ದಿಷ್ಟವಾದ ವಿಶೇಷ ಪ್ರೋತ್ಸಾಹ ಮತ್ತು ರಿಯಾಯಿತಿಗಳನ್ನು ಘೋಷಿಸಲಾಗಿದೆ ಎಂದು ತಿಳಿಸಿದರು.

ಕೊಪ್ಪಳದಲ್ಲಿ ಆಟಿಕೆ ಕ್ಲಸ್ಟರ್ ಈಗಾಗಲೇ ಕಾರ್ಯಾಚರಣೆ ಆರಂಭಿಸಿದ್ದು, ಉದ್ದಿಮೆ ಬೆಂಬಲಿತ ಸೇವೆಗಳನ್ನು ಕ್ಲಸ್ಟರ್ ಒಳಗೊಂಡಿದೆ. ಅಲ್ಲಿನ ಉದ್ಯೋಗಿಗಳಿಗೆ ಅನುಕೂಲವಾಗುವಂತೆ ಸಾಮಾಜಿಕ ಮೂಲಸೌಕರ್ಯ ಮತ್ತು ವಸತಿ ಸೌಕರ್ಯಗಳನ್ನು ಹೊಂದಿದೆ ಎಂದು ನಿರಾಣಿ ವಿವರಿಸಿದರು. ತುಮಕೂರು ಮೆಷಿನ್ ಟೂಲ್ ಪಾರ್ಕ್ ಮತ್ತು ಜಪಾನೀಸ್ ಇಂಡಸ್ಟ್ರಿಯಲ್ ಟೌನ್‌ಶಿಪ್‌ನಲ್ಲಿ 2 ಲಕ್ಷಕ್ಕೂ ಹೆಚ್ಚು ಉದ್ಯೋಗಗಳನ್ನು ಸೃಷ್ಟಿಸುವ 6.5 ಬಿಲಿಯನ್ ಹೂಡಿಕೆ ಆಕರ್ಷಿಸುವ ಗುರಿ ಹೊಂದಲಾಗಿದೆ ಎಂದರು.

ವಿದೇಶಿ ನೇರ ಹೂಡಿಕೆಯಲ್ಲಿ ಒಟ್ಟು ಶೇ.42 ರಷ್ಟು ಹೂಡಿಕೆಯನ್ನು ಆಕರ್ಷಿಸುವ ಮೂಲಕ ಕರ್ನಾಟಕ ದೇಶದಲ್ಲೇ ಅಗ್ರ ಸ್ಥಾನದಲ್ಲಿದೆ. 2021-2022ರ ಆರ್ಥಿಕ ಸಾಲಿನಲ್ಲಿ ಸತತ ಎರಡು ತ್ರೈಮಾಸಿಕಗಳಲ್ಲಿ, ಕರ್ನಾಟಕವು ದೇಶದಲ್ಲೇ ಅತಿ ಹೆಚ್ಚು ವಿದೇಶಿ ನೇರ ಬಂಡವಾಳ ಆಕರ್ಷಿಸಿದೆ ಎಂದು ತಿಳಿಸಿದರು.

ವೈಷಮ್ಯಕ್ಕೆ ಕಗ್ಗೊಲೆ

ಆರೋಪಿಗಳನ್ನು ರವಿ ಕೊಲೆ ನಡೆದಿದ್ದ ಎಪಿಎಂಸಿ ಪ್ರಾಂಗಣದ ತರಕಾರಿ ಮಾರುಕಟ್ಟೆಯ ಸ್ಟಾಲ್ ನಂ.8ರ ಬಳಿಗೆ ಕರೆದೊಯ್ದು ಸ್ಥಳ ಮಹಜರು ನಡೆಸಿ, ಹತ್ಯೆಗೆ ಬಳಸಿದ್ದ ಮಚ್ಚು, ಲಾಂಗ್, ಒಂದು ಕಾರು ಹಾಗೂ ಬೈಕ್ ಅನ್ನು ಪೊಲೀಸರು ವಶಪಡಿಸಿಕೊಂಡರು. ನಂತರ ನ್ಯಾಯಾಧೀಶರ ಮುಂದೆ ಆರೋಪಿಗಳನ್ನು ಹಾಜರುಪಡಿಸಿದ್ದು, ಹೆಚ್ಚಿನ ವಿಚಾರಣೆಗಾಗಿ ಇವರನ್ನು 4 ದಿನ ಪೊಲೀಸರ ವಶಕ್ಕೆ ನೀಡಿ ನ್ಯಾಯಾಧೀಶರು ಆದೇಶಿಸಿದ್ದಾರೆ.

ಹಿನ್ನೆಲೆ: ಬಂಡಿಪಾಳ್ಯ ಎಪಿಎಂಸಿಯಲ್ಲಿ ಲೋಡರ್ ಕಾಂಟ್ರಾಕ್ಟರ್‌ಗಳಾಗಿ ಕಾರ್ಯ ನಿರ್ವಹಿಸುತ್ತಿದ್ದ ಗೌತಮ್, ಲೋಹಿತ್ ಮತ್ತು ಮಹೇಶ್ ಆರಂಭದಲ್ಲಿ ಕ್ಯಾಪ್ಸಿಕಮ್ ರವಿಗೂ ಕೂಡ ಲೋಡರ್‌ಗಳನ್ನು ಒದಗಿಸುತ್ತಿದ್ದರು ಎಂದು ಹೇಳಲಾಗಿದೆ. ಕಳೆದ 2 ವರ್ಷದ ಹಿಂದೆ ಗೌತಮ್ ಮತ್ತು ಕ್ಯಾಪ್ಸಿಕಮ್ ರವಿ ನಡುವೆ ಯಾವುದೋ ವಿಚಾರಕ್ಕಾಗಿ ಮನಸ್ತಾಪ ಉಂಟಾಗಿ ಕ್ಯಾಪ್ಸಿಕಮ್ ರವಿ ಇವರಿಂದ ಲೋಡರ್‌ಗಳನ್ನು ಪಡೆಯುವುದನ್ನು ನಿಲ್ಲಿಸಿ, ಲೋಡಿಂಗ್ ಮತ್ತು ಅನ್‌ಲೋಡಿಂಗ್‌ಗೆ ತನ್ನದೇ ಆದ ಲೋಡರ್‌ಗಳನ್ನು ವ್ಯವಸ್ಥೆ ಮಾಡಿಕೊಂಡಿದ್ದ ಎನ್ನಲಾಗಿದೆ. ಈ ಕಾರಣಕ್ಕಾಗಿ ಗೌತಮ್ ಮತ್ತು ರವಿ ನಡುವೆ ಪದೇ ಪದೆ ಗಲಾಟೆಗಳಾಗುತ್ತಿತ್ತು. ಒಮ್ಮೆ ಗೌತಮ್ ಕೆಲವರೊಂದಿಗೆ ರವಿ ಮನೆಗೆ ತೆರಳಿ ಗಲಾಟೆ ಮಾಡಿದ್ದ. ನಂತರ ಗೌತಮ್ ಮೇಲೆ ಕೆಲವರಿಂದ ರವಿ ಹಲ್ಲೆ ನಡೆಸಿದ್ದ. ಆದರೆ ಇದರ ಬಗ್ಗೆ ಯಾವುದೇ ಪೊಲೀಸ್ ಠಾಣೆಯಲ್ಲೂ ದೂರು ದಾಖಲಾಗಿಲ್ಲ ಎಂದು ಪೊಲೀಸರು ತಿಳಿಸಿದ್ದಾರೆ. ಗಲಾಟೆ ವೇಳೆ ರವಿ ಜಾತಿ ಹೆಸರಿನಲ್ಲಿ ಬೈದಿದ್ದನ್ನೇ ಗೌತಮ್ ಮನಸ್ಸಿನಲ್ಲಿಟ್ಟುಕೊಂಡು ಪ್ರತೀಕಾರ ತೀರಿಸಿ ಕೊಳ್ಳಲೇಬೇಕೆಂಬ ಉದ್ದೇಶದಿಂದ ರವಿ ಹತ್ಯೆಗೆ ಸಂಚು ರೂಪಿಸಿದ್ದ ಎಂಬುದು ವಿಚಾರಣೆ ವೇಳೆ ಬೆಳಕಿಗೆ ಬಂದಿದೆ.

ಸ್ಟಾಲ್‌ನಲ್ಲಿ ರವಿ ಒಬ್ಬನೇ ಇದ್ದಾಗ ತಮಗೆ ಮಾಹಿತಿ ನೀಡುವಂತೆ ತಮ್ಮ ಬಳಿಯೇ ಲೋಡರ್‌ಗಳಾಗಿದ್ದ ಕಿರಣ್ ಮತ್ತು ಸತ್ಯನಾರಾಯಣನಿಗೆ ತಿಳಿಸಿದ್ದ ಗೌತಮ್, ಮೇ 3ರಂದು ಸಂಜೆ 5.30ರ ವೇಳೆಗೆ ರವಿ ಒಬ್ಬನೇ ಇರುವ ಮಾಹಿತಿ ಸಿಕ್ಕಿದ ತಕ್ಷಣ ಲೋಹಿತ್ ಮತ್ತು ಮಹೇಶ್‌ನೊಡಗೂಡಿ ರವಿಯ ಸ್ಟಾಲ್‌ಗೆ ನುಗ್ಗಿ ಮಚ್ಚು, ಲಾಂಗ್‌ನಿಂದ ಹಲ್ಲೆ ನಡೆಸಿ ರವಿಯನ್ನು ಹತ್ಯೆಗೈದು ಪರಾರಿಯಾಗಿದ್ದರು ಎಂದು ತಿಳಿದುಬಂದಿದೆ.

ಬಂಧಿತರ ಪೈಕಿ ಗೌತಮ್ ರೌಡಿಶೀಟರ್ ಆಗಿದ್ದು, ಮಂಡಿ, ಎನ್‌ಆರ್ ಠಾಣೆ ವ್ಯಾಪ್ತಿಯಲ್ಲಿ ಅಪರಾಧ ಕೃತ್ಯಗಳನ್ನು ಎಸಗಿರುವ ಬಗ್ಗೆ ಪ್ರಕರಣಗಳು ದಾಖಲಾಗಿವೆ ಎಂದು ಮೂಲಗಳು ತಿಳಿಸಿವೆ. ಜಿಲ್ಲೆ ಎಸ್ಪಿ ಆರ್.ಚೇತನ್ ನಿರ್ದೇಶನದಂತೆ ಎಎಸ್ಪಿ ಆರ್. ಶಿವಕುಮಾರ್ ಮಾರ್ಗದರ್ಶನ ಹಾಗೂ ಡಿವೈಎಸ್ಪಿ ಡಾ.ಆರ್.ಸುಮಿತ್ ಮೇಲ್ವಿಚಾರಣೆಯಲ್ಲಿ ನಡೆದ ಈ ಕಾರ್ಯಾಚರಣೆಯಲ್ಲಿ ಮೈಸೂರು ದಕ್ಷಿಣ ಗ್ರಾಮಾಂತರ ಠಾಣೆ ಇನ್ಸ್‌ಪೆಕ್ಟರ್ ವಿ.ಎಸ್. ಶಶಿಕುಮಾರ್, ಸಬ್ ಇನ್ಸ್‌ಪೆಕ್ಟರ್ ಕೆಂಪಣ್ಣ, ಸಿಬ್ಬಂದಿಗಳಾದ ಪ್ರಸನ್ನಕುಮಾರ್, ಮಹೇಶ್, ಸುನಿಲ್, ಸುನಿಲ್‌ಕುಮಾರ್, ಸತೀಶ್ ಪಾಲ್ಗೊಂಡಿದ್ದರು.

ಹಳೇ ದ್ವೇಷದಿಂದ ಕ್ಯಾಪ್ಸಿಕಮ್ ರವಿ ಕೊಲೆ ನಡೆದಿದೆ ಎಂದು ಪೊಲೀಸ್ ಮೂಲಗಳು ತಿಳಿಸಿವೆಯಾದರೂ, ಮತ್ತೊಂದು ಮೂಲದ ಪ್ರಕಾರ ಕ್ಯಾಪ್ಸಿಕಮ್ ರವಿಗೆ ಲೋಡರ್‌ಗಳನ್ನು ಒದಗಿಸುತ್ತಿದ್ದ ಗೌತಮ್ ಮತ್ತು ರವಿ ನಡುವೆ ಕಳೆದ 2 ವರ್ಷದ ಹಿಂದೆ ಕೊರೊನಾ ಸಂದರ್ಭದಲ್ಲಿ ಯಾವುದೋ ಕಾರಣಕ್ಕಾಗಿ ಗಲಾಟೆಯಾಗಿದೆ. ಎಪಿಎಂಸಿಯಲ್ಲಿ ತಕ್ಕ ಮಟ್ಟಿಗೆ ಪ್ರಭಾವ ಹೊಂದಿದ್ದ ರವಿ, ಗೌತಮ್ ತಂಡದಿಂದ ಲೋಡರ್‌ಗಳನ್ನು ಪಡೆಯುವುದನ್ನು ಬಿಟ್ಟು ತನ್ನದೇ ಆದ ಲೋಡರ್‌ಗಳನ್ನು ಬಳಸಿಕೊಳ್ಳುತ್ತಿದ್ದ. ಎಪಿಎಂಸಿಯಲ್ಲಿ ಈತನಿಗೆ ಹೆಚ್ಚಿನ ಲೋಡ್‌ಗಳು ಬರುತ್ತಿದ್ದ ಕಾರಣ ಸಹಜವಾಗಿಯೇ ಗೌತಮ್ ತಂಡಕ್ಕೆ ನಷ್ಟವಾಗುತ್ತಿತ್ತು. ಈ ನಡುವೆ ಗೌತಮ್ ತಂಡದಿಂದ ಲೋಡರ್‌ಗಳನ್ನು ಪಡೆಯುತ್ತಿದ್ದ ಕೆಲವು ಏಜೆಂಟರ ಸಂಪರ್ಕವನ್ನೂ ಕೂಡ ತನ್ನ ಪ್ರಭಾವ ಬಳಸಿ ಕಡಿತಗೊಳಿಸಿದ್ದ ಎಂದು ಹೇಳಲಾಗಿದೆ. ಕಾಲಕ್ರಮೇಣ ಗೌತಮ್ ತಂಡ ಹೊಂದಿದ್ದ ಲೋಡರ್‌ಗಳಿಗೆ ಕೆಲಸ ಸಿಗುವುದು ತುಸು ಕಷ್ಟವಾಯಿತು. ಲೋಡರ್‌ಗಳು ತಮ್ಮ ಕೈಬಿಟ್ಟು ಹೋಗುವ ಆತಂಕ ಗೌತಮ್ ತಂಡಕ್ಕೆ ಉಂಟಾಯಿತೆನ್ನಲಾಗಿದೆ. ಹೀಗಾಗಿ ರವಿಯನ್ನು ಸಂಪರ್ಕಿಸಿದ ಗೌತಮ್ ತಂಡ, ಲೋಡಿಂಗ್ ಮತ್ತು ಅನ್‌ಲೋಡಿಂಗ್‌ಗೆ ತಮ್ಮ ಬಳಿಯೇ ಲೋಡರ್‌ಗಳನ್ನು ಪಡೆಯಬೇಕು ಎಂದು ಒತ್ತಾಯಿಸಿತ್ತು ಎಂದು ಹೇಳಲಾಗಿದೆ. ಆದರೆ ಪ್ರಭಾವಶಾಲಿಯಾಗಿದ್ದ ರವಿ ಇವರ ಬೇಡಿಕೆ ಹಾಗೂ ಒತ್ತಡಕ್ಕೆ ಮಣಿಯಲಿಲ್ಲ. ಅದು ಮಾತ್ರವಲ್ಲದೆ ಲೋಡರ್‌ಗಳು ಮತ್ತು ಗೌತಮ್ ತಂಡದ ಸಂಪರ್ಕವನ್ನು ಕಡಿತಗೊಳಿಸುವ ಪ್ರಯತ್ನವನ್ನು ಮಾಡಿದ್ದ. ಇದುವೇ ಆತನ ಕೊಲೆಗೆ ಪ್ರಮುಖ ಕಾರಣ ಎಂದು ಮೂಲಗಳು ತಿಳಿಸಿವೆ. ರವಿ ಕೊಲೆ ಸಂಬಂಧ ಆತನ ಸಹೋದರ ಪೊಲೀಸರಿಗೆ ನೀಡಿದ್ದ ದೂರಿನಲ್ಲಿ ಕೂಡ ಕಮಿಷನ್ ವಿಚಾರವಾಗಿ ದ್ವೇಷ ಉಂಟಾಗಿತ್ತು ಎಂದು ತಿಳಿಸಿದ್ದಾರೆ. ಆದರೆ ರವಿ ಮತ್ತು ಗೌತಮ್ ತಂಡದ ನಡುವೆ ಯಾವುದೇ ರೀತಿಯ ವ್ಯವಹಾರ ನಡೆಯದಿದ್ದಾಗ ಕಮಿಷನ್ ವಿಚಾರ ಬರುವುದೇ ಇಲ್ಲ ಎಂಬುದನ್ನೂ ಕೂಡ ಮೂಲಗಳು ಉಲ್ಲೇಖಿಸುತ್ತಿವೆ.

ಕೊಡಗು ಮಾಜಿ ಸೈನಿಕರ ಕ್ಷೇಮಾಭಿವೃದ್ಧಿ ಸಂಘದ ವಾರ್ಷಿಕ ಸಂತೋಷ ಕೂಟ

ಮಾಜಿ ಸೈನಿಕರಿಗೆ ಸರ್ಕಾರಿ ಸವಲತ್ತು ದೊರಕಿಸಿಕೊಡಲು ಕಟಿಬದ್ಧ

ಪರಿಷತ್ ಸದಸ್ಯರೂ ಆದ ಮಾಜಿ ಸೈನಿಕ ಸಿ.ಎನ್.ಮಂಜೇಗೌಡ

ಮೈಸೂರು,ಮೇ 7(ಪಿಎಂ)- ಮಾಜಿ ಸೈನಿಕರಿಗೆ ಸರ್ಕಾರದ ಸೌಲಭ್ಯಗಳು ಸಮರ್ಪಕವಾಗಿ ದೊರಕಬೇಕು. ಈ ನಿಟ್ಟಿನಲ್ಲಿ ಕೆಲಸ ಮಾಡುವುದರಲ್ಲಿ ನಾನು ರಾಜೀ ಆಗುವುದಿಲ್ಲವೆಂದು ವಿಧಾನಪರಿಷತ್ ಸದಸ್ಯರೂ ಆದ ಮಾಜಿ ಸೈನಿಕ ಸಿ.ಎನ್.ಮಂಜೇಗೌಡ ತಿಳಿಸಿದರು.

ಮೈಸೂರಿನ ಬನ್ನೂರು ರಸ್ತೆಯ ಶ್ರೀ ಚಾಮುಂಡೇಶ್ವರಿ ಕನ್ವೆನ್ಷನ್ ಹಾಲ್‌ನಲ್ಲಿ ಕೊಡಗು ಮಾಜಿ ಸೈನಿಕರ ಕ್ಷೇಮಾಭಿವೃದ್ಧಿ ಸಂಘ ಮೈಸೂರು ವತಿಯಿಂದ ಶನಿವಾರ ಹಮ್ಮಿಕೊಂಡಿದ್ದ ಸಂಘದ 4ನೇ ವಾರ್ಷಿಕ ಸಂತೋಷ ಕೂಟದಲ್ಲಿ ಅವರು ಮಾತನಾಡಿದರು.

ಸೈನಿಕರು, ಮಾಜಿ ಸೈನಿಕರಿಗೆ ಸರ್ಕಾರದ ಸೌಲಭ್ಯಗಳನ್ನು ದೊರಕಿಸಿಕೊಡಲು ನಿರಂತರ ಹೋರಾಟ ಮಾಡುತ್ತಿದ್ದೇನೆ. ಪುಲ್ವಾಮಾ ದಾಳಿಯಲ್ಲಿ ನಮ್ಮ ಸೈನಿಕರನ್ನು ಬಲಿಯಾಗಿಸಿ ದೇಶ ಆಳುತ್ತಿರುವ ನೀವು, ಸೈನಿಕರಿಗೆ ಸಮರ್ಪಕವಾಗಿ ಸಲ್ಲಬೇಕಾದ ಯಾವ ಸೌಲಭ್ಯ ಕೊಟ್ಟಿದ್ದೀರಿ? ಎಂದು ಸರ್ಕಾರದ ವಿರುದ್ಧ ಚಾಟಿ ಬೀಸಿದ್ದೇನೆ. ನಾನು ಕೇವಲ ಹೋರಾಟಗಾರ ಮಾತ್ರವಲ್ಲ, ಸಾಧನೆ ಮಾಡಬೇಕೆಂಬ ಹಂಬಲ ಹೊಂದಿದ್ದೇನೆ ಎಂದು ತಿಳಿಸಿದರು.

ಮಾಜಿ ಸೈನಿಕರೊಬ್ಬರ ಪತ್ನಿ ತಮ್ಮ ಕುಟುಂಬಕ್ಕೆ ಮನೆಯಿಲ್ಲ ಎಂದು ಮನವಿ ಕೊಟ್ಟಿದ್ದರು. ಮುಖ್ಯಮಂತ್ರಿಗಳ ಗಮನಕ್ಕೆ ತಂದು ಶೀಘ್ರವೇ ಮನೆ ಕೊಡಿಸಿದ್ದೇನೆ. ಮೈಸೂರು ತಾಲೂಕು ಕಚೇರಿ ಆವರಣದಲ್ಲಿ ನನ್ನ ಕಚೇರಿ ಇದ್ದು, ಸಾರ್ವಜನಿಕರ ಕೆಲಸ ಕಾರ್ಯಗಳನ್ನು ಪ್ರಾಮಾಣಿಕವಾಗಿ ಮಾಡಲು ಶ್ರಮಿಸುತ್ತಿದ್ದೇನೆ. 'ಮಂಜೇಗೌಡ ಅಂತ ಒಬ್ಬ ಮಾಜಿ ಸೈನಿಕ ಇದ್ದ. ಅಂತಹ ರಾಜಕಾರಣಿ ಇರಬೇಕು' ಎಂದು ಜನ ಸ್ಮರಿಸಬೇಕು ಎಂಬುದು ನನ್ನ ಅಭಿಲಾಷೆ. ಯಾವುದೇ ಇಲಾಖೆಯಲ್ಲಿ ನಿಮ್ಮ ಕೆಲಸವಾಗಬೇಕಾದರೂ ನನ್ನನ್ನು ಸಂಪರ್ಕಿಸಬಹುದು ಎಂದರು.

ರಾಜ್ಯದಲ್ಲಿ ಯಾವುದೇ ಪಕ್ಷ ಎಂಎಲ್‌ಎ, ಎಂಎಲ್‌ಸಿ ಸ್ಥಾನಗಳಿಗೆ ಒಬ್ಬನೇ ಒಬ್ಬ ಮಾಜಿ ಸೈನಿಕನಿಗೆ ಟಿಕೆಟ್ ಕೊಟ್ಟಿಲ್ಲ. ಆದರೆ ನನ್ನನ್ನು ಗುರುತಿಸಿ ಜೆಡಿಎಸ್ ಪಕ್ಷ ಟಿಕೆಟ್ ಕೊಟ್ಟಿತು. ಸೈನಿಕರ ಸೇವೆಯ ಮಹತ್ವವನ್ನು ಮುಖ್ಯಮಂತ್ರಿಗಳು ಮತ್ತು ಗೃಹಸಚಿವರ ಗಮನಕ್ಕೂ ತಂದಿದ್ದೇನೆ. ಒಂದಲ್ಲಾ ಒಂದು ಒಳ್ಳೆಯ ಕೆಲಸ ಸರ್ಕಾರದಿಂದ ಮಾಡಿಸಬೇಕೆಂದು ಸರ್ಕಾರದ ಹಿಂದೆ ಬೀಳುವಲ್ಲಿ ಮುಂದಿದ್ದೇನೆ ಎಂದು ತಿಳಿಸಿದರು.

ರಾಜ್ಯದಿಂದ ಭಾರತೀಯ ಸೇನೆಗೆ ಹೋಗುವವರಲ್ಲಿ ಕೊಡಗು ಜಿಲ್ಲೆಯ ಸಂಖ್ಯೆ ದೊಡ್ಡದಿದ್ದು, ಈ ಕಾರಣಕ್ಕಾಗಿ ಆ ಮಣ್ಣಿಗೆ ಇಡೀ ರಾಜ್ಯ ಋಣಿಯಾಗಿರಬೇಕು. ನಾಡಿನಲ್ಲಿ ಮಾಜಿ ಸೈನಿಕರು ಸೇರಿದಂತೆ ಯಾರೇ ಆಗಲಿ ಕನ್ನಡ ನಾಡು-ನುಡಿ ಬಗ್ಗೆ ಅಭಿಮಾನ ಹೊಂದಬೇಕು. ಮಾಜಿ ಸೈನಿಕರಿಗೆ ಅನ್ಯಾಯ ಆಗುವುದನ್ನು ತಡೆಯಲು ನಾನಿರುತ್ತೇನೆ. ಮಾಜಿ ಸೈನಿಕರಿಗೆ ಏನಾದರೂ ಕೊಡುಗೆ ನೀಡಬೇಕು ಎಂಬ ಹಂಬಲ ಹೊಂದಿದ್ದೇನೆ ಎಂದರು.

ಸೇನೆ ಮತ್ತು ಪೊಲೀಸ್ ಇಲಾಖೆ ಸಮಾಜದ ಎರಡು ಪ್ರಮುಖ ಸ್ತಂಭಗಳು. ರಾಜ್ಯದಲ್ಲಿ ಪೊಲೀಸ್ ಪೇದೆಗಳಿಗೆ ಪಿ-ಕ್ಯಾಪ್ ನೀಡುವ ಮೂಲಕ ಅವರ ಸಾಮರ್ಥ್ಯ ಹೆಚ್ಚಿಸಬೇಕು ಎಂದು ಸರ್ಕಾರದ ಮೇಲೆ ಒತ್ತಡ ಹಾಕುತ್ತಿದ್ದೇನೆ. ಈಗಾಗಲೇ ದಕ್ಷಿಣ ಭಾರತದ ಹಲವು ರಾಜ್ಯಗಳಲ್ಲಿ ಪೊಲೀಸ್ ಪೇದೆಗಳಿಗೆ ಪಿ-ಕ್ಯಾಪ್ ನೀಡಲಾಗಿದೆ ಎಂದರು.

ಭಾರತೀಯ ಸೇನೆಗೆ ಸೇರುವವರು ಸಾಮಾನ್ಯವಾಗಿ ಬಡ ಕುಟುಂಬದವರು. ನಾನೂ ಬಡ ಕುಟುಂಬದ ಯುವಕನಾಗಿ ಸೇನೆಗೆ ಸೇರಿದೆ. ಬಳಿಕ ಪೊಲೀಸ್ ಇಲಾಖೆ ಸೇರಿದಂತೆ ವಿವಿಧ ಇಲಾಖೆಗಳಲ್ಲಿ ಕೆಲಸ ಮಾಡಿ ಅಲ್ಲಿಯ ವ್ಯವಸ್ಥೆಗೆ ಹೊಂದಿಕೊಳ್ಳಲಾಗದ ಸಂದರ್ಭದಲ್ಲಿ ರಾಜೀನಾಮೆ ಕೊಟ್ಟೆ, ಕಾರಣ ಸೇನೆಯಲ್ಲಿ ಕೆಲಸ ಮಾಡಿದವರು ಶಿಸ್ತು ಅಪೇಕ್ಷಿಸುತ್ತಾರೆ. ಅದು ಇಲ್ಲದ ಸ್ಥಳದಲ್ಲಿ ಅವರು ಇರಲು ಬಯಸುವುದಿಲ್ಲ. ರಾಜಕಾರಣಕ್ಕೆ ಬಂದು ಕಷ್ಟ-ಸುಖದೊಂದಿಗೆ ಅಪಮಾನಗಳನ್ನು ಅನುಭವಿಸಿದ್ದೇನೆ. ಜೀವನದಲ್ಲಿ ಏನಾದರೂ ಸಾಧಿಸಬೇಕಿದ್ದರೆ ಅಪಮಾನಗಳನ್ನು ಸಹಿಸಿಕೊಳ್ಳಬೇಕಿದೆ ಎಂದು ತಿಳಿಸಿದರು.

ಇದಕ್ಕೂ ಮುನ್ನ ಹಿರಿಯ ಮಾಜಿ ಸೈನಿಕ ಕೆ.ಜಿ.ಕುಟ್ಟಪ್ಪ ಹಾಗೂ ಕ್ರೀಡಾ ಸಾಧನೆಗಾಗಿ ಸಂಘದ ಸದಸ್ಯರಾದ ಕೆ.ಬಿ.ಅಯ್ಯಪ್ಪ, ಎ.ಸಿ.ಸುಬ್ಬಯ್ಯ ಅವರನ್ನು ಸನ್ಮಾನಿಸಲಾಯಿತು. ಸಭಾ ಕಾರ್ಯಕ್ರಮದ ನಂತರ ಭೋಜನ ವ್ಯವಸ್ಥೆ ಮಾಡಲಾಗಿತ್ತು. ಬಳಿಕ ಆಟೋಟಗಳನ್ನು ಸಂಘದ ಸದಸ್ಯರು ಮತ್ತು ಅವರ ಕುಟುಂಬದವರಿಗೆ ಏರ್ಪಡಿಸಲಾಗಿತ್ತು. ಸಂಘದ ಅಧ್ಯಕ್ಷ ಕೆ.ಕೆ.ಅಯ್ಯಪ್ಪ, ಉಪಾಧ್ಯಕ್ಷ ಕೆ.ಯು.ಭೀಮಯ್ಯ, ಕಾರ್ಯದರ್ಶಿ ಎ.ಪಿ. ಮೋಟಯ್ಯ, ಜಂಟಿ ಕಾರ್ಯದರ್ಶಿ ಸಿ.ಕೆ.ಬಸಪ್ಪ, ಖಜಾಂಚಿ ಕೆ.ಎಸ್.ಅಚ್ಚಯ್ಯ, ನಿರ್ದೇಶಕರಾದ ಎನ್.ಕೆ.ಗಣಪತಿ, ಎ.ಪಿ.ಅಪ್ಪಾಜಿ, ಕೆ.ಎಸ್.ಪ್ರಭಾಕರ್, ಪಿ.ಕೆ.ಬೋಪಯ್ಯ, ಜೈಶಂಕರ್, ಎ.ಎಸ್.ಲೋಕನಾಥ್, ಚಿತ್ರಾ ಸುಬ್ಬಯ್ಯ, ಕೆ.ಎ.ಗೀತಾ ಮತ್ತಿತರರು ಹಾಜರಿದ್ದರು.



ಮೈಸೂರಿನ ಬನ್ನೂರು ರಸ್ತೆಯ ಶ್ರೀ ಚಾಮುಂಡೇಶ್ವರಿ ಕನ್ವೆನ್ಷನ್ ಹಾಲ್‌ನಲ್ಲಿ ಕೊಡಗು ಮಾಜಿ ಸೈನಿಕರ ಕ್ಷೇಮಾಭಿವೃದ್ಧಿ ಸಂಘ ಮೈಸೂರು ವತಿಯಿಂದ ಶನಿವಾರ ಹಮ್ಮಿಕೊಂಡಿದ್ದ ಸಂಘದ 4ನೇ ವಾರ್ಷಿಕ ಸಂತೋಷ ಕೂಟದಲ್ಲಿ (ಎಡದಿಂದ ಬಲಕ್ಕೆ ಕುಳಿತವರು) ಹಿರಿಯ ಮಾಜಿ ಸೈನಿಕ ಕೆ.ಜಿ.ಕುಟ್ಟಪ್ಪ ಹಾಗೂ ಕ್ರೀಡಾ ಸಾಧನೆಗಾಗಿ ಸಂಘದ ಸದಸ್ಯರಾದ ಕೆ.ಬಿ.ಅಯ್ಯಪ್ಪ, ಎ.ಸಿ.ಸುಬ್ಬಯ್ಯ ಅವರನ್ನು ಸನ್ಮಾನಿಸಲಾಯಿತು. (ಎಡದಿಂದ ಬಲಕ್ಕೆ ನಿಂತವರು) ಸಂಘದ ಅಧ್ಯಕ್ಷ ಕೆ.ಕೆ.ಅಯ್ಯಪ್ಪ, ಕಾರ್ಯದರ್ಶಿ ಎ.ಪಿ.ಮೋಟಯ್ಯ, ಎಂಎಲ್‌ಸಿ ಸಿ.ಎನ್.ಮಂಜೇಗೌಡ, ಸಂಘದ ಸದಸ್ಯ ರಾಜ ಬೋಪಯ್ಯರ ಪತ್ನಿ ಪದ್ಮಾ, ನಿರ್ದೇಶಕರಾದ ಎನ್.ಕೆ.ಗಣಪತಿ, ಎ.ಎಸ್.ಲೋಕನಾಥ್, ಎ.ಪಿ.ಅಪ್ಪಾಜಿ, ಜಂಟಿ ಕಾರ್ಯದರ್ಶಿ ಸಿ.ಕೆ.ಬಸಪ್ಪ, ನಿರ್ದೇಶಕರಾದ ಜೈಶಂಕರ್, ಖಜಾಂಚಿ ಕೆ.ಎಸ್.ಅಚ್ಚಯ್ಯ, ಉಪಾಧ್ಯಕ್ಷ ಕೆ.ಯು.ಭೀಮಯ್ಯ, ನಿರ್ದೇಶಕರಾದ ಕೆ.ಎಸ್.ಪ್ರಭಾಕರ್, ಚಿತ್ರಾ ಸುಬ್ಬಯ್ಯ ಚಿತ್ರದಲ್ಲಿದ್ದಾರೆ.

50 ಸಾವಿರ ಆರ್ಥಿಕ ನೆರವು ; 10 ಲಕ್ಷ ರೂ. ಅನುದಾನ ಕಲ್ಪಿಸುವ ಭರವಸೆ

ಮೈಸೂರು,ಮೇ 7(ಪಿಎಂ)- ಕೊಡಗು ಮಾಜಿ ಸೈನಿಕರ ಕ್ಷೇಮಾಭಿವೃದ್ಧಿ ಸಂಘಕ್ಕೆ 50 ಸಾವಿರ ರೂ. ಆರ್ಥಿಕ ನೆರವು ನೀಡಿದ ಎಂಎಲ್‌ಸಿ ಮಂಜೇಗೌಡ (ಚೆಕ್ ವಿತರಿಸಿದರು), ಸಂಘದ ಕಟ್ಟಡ ನಿರ್ಮಾಣಕ್ಕೆ ತಮ್ಮ ಅನುದಾನದಲ್ಲಿ 10 ಲಕ್ಷ ರೂ. ನೀಡುವುದಾಗಿಯೂ ಘೋಷಿಸಿದರು. ಸಿಎ ನಿವೇಶನಕ್ಕಾಗಿ ಮುಡಾದಲ್ಲಿ ಅರ್ಜಿ ಸಲ್ಲಿಸಿರುವುದಾಗಿ ಸಂಘದ ಪದಾಧಿಕಾರಿಗಳು ತಿಳಿಸಿದ ಹಿನ್ನೆಲೆಯಲ್ಲಿ ಆಡಿಟ್ ವರದಿ ಸಮರ್ಪಕವಾಗಿದ್ದರೆ, 100ಕ್ಕೆ 100 ನಿವೇಶನ ಕೊಡಿಸುತ್ತೇನೆ ಎಂದು ಭರವಸೆ ನೀಡಿದರು.

ಕಂಡಕಂಡವರಿಗೆ ಭೂಮಿ ಕೊಡ್ತಾರೆ... ದೇಶಸೇವೆ ಮಾಡೋ ಸೈನಿಕರಿಗೆ ಕೊಡಲ್ಲ...

ಮೈಸೂರು,ಮೇ 7(ಪಿಎಂ)- ಮಾಜಿ ಸೈನಿಕರಿಗೆ ಈವರೆಗೆ ಸರ್ಕಾರದಿಂದ ಅತ್ಯಲ್ಪ ಪ್ರಮಾಣದಲ್ಲಿ ಭೂಮಿ ಹಂಚಿಕೆಯಾಗಿದೆ. ಆದರೆ ದೇವಸ್ಥಾನ ನಿರ್ಮಾಣ ಹಾಗೂ ಖಾಸಗಿ ಸಂಘ-ಸಂಸ್ಥೆಗಳಿಗೆ ಹೆಚ್ಚಿನ ಪ್ರಮಾಣದ ಭೂಮಿ ನೀಡಲಾಗಿದೆ ಎಂದು ಎಂಎಲ್‌ಸಿ ಸಿ.ಎನ್.ಮಂಜೇಗೌಡ ಬೇಸರ ವ್ಯಕ್ತಪಡಿಸಿದರು.

ಮಾಜಿ ಸೈನಿಕರಿಗೆ ಸರ್ಕಾರದಿಂದ ಭೂಮಿ ಕೊಡಬೇಕೆಂಬ ನಿಯಮವಿದ್ದು, ಸೈನಿಕರ ಸಂಘವೊಂದು ನನಗೆ ನೀಡಿದ ಮನವಿ ಮೇರೆಗೆ ಮಾಜಿ ಸೈನಿಕರಿಗೆ ಸರ್ಕಾರ ಭೂಮಿ ಹಂಚಿರುವ ಬಗ್ಗೆ ಮಾಹಿತಿ ಕೋರಿ ಅರ್ಜಿ ಸಲ್ಲಿಸಿದ್ದೆ. ಅದರಲ್ಲಿ ಮಾಜಿ ಸೈನಿಕರಿಗೆ ಅತ್ಯಲ್ಪ ಭೂಮಿ ಹಂಚಿಕೆಯಾಗಿರುವ ಮಾಹಿತಿ ದೊರೆಯಿತು. ಈ ವಿಚಾರದಲ್ಲಿ ಸರ್ಕಾರದ ವಿರುದ್ಧ ಟೀಕಾಪ್ರಹಾರ ನಡೆಸಿದ್ದೇನೆ. ದೇವಸ್ಥಾನ ನಿರ್ಮಾಣ, ಖಾಸಗಿ ಸಂಘ-ಸಂಸ್ಥೆಗಳಿಗೆ ಎಷ್ಟು ಎಕರೆ ಕೊಡಲಾಗಿದೆ ಎಂದು ಕೇಳಿದಾಗ, ಅವುಗಳಿಗೆ ಹೆಚ್ಚಿನ ಪ್ರಮಾಣದಲ್ಲಿ ಭೂಮಿ ಕೊಟ್ಟಿರುವ ಮಾಹಿತಿ ಲಭ್ಯವಾಯಿತು ಎಂದರು.

ಸಾಂಸ್ಕೃತಿಕ ನಗರಿ ಮೈಸೂರು ಶೈಕ್ಷಣಿಕ ನಗರಿಯೂ ಆಗಿದೆ

ಅಭಿನಂದನಾ ಸಮಾರಂಭದಲ್ಲಿ ಕೆ.ಟಿ. ಶ್ರೀಕಂಠೇಗೌಡ ಹೇಳಿಕೆ



ಮೈಸೂರು,ಮೇ.7(ಜಿಎ)- ಮೈಸೂರು ಸಾಂಸ್ಕೃತಿಕ ನಗರಿಯೊಂದಿಗೆ ಶೈಕ್ಷಣಿಕ ನಗರವೂ ಆಗಿದೆ ಎಂದು ವಿಧಾನ ಪರಿಷತ್ ಸದಸ್ಯ ಕೆ.ಟಿ.ಶ್ರೀಕಂಠೇಗೌಡ ತಿಳಿಸಿದ್ದಾರೆ.

ಮೈಸೂರಿನ ವಿಜಯನಗರದ ಜಿಲ್ಲಾ ಕನ್ನಡ ಸಾಹಿತ್ಯ ಭವನದಲ್ಲಿ ಮೈಸೂರು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, ಯೂನಿವರ್ಸಲ್ ಅಕಾಡೆಮಿ ಹಾಗೂ ಮೈಸೂರು ಸ್ನೇಹ ಬಳಗದ ವತಿಯಿಂದ ಆಯೋಜಿಸಿದ್ದ ಅಭಿನಂದನಾ ಕಾರ್ಯಕ್ರಮವನ್ನು ಉದ್ಘಾಟಿಸಿ ನಂತರ ಸನ್ಮಾನಿತರನ್ನು ಅಭಿನಂದಿಸಿ ಮಾತನಾಡುತ್ತಿದ್ದರು.

ಕೆಎಎಸ್, ಐಎಎಸ್ ಪರೀಕ್ಷೆಯನ್ನು ಎದುರಿಸಿ ಅಯಕಟ್ಟಿನ ಸ್ಥಳಗಳಲ್ಲಿ ಸೇವೆ ಸಲ್ಲಿಸುತ್ತಿರುವ ಅನೇಕರಲ್ಲಿ ಡಾ.ಜಿ.ಸಿ.ಪ್ರಕಾಶ್ ಅವರು ಸಹ ಒಬ್ಬರು. ಆಡಳಿತ ಕ್ಷೇತ್ರದಲ್ಲಿ ಬಂದ ದಿನದಿಂದಲೂ ಅವರು ಉತ್ತಮ ಕಾರ್ಯಗಳನ್ನು ಮಾಡುತ್ತಿದ್ದಾರೆ. ಮೊದಲ ಬಾರಿ ವಿಧಾನ ಪರಿಷತ್ತಿಗೆ ಆಯ್ಕೆಯಾಗಿರುವ ಸಿ.ಎನ್. ಮಂಜೇಗೌಡರಲ್ಲೂ ಸಹ ಸಮಾಜಕ್ಕೆ ಏನಾದರೂ ಕೊಡುಗೆ ನೀಡಬೇಕು ಎಂಬ ತುಡಿತವಿದ್ದು, ಆಯ್ಕೆಯಾದ ದಿನದಿಂದಲೂ ಹೆಚ್ಚು ಚಟುವಟಿಕೆಯಿಂದ ಕಾರ್ಯನಿರ್ವಹಿಸುತ್ತಿದ್ದಾರೆ ಎಂದರು.

ರಾಜ್ಯ ಒಕ್ಕಲಿಗರ ಸಂಘ ಎಂದರೆ ಸಾವಿರಾರು ಕೋಟಿ ವಹಿವಾಟಿನೊಂದಿಗೆ ಸಮಾಜಕ್ಕಾಗಿ ಅನೇಕ ಉತ್ತಮ ಸೇವೆಗಳನ್ನು ಮಾಡುತ್ತಿದೆ. ಅದನ್ನು ಬೆಂಗಳೂರಿಗೆ ಮಾತ್ರ ಸೀಮಿತಗೊಳಿಸಬಾರದು ಎಂದು ಇತ್ತೀಚೆಗೆ ರಾಜ್ಯ ಒಕ್ಕಲಿಗರ ಸಂಘಕ್ಕೆ ರಾಜ್ಯ ಕಾರ್ಯದರ್ಶಿಯಾಗಿ ಆಯ್ಕೆಯಾದ ಸಿ.ಜಿ. ಗಂಗಾಧರ್ ಹಾಗೂ ನಿರ್ದೇಶಕರಾದ ಡಾ.ಎಂ.ಬಿ.ಮಂಚೇಗೌಡ ಮತ್ತು ಕೆ.ವಿ. ಶ್ರೀಧರ್ ಅವರಿಗೆ ಸಲಹೆ ನೀಡಿದರು.

ಮೈಸೂರು ನಗರದ ಅರಮನೆ ಮತ್ತು ಯದುವಂಶದ ಸಂಪ್ರದಾಯದ ಮೂಲಕ ಹೇಗೆ ವಿಶೇಷತೆಯನ್ನು ಹೊಂದಿದೆಯೋ ಹಾಗೆ ಶಿಕ್ಷಣದಲ್ಲಿಯೂ ವಿಶೇಷ ಸ್ಥಾನವನ್ನು ಹೊಂದಿದೆ. ಈ ಹಿನ್ನೆಲೆಯಲ್ಲಿ ಮೈಸೂರಿನಲ್ಲಿ ವ್ಯಾಸಂಗ ಮಾಡಲು ದೇಶ, ವಿದೇಶದ ಜನರು ಆಯ್ಕೆ ಮಾಡಿಕೊಳ್ಳುತ್ತಾರೆ. ಮೈಸೂರು ನಮ್ಮ ಹಳೆ ರಾಜ್ಯವಾಗಿದೆ. ಅದನ್ನು ಉತ್ತುಂಗಕ್ಕೆ ತೆಗೆದುಕೊಂಡು ಹೋಗಬೇಕು ಎಂದರು.

ಸಮಾಜಕ್ಕೆ ಉತ್ತಮ ಕೆಲಸ ಮಾಡುವವರನ್ನು ಬೆನ್ನು ತಟ್ಟಬೇಕು ಏಕೆಂದರೆ ಅವರಿಗೂ ಮತ್ತಷ್ಟು ಕೆಲಸಗಳನ್ನು ಮಾಡಲು ಪ್ರೇರಣೆಯಾಗುತ್ತದೆ. ಮೈಸೂರು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, ಯೂನಿವರ್ಸಲ್ ಅಕಾಡೆಮಿ ಹಾಗೂ ಮೈಸೂರು ಸ್ನೇಹ ಬಳಗ ಮಾಡುತ್ತಿರುವುದು ಶ್ಲಾಘನೀಯ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ರಾಜ್ಯ ಒಕ್ಕಲಿಗರ ಸಂಘಕ್ಕೆ ರಾಜ್ಯ ಕಾರ್ಯದರ್ಶಿಯಾಗಿ ಆಯ್ಕೆಯಾದ ಸಿ.ಜಿ. ಗಂಗಾಧರ್, ರಾಜ್ಯ ಒಕ್ಕಲಿಗರ ಸಂಘ ನಿರ್ದೇಶಕರಾದ ಡಾ.ಎಂ.ಬಿ.ಮಂಚೇಗೌಡ, ಕೆ.ವಿ. ಶ್ರೀಧರ್, ವಕೀಲ ತಮ್ಮಣ್ಣಗೌಡ, ಕರಕುಶಲ ಅಭಿವೃದ್ಧಿ ನಿಗಮದ ಜಿ.ಪುಟ್ಟಸ್ವಾಮಿ, ಮದ್ದೂರು ಜೆಡಿಎಸ್ ಮುಖಂಡ ಟಿ.ಕೆ.ಸ್ವಾಮಿಗೌಡ ಅವರನ್ನು ಅಭಿನಂದಿಸಲಾಯಿತು.

ರಾಜ್ಯ ಸರ್ಕಾರಿ ನೌಕರರ ಸಂಘದ ಮಾಜಿ ಅಧ್ಯಕ್ಷ ಹೆಚ್.ಕೆ.ರಾಮು, ಮೈಸೂರು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ಅಧ್ಯಕ್ಷ ಮಡ್ಡಿಕೆರೆ ಗೋಪಾಲ್, ಯೂನಿವರ್ಸಲ್ ಅಕಾಡೆಮಿ ಸಂಸ್ಥಾಪಕ ಅಧ್ಯಕ್ಷ ಬಿ.ಎಸ್. ಪ್ರಕಾಶ್ ಹಳ್ಳಿ, ಮೈಸೂರು ಸ್ನೇಹ ಬಳಗ ಅಧ್ಯಕ್ಷ ಬಿ.ಟಿ. ಬಸವರಾಜು ಸೇರಿದಂತೆ ಮತ್ತಿತರು ಉಪಸ್ಥಿತರಿದ್ದರು.

ತಂದೆ ಮೇಣದ ಮೂರ್ತಿ ಮುಂದೆ ಮದುವೆ ಶಾಸ್ತ್ರಕ್ಕೆ ಕುಳಿತ ವರ

ಕೋವಿಡ್‌ನಿಂದ ಮೃತಪಟ್ಟಿದ್ದವರು ಮಗನ ಮದುವೆಗೆ ಸಾಕ್ಷಿ



ನಂಜನಗೂಡು, ಮೇ 7- ನಗರದಲ್ಲಿ ನಡೆಯುತ್ತಿರುವ ಮದುವೆಯೊಂದು ವಿಶಿಷ್ಟ ಕಾರಣಕ್ಕಾಗಿ ಗಮನ ಸೆಳೆದಿದೆ. ಡಾ.ಯತೀಶ್ ಹಾಗೂ ಡಾ.ಅಪೂರ್ವ ಮದುವೆ ಶನಿವಾರ ಹಾಗೂ ಭಾನುವಾರ ನಡೆಯುತ್ತಿದ್ದು, ತಂದೆಯನ್ನು ಕಳೆದುಕೊಂಡಿದ್ದ ವರ ಡಾ.ಯತೀಶ್ ಮದುವೆಗೆಂದು ತಂದೆಯ ಮೇಣದ ಪ್ರತಿಮೆ ಮಾಡಿಸಿದ್ದಾರೆ. ಮದುವೆ ಶಾಸ್ತ್ರಗಳಲ್ಲಿ ತಂದೆ ಪ್ರತಿಮೆ ಪಕ್ಕದಲ್ಲಿ ತಾಯಿಯನ್ನು ಕೂರಿಸಿ ಪೂಜೆಗೆ ಕುಳಿತು ಗಮನ ಸೆಳೆದಿದ್ದಾರೆ.

ವರ ಯತೀಶ್ ತಂದೆ ರಮೇಶ್, ವರ್ಷದ ಹಿಂದೆ ಕೋವಿಡ್‌ನಿಂದ ಮೃತಪಟ್ಟಿದ್ದರು. ರಮೇಶ್ ಅವರು ಚಿಕ್ಕಮಗಳೂರು ಜಿಲ್ಲೆ ಕಡೂರು ತಾಲೂಕಿನ ಅಜ್ಜಂಪುರದ ನಿವಾಸಿಯಾಗಿದ್ದು, ಇವರ ಪುತ್ರ ಯತೀಶ್ ಮೈಸೂರು ಜೆಎಸ್‌ಎಸ್ ಆಯುರ್ವೇದ ಕಾಲೇಜಿನಲ್ಲಿ ಎಂ.ಡಿ ವ್ಯಾಸಂಗ ಮಾಡುತ್ತಿದ್ದಾರೆ. ನಂಜನಗೂಡು ತಾಲೂಕಿನ ಮಲ್ಲುಂಡಿಯ ವಧು ಡಾ.ಅಪೂರ್ವ ಜೊತೆ ಯತೀಶ್ ಅವರ ವಿವಾಹ ನಿಶ್ಚಯವಾಗಿದ್ದು, ಇಂದು ಮತ್ತು ನಾಳೆ ನಂಜನಗೂಡಿನ ಸಂತಾನ ಗಣಪತಿ ಕಲ್ಯಾಣ ಮಂಟಪದಲ್ಲಿ ನಡೆಯುತ್ತಿದೆ.

ಮದುವೆ ಸಮಾರಂಭದಲ್ಲಿ ಎಲ್ಲರ ಆಕರ್ಷಣೆ ಮರೆಯಾದ ರಮೇಶ್ ಅವರು ಮತ್ತೆ ಬಂದು ಕುಳಿತಿರುವಂತೆ ಭಾಸವಾಗುವ ಮೇಣದ ಪ್ರತಿಮೆಯ ಮೇಲೆ ಕೇಂದ್ರೀಕೃತವಾಗುತ್ತಿದೆ.

ಸಿಎಂ ಬೊಮ್ಮಾಯಿ ಸಮ್ಮುಖದಲ್ಲಿ ಸಂದೇಶ್ ನಾಗರಾಜ್ ಬಿಜೆಪಿ ಸೇರ್ಪಡೆ

ಕಮಲ ಹಿಡಿದ ಮಂಡ್ಯದ ಲಕ್ಷ್ಮಿ ಅಶ್ವಿನ್‌ಗೌಡ, ಮಾಜಿ ಸಚಿವ ದಿವಂಗತ ಎಸ್.ಡಿ.ಜಯರಾಂ ಪುತ್ರ ಅಶೋಕ್, ಪ್ರಮೋದ್ ಮಧ್ವರಾಜ್, ವರ್ತೂರ್ ಪ್ರಕಾಶ್, ಮಂಜುನಾಥಗೌಡ, ಕೆ.ಬಿ.ಕೃಷ್ಣಮೂರ್ತಿ



ಬೆಂಗಳೂರು, ಮೇ 7-ವಿಧಾನಸಭೆ ಚುನಾವಣೆ ಸಮೀಪಿಸುತ್ತಿದ್ದಂತೆಯೇ ಹಳೆ ಮೈಸೂರು ಭಾಗದಲ್ಲಿ ಬಲ ಹೆಚ್ಚಿಸಿಕೊಳ್ಳುವ ನಿಟ್ಟಿನಲ್ಲಿ ಬಿಜೆಪಿ ಕಾರ್ಯತಂತ್ರ ರೂಪಿಸಿದೆ. ಮೈಸೂರು-ಚಾಮರಾಜನಗರ ಸ್ಥಳೀಯ ಸಂಸ್ಥೆಗಳ ಕ್ಷೇತ್ರದ ವಿಧಾನ ಪರಿಷತ್ ಮಾಜಿ ಸದಸ್ಯ ಸಂದೇಶ್ ನಾಗರಾಜ್ ಸೇರಿದಂತೆ ಮಂಡ್ಯ, ಕೋಲಾರ, ಉಡುಪಿ ಭಾಗದ ಪ್ರಮುಖ ನಾಯಕರು ಇಂದು ಕಾಂಗ್ರೆಸ್ ಮತ್ತು ಜೆಡಿಎಸ್ ತೊರೆದು ಬಿಜೆಪಿ ಸೇರ್ಪಡೆಯಾಗಿದ್ದಾರೆ.

ಬೆಂಗಳೂರಿನ ಖಾಸಗಿ ಹೋಟೆಲ್‌ನಲ್ಲಿ ನಡೆದ ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಬಿಜೆಪಿ ರಾಜ್ಯಾಧ್ಯಕ್ಷ ನಳಿನ್ ಕುಮಾರ್ ಕಟೀಲ್, ಪಕ್ಷಕ್ಕೆ ಸೇರ್ಪಡೆಯಾದ ನಾಯಕರಿಗೆ ಬಿಜೆಪಿ ಧ್ವಜ ನೀಡುವ ಮೂಲಕ ಪಕ್ಷಕ್ಕೆ ಬರಮಾಡಿಕೊಂಡರು.

ಹಳೆ ಮೈಸೂರು ಭಾಗದಲ್ಲಿ ಜೆಡಿಎಸ್‌ನ ಪ್ರಭಾವಿ ನಾಯಕರಲ್ಲೊಬ್ಬರಾಗಿದ್ದ, ಸಂದೇಶ್ ನಾಗರಾಜ್, ಮೈಸೂರು-ಚಾಮರಾಜನಗರ ಸ್ಥಳೀಯ ಸಂಸ್ಥೆಗಳ ಚುನಾವಣೆಯಲ್ಲಿ ಸತತವಾಗಿ ಎರಡು ಬಾರಿ ವಿಧಾನ ಪರಿಷತ್‌ಗೆ ಆಯ್ಕೆಯಾಗಿದ್ದರು. ಎರಡನೇ ಬಾರಿಗೆ ಅವರು ಕೆಲ ದಿನಗಳಿಂದ ಜೆಡಿಎಸ್‌ನ ಕೆಲವು ನಾಯಕರ ವರ್ತನೆಯಿಂದ ಬೇಸತ್ತು ಪಕ್ಷದಿಂದ ಅಂತರ ಕಾಯ್ದುಕೊಂಡಿದ್ದರು. ಕಳೆದ ವಿಧಾನಸಭಾ ಚುನಾವಣೆಯಲ್ಲಿ ತಮ್ಮ ಸಹೋದರ ಮಾಜಿ ಮೇಯರ್ ಸಂದೇಶ್ ಸ್ವಾಮಿ ಅವರನ್ನು ಜೆಡಿಎಸ್ ತೊರೆದು ಬಿಜೆಪಿ ಸೇರಿ, ಆ ಪಕ್ಷದ ಅಭ್ಯರ್ಥಿಯಾಗಿ ನರಸಿಂಹರಾಜ ಕ್ಷೇತ್ರದಲ್ಲಿ ಸ್ಪರ್ಧಿಸುವಂತೆ ನೋಡಿಕೊಂಡಿದ್ದರು. ಸಂದೇಶ್ ಸ್ವಾಮಿ ಆ ಚುನಾವಣೆಯಲ್ಲಿ ಅಲ್ಪ ಮತದಿಂದ ಪರಾಭವಗೊಂಡರಾದರೂ, ಅವರ ಪುತ್ರ ಸಾತ್ವಿಕ್ ಮೈಸೂರು ಮಹಾನಗರ ಪಾಲಿಕೆ ಚುನಾವಣೆಯಲ್ಲಿ ಬಿಜೆಪಿ ಅಭ್ಯರ್ಥಿಯಾಗಿ ಸ್ಪರ್ಧಿಸಿ, ಜಯ ಗಳಿಸಿದ್ದರು.

ಮೈಸೂರು-ಚಾಮರಾಜನಗರ ಸ್ಥಳೀಯ ಸಂಸ್ಥೆಗಳಿಂದ ವಿಧಾನ ಪರಿಷತ್‌ಗೆ ನಡೆದ ಚುನಾವಣೆಯಲ್ಲಿ ಮೂರನೇ ಬಾರಿಗೆ ಸ್ಪರ್ಧಿಸಿ ಹ್ಯಾಟ್ರಿಕ್ ಗೆಲುವು ಸಾಧಿಸುವ ಹುಮ್ಮಸ್ಸಿನಲ್ಲಿದ್ದ ಸಂದೇಶ್ ನಾಗರಾಜ್, ಬಿಜೆಪಿ ಟಿಕೆಟ್‌ನ ಪ್ರಬಲ ಆಕಾಂಕ್ಷಿಯಾಗಿದ್ದರು. ಆದರೆ ಆ ಪಕ್ಷದ ಆಂತರಿಕ ನಿಯಮದಂತೆ ಅವರ ವಯಸ್ಸಿನ ಕಾರಣದಿಂದ ಟಿಕೆಟ್ ಕೈತಪ್ಪಿ ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರ ಆಪ್ತರಘು ಕೌಟಿಲ್ಯ ಅವರಿಗೆ ಟಿಕೆಟ್ ದೊರೆತ್ತಿತ್ತು ತಮಗೆ ಟಿಕೆಟ್ ಕೈತಪ್ಪಿದರೂ ಕೂಡ, ಬಿಜೆಪಿಯ ಆಂತರಿಕ ನಿಯಮವನ್ನು ಅರ್ಥ ಮಾಡಿಕೊಂಡಿರುವ ಸಂದೇಶ್ ನಾಗರಾಜ್, ಇಂದು ಅಧಿಕೃತವಾಗಿ ಬಿಜೆಪಿಗೆ ಸೇರ್ಪಡೆಯಾಗಿದ್ದಾರೆ.

ಉಡುಪಿ ಭಾಗದಿಂದ ಮಾಜಿ ಸಚಿವ ಪ್ರಮೋದ್ ಮಧ್ವರಾಜ್ ಕಾಂಗ್ರೆಸ್‌ಗೆ ರಾಜೀನಾಮೆ ಸಲ್ಲಿಸಿ ಬಿಜೆಪಿಗೆ ಸೇರ್ಪಡೆಯಾದರು. ಮಂಡ್ಯ ಜಿಲ್ಲೆಯ ನಾಗಮಂಗಲ ವಿಧಾನಸಭಾ ಕ್ಷೇತ್ರದಲ್ಲಿ ಸ್ಪರ್ಧಿಸಲು ಪ್ರಬಲ ಜೆಡಿಎಸ್ ಟಿಕೆಟ್ ಆಕಾಂಕ್ಷಿಯಾಗಿದ್ದ ಐಆರ್‌ಎಸ್ ಮಾಜಿ ಅಧಿಕಾರಿ ಲಕ್ಷ್ಮಿ ಅಶ್ವಿನ್‌ಗೌಡ, ಮಂಡ್ಯ ಕ್ಷೇತ್ರದ ಆಕಾಂಕ್ಷಿಯಾಗಿದ್ದ ಮಾಜಿ ಸಚಿವ ದಿವಂಗತ ಎಸ್.ಡಿ.ಜಯರಾಂ ಪುತ್ರ ಅಶೋಕ್ ಜಯರಾಂ ಜೆಡಿಎಸ್ ತೊರೆದು ಕಾಂಗ್ರೆಸ್ ಸೇರ್ಪಡೆಯಾದರು. ಕೋಲಾರದಿಂದ ಟಿಕೆಟ್ ಬಯಸಿರುವ ಮಾಜಿ ಸಚಿವ ವರ್ತೂರ್ ಪ್ರಕಾಶ್, ಮಾಲೂರು ಕ್ಷೇತ್ರದಲ್ಲಿ ಜೆಡಿಎಸ್‌ನಿಂದ ಸ್ಪರ್ಧಿಸಲು ಪ್ರಬಲ ಆಕಾಂಕ್ಷಿಯಾಗಿದ್ದ ಮಾಜಿ ಶಾಸಕ ಮಂಜುನಾಥಗೌಡ, ರಾಜ್ಯಸಭೆಯ ಮಾಜಿ ಸದಸ್ಯ ಕೆ.ಬಿ.ಕೃಷ್ಣಮೂರ್ತಿ ಅವರುಗಳು ಬಿಜೆಪಿಗೆ ಸೇರ್ಪಡೆಯಾದರು.

ಮಂಡ್ಯ ಜಿಲ್ಲೆಯ ಕೆ.ಆರ್.ಪೇಟೆ ಕ್ಷೇತ್ರದಲ್ಲಿ ಗೆಲುವು ಸಾಧಿಸಿ ಬಿಜೆಪಿ ಖಾತೆ ತೆರೆದ ನಾರಾಯಣಗೌಡ ಸಚಿವರಾಗಿದ್ದಾರೆ. ಇನ್ನು ಮಂಡ್ಯದಲ್ಲಿ ಎಸ್.ಡಿ.ಜಯರಾಂ ಪುತ್ರ ಅಶೋಕ್ ಜಯರಾಂ, ನಾಗಮಂಗಲದಲ್ಲಿ ಐಆರ್‌ಎಸ್ ಮಾಜಿ ಅಧಿಕಾರಿ ಲಕ್ಷ್ಮಿ ಅಶ್ವಿನ್‌ಗೌಡ ಬಿಜೆಪಿ ಅಭ್ಯರ್ಥಿಗಳಾಗುವುದು ಖಚಿತವಾಗಿದೆ. ಶ್ರೀರಂಗಪಟ್ಟಣ ಕ್ಷೇತ್ರದಲ್ಲಿ ಅಂಬರೀಷ್ ಆಪ್ತ ಸಚ್ಚಿದಾನಂದ ಬಿಜೆಪಿ ಅಭ್ಯರ್ಥಿಯಾಗಲಿದ್ದಾರೆ. ಅವರು ಸದ್ಯದಲ್ಲೇ ಶ್ರೀರಂಗಪಟ್ಟಣದಲ್ಲಿ ಬೃಹತ್ ಸಮಾವೇಶ ಮಾಡುವ ಮೂಲಕ ಪಕ್ಷಕ್ಕೆ ಸೇರ್ಪಡೆಯಾಗಲಿದ್ದಾರೆ ಎಂಬ ಮಾತುಗಳು ಕೇಳಿಬಂದಿವೆ. ಮದ್ದೂರು ಕ್ಷೇತ್ರದಲ್ಲಿ ಅಂಬರೀಷ್ ಪುತ್ರ ಅಭಿಷೇಕ್ ಅವರನ್ನು ಬಿಜೆಪಿಯಿಂದ ಕಣಕ್ಕಿಳಿಸಲು ಪಕ್ಷದ ಮುಖಂಡರು ಕಾರ್ಯತಂತ್ರ ರೂಪಿಸಿ, ಸಂಸದೆ ಸುಮಲತಾ ಅವರ ಜೊತೆ ಮಾತುಕತೆ ನಡೆಸಿದ್ದಾರೆ ಎಂಬುದು ಗುಟ್ಟಾಗೇನೂ ಉಳಿದಿಲ್ಲ. ಆದರೆ ಸುಮಲತಾ ಅವರು ಬಿಜೆಪಿ ಸೇರ್ಪಡೆಗೆ ಇನ್ನೂ ಸಮ್ಮತಿ ಸೂಚಿಸಿಲ್ಲ.

ಇಂದಿನ ಕಾರ್ಯಕ್ರಮದಲ್ಲಿ ಸಚಿವರಾದ ಆರ್.ಅಶೋಕ್, ಎಸ್.ಟಿ.ಸೋಮಶೇಖರ್, ಡಾ. ಸುಧಾಕರ್, ಗೋಪಾಲಯ್ಯ, ನಾರಾಯಣಗೌಡ ಮುನಿರತ್ನ, ಸಂಸದ ಮುನಿಸ್ವಾಮಿ, ವಿಧಾನ ಪರಿಷತ್ ಸದಸ್ಯ ಸಿ.ಪಿ. ಯೋಗೇಶ್ವರ್ ಮುಂತಾದವರು ಉಪಸ್ಥಿತರಿದ್ದರು.

6 ಕೋಟಿ ವೆಚ್ಚದ ಅಭಿವೃದ್ಧಿ ಕಾಮಗಾರಿಗಳಿಗೆ ಗುದ್ದಲಿ ಪೂಜೆ

ತಿ.ನರಸೀಪುರ, ಮೇ 7(ಎಸ್‌ಕೆ)– ಗುತ್ತಿಗೆದಾರರು ಕಾಮಗಾರಿಗಳಲ್ಲಿ ಗುಣಮಟ್ಟ ಕಾಯ್ದುಕೊಳ್ಳುವಂತೆ ಶಾಸಕ ಎಂ.ಅಶ್ವಿನ್ ಕುಮಾರ್ ಸೂಚಿಸಿದರು.

ತಾಲೂಕಿನ ಬೆನಕನಹಳ್ಳಿ, ಚಿಕ್ಕಬೂಹಳ್ಳಿ, ಕಾಳಬಸವನಹುಂಡಿ, ಜಾಲಹಳ್ಳಿ, ಚಂದಹಳ್ಳಿ, ಕೃಷ್ಣಾಪುರ, ದೊಡ್ಡೇಬಾಗಿಲು, ದೊಡ್ಡೇಬಾಗಿಲು ಮೋಳೆ, ಕಾವೇರಿಪುರ, ಮೂಡಲಹುಂಡಿ, ಕಟ್ಟೇಪುರ, ಮಾರನಪುರ ಗ್ರಾಮಗಳಲ್ಲಿ 6 ಕೋಟಿ ರೂ. ವೆಚ್ಚದ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಭೂಮಿ ಪೂಜೆ ನೆರವೇರಿಸಿ ಅವರು ಮಾತನಾಡಿದರು.

ಕ್ಷೇತ್ರದ ಸಮಗ್ರ ಅಭಿವೃದ್ಧಿಗಾಗಿ ಸರ್ಕಾರದಿಂದ ಹೆಚ್ಚಿನ ಅನುದಾನ ತರಲಾಗಿದ್ದು, ಕ್ಷೇತ್ರದ ಎಲ್ಲಾ ಗ್ರಾಮಗಳಲ್ಲಿ ಸಿಸಿ ರಸ್ತೆ ಹಾಗೂ ಕಾಂಕ್ರೀಟ್ ರಸ್ತೆಗಳನ್ನು ನಿರ್ಮಿಸಲಾಗುತ್ತಿದೆ. ಕಾಮಗಾರಿ ಗುತ್ತಿಗೆ ಪಡೆದಿರುವ ಗುತ್ತಿಗೆದಾರರು ಗುಣಮಟ್ಟದ ಕಾಮಗಾರಿಗೆ ಆದ್ಯತೆ ನೀಡುವಂತೆ ಸೂಚಿಸಿದರು.

ಕಳೆದ 4 ವರ್ಷದಿಂದ ರೈತರು ಹಾಗೂ ಮತದಾರರ ಕೆಲಸಗಳನ್ನು ಚಾಚೂ ತಪ್ಪದೆ ಮಾಡಿ ಕೊಡಲು ಅಧಿಕಾರಿಗಳೊಂದಿಗೆ ಪ್ರತಿ ಸೋಮವಾರ ತಾಲೂಕು ಕಚೇರಿಯಲ್ಲಿ ಸಾರ್ವಜನಿಕ ಸಭೆ ಮಾಡುತ್ತಿದ್ದೇನೆ. ಕ್ಷೇತ್ರದಲ್ಲಿ ಸಮಗ್ರ ಅಭಿವೃದ್ಧಿಗೆ ಶ್ರಮಿಸುತ್ತಿದ್ದು ಇನ್ನೂ ಹೆಚ್ಚಿನ ರೀತಿಯಲ್ಲಿ ಸರ್ಕಾರದಿಂದ ಬರುವ ಅನುದಾನವನ್ನು ಸರ್ವರಿಗೂ ಸಮನಾಗಿ ಹಂಚುವ ಮೂಲಕ ಅಭಿವೃದ್ಧಿ ಪಡಿಸುತ್ತೇನೆ. ಮುಂಬರುವ ಚುನಾವಣೆಯಲ್ಲಿ ಮತ್ತೊಮ್ಮೆ ನನಗೆ ಆಶೀರ್ವದಿಸಿ ಎಂದು ಮನವಿ ಮಾಡಿದರು.



ಇದೇ ವೇಳೆ ಲೋಕೋಪಯೋಗಿ ಇಲಾಖೆ ಅನುದಾನದಡಿ ಕೃಷ್ಣಾಪುರದಲ್ಲಿ 19.55 ಲಕ್ಷ, ದೊಡ್ಡೇಬಾಗಿಲು ಮೋಳೆ ಗ್ರಾಮದಲ್ಲಿ 44 ಲಕ್ಷ, ಕಾವೇರಿಪುರದಲ್ಲಿ 37.47 ಲಕ್ಷ, ಮೂಡಲಹುಂಡಿಯಲ್ಲಿ 38.57, ಕಟ್ಟೇಪುರದಲ್ಲಿ 24.19, ಮಾರನಪುರದಲ್ಲಿ 22.10 ಲಕ್ಷ ಹಾಗೂ ಜಿಪಂ ಅನುದಾನದಲ್ಲಿ ಬೆನಕನಹಳ್ಳಿ, ಚಿಕ್ಕಬೂಹಳ್ಳಿ, ಕಾಳಬಸವನಹುಂಡಿ, ಜಾಲಹಳ್ಳಿ ಹಾಗೂ ಚಂದಹಳ್ಳಿ ಗ್ರಾಮಗಳಲ್ಲಿ ತಲಾ 20 ಲಕ್ಷ ರೂ. ವೆಚ್ಚದಲ್ಲಿ ಅಭಿವೃದ್ಧಿ ಪಡಿಸಲಾಗುವ ಕಾಂಕ್ರೀಟ್ ರಸ್ತೆ ಹಾಗೂ ಚರಂಡಿ ಕಾಮಗಾರಿಗೆ ಶಾಸಕರು ಚಾಲನೆ ನೀಡಿದರು.

ಕಾಳೀಹುಂಡಿ ಗ್ರಾಮದಲ್ಲಿ 2.50 ಕೋಟಿ ರೂ. ವೆಚ್ಚದ ಏತ ನೀರಾವರಿ ಯೋಜನೆಗೆ ಬಣವೆ ಗ್ರಾಮದಲ್ಲಿ ಚಾಲನೆ ನೀಡಿದ ಅಶ್ವಿನ್‌ಕುಮಾರ್, ನೀರಾವರಿ ಇಲಾಖೆಯ 50 ಲಕ್ಷ ರೂ. ವೆಚ್ಚದಲ್ಲಿ ಕಾವೇರಿಪುರದ ಬಳಿಯ ಮೂಡಲಹುಂಡಿ ಗ್ರಾಮದ ರಾಮಸ್ವಾಮಿ ನಾಲಾ ಸರಪಳಿ 7.9 ಕಿಮೀ ಉದ್ದದ ಚಾನಲ್ ನಿರ್ಮಾಣ, ಎಸ್‌ಡಿಪಿ ಯೋಜನೆಯಡಿ 45 ಲಕ್ಷ ರೂ. ವೆಚ್ಚದ ಗಾಡಿ ಸೇತುವೆ ನಿರ್ಮಾಣಕ್ಕೆ ಭೂಮಿ ಪೂಜೆ ನೆರವೇರಿಸಿದರು.

ಈ ವೇಳೆ ಜೆಡಿಎಸ್ ಕ್ಷೇತ್ರಾಧ್ಯಕ್ಷ ಚಿನ್ನಸ್ವಾಮಿ, ಜಿಪಂ ಮಾಜಿ ಅಧ್ಯಕ್ಷ ಸಿದ್ದಾರ್ಥ, ಮಾಜಿ ಸದಸ್ಯ ಜಯಪಾಲ್ ಭರಣಿ, ಗೌಡರ ರಾಜಶೇಖರ್, ಗ್ರಾಪಂ ಸದಸ್ಯ ಮಲ್ಲಪ್ಪ, ಕುಮಾರ್, ಚಿಕ್ಕಬೂಹಳ್ಳಿ ಗ್ರಾಪಂ ಅಧ್ಯಕ್ಷೆ ಗೌರಮ್ಮ, ಉಪಾಧ್ಯಕ್ಷ ಮಧು, ಸದಸ್ಯ ಶಿವಣ್ಣ, ಸಂಭ್ರಮ್, ಲೋಕೇಶ್, ಶಿವಣ್ಣ ಗಂಗಾಧರ್, ನಾಗೇಶ್, ಮಂಟೇಲಿಂಗ, ಮಮತಾಶ್ರೀ, ನಾಗರಾಜು, ಮರಿಸ್ವಾಮಪ್ಪ ನವೀನ, ಚಿನ್ನಸ್ವಾಮಿ, ಲಿಂಗಪ್ಪ, ರಾಜಣ್ಣ, ಧರ್ಮರಾಜ್, ಸತೀಶ್, ರಮೇಶ್, ರಾಜೇಶ್, ಎಇಇ ರಶ್ಮಿ, ನಟೇಶ್, ಎಇ ರಾಜು ನಾಯಕ್, ಪಿಡಿಓ ಶೀಲಾ, ಎಡಿ ಮಹದೇವು ಮತ್ತಿತರರಿದ್ದರು.

ನಿರೀಕ್ಷೆಗೂ ಮೀರಿದ ಅದ್ದೂರಿ ಸ್ವಾಗತ

ತಾಲೂಕಿನ ವಿವಿಧ ಗ್ರಾಮಗಳಿಗೆ ಅಭಿವೃದ್ಧಿ ಕಾಮಗಾರಿಗಾಗಿ ಭೂಮಿ ಪೂಜೆ ನೆರವೇರಿಸಲು ಆಗಮಿಸಿದ ಶಾಸಕ ಅಶ್ವಿನ್ ಕುಮಾರ್‌ಗೆ ನಿರೀಕ್ಷೆಗೂ ಮೀರಿದ ಅದ್ದೂರಿ ಸ್ವಾಗತ ದೊರೆಯಿತು. ಶನಿವಾರ 12 ಗ್ರಾಮಗಳಲ್ಲಿ ವಿವಿಧ ಕಾಮಗಾರಿಗಳಿಗೆ ಚಾಲನೆ ನೀಡಲು ಆಗಮಿಸಿದ ಶಾಸಕರಿಗೆ ಪ್ರತಿ ಗ್ರಾಮದಲ್ಲೂ ಅದ್ದೂರಿ ಸ್ವಾಗತ ಕೋರಲಾಯಿತು. ಗ್ರಾಮಗಳಲ್ಲಿ ಶಾಸಕರ ಬರುವಿಕೆಗಾಗಿ ಕಾದು ನಿಂತಿದ್ದ ಗ್ರಾಮಸ್ಥರು ಅವರ ಆಗಮನವಾಗುತ್ತಿದ್ದಂತೆ ಪಟಾಕಿ ಸಿಡಿಸಿ, ತಮಟೆ ವಾದ್ಯದೊಂದಿಗೆ ಗ್ರಾಮಕ್ಕೆ ಬರಮಾಡಿಕೊಂಡರು. ಈ ಹಿಂದೆ ಶಾಸಕರು ಕಾಮಗಾರಿಗೆ ಭೂಮಿ ಪೂಜೆ ನೆರವೇರಿಸಲು ಬರುತ್ತಿದ್ದ ವೇಳೆ ಬೆರಳೆಣಿಕೆಯಷ್ಟು ಮಂದಿ ಸೇರುತ್ತಿದ್ದರಾದರೂ ಇತ್ತೀಚೆಗೆ ಚಿತ್ರಣವೇ ಬದಲಾಗಿದ್ದು, ನೂರಾರು ಸಂಖ್ಯೆಯಲ್ಲಿ ಕ್ಷೇತ್ರದ ಮತದಾರರು ಸೇರುತ್ತಿರುವುದು ಕುತೂಹಲ ಮೂಡಿಸಿದೆ.

ಶ್ರೀಕಂಠೇಶ್ವರ ದೇವಾಲಯಕ್ಕೆ 2.49 ಕೋಟಿ ಆದಾಯ

ನಂಜನಗೂಡು, ಮೇ 7(ಸುದರ್ಶನ್)– ಇಲ್ಲಿನ ಶ್ರೀಕಂಠೇಶ್ವರ ದೇವಾಲಯದ ಹುಂಡಿ ಪರ್ಕಾವಣೆ ಶುಕ್ರವಾರ ನಡೆದಿದ್ದು, 2,49,07052 ರೂ., 220 ಗ್ರಾಂ ಚಿನ್ನ, 6.5 ಕೆಜಿ ಬೆಳ್ಳಿ, 111 ವಿದೇಶಿ ಕರೆನ್ಸಿ ಸಂಗ್ರಹಗೊಂಡಿದೆ.



ದೇವಾಲಯದ 22 ಹುಂಡಿಗಳ ಪರ್ಕಾವಣೆ ನಡೆಸಲಾಯಿತು. ಹುಂಡಿಯಲ್ಲಿ 1000 ರೂ. ಮುಖಬೆಲೆಯ 12, 500 ರೂ. ಮುಖಬೆಲೆಯ 58 ನೋಟು ಸೇರಿದಂತೆ 41 ಸಾವಿರ ರೂ. ಮೌಲ್ಯದ ನಿಷೇಧಿತ ನೋಟುಗಳು ಪತ್ತೆಯಾಗಿವೆ. ಕಳೆದ ಬಾರಿ 28 ಸಾವಿರದ 500 ಮೌಲ್ಯದ ನಿಷೇಧಿತ ನೋಟುಗಳು ಸಂಗ್ರಹಗೊಂಡಿತ್ತು. ಕಳೆದ ಫೆಬ್ರವರಿ ತಿಂಗಳಲ್ಲಿ ದೇವಾಲಯದ ಹುಂಡಿ ಪರ್ಕಾವಣೆ ಕಾರ್ಯವನ್ನು ನಡೆಸಲಾಗಿತ್ತು. ಜಾತ್ರೆ ಅಂಗವಾಗಿ ಕಳೆದ ಬಾರಿಗಿಂತ ಹೆಚ್ಚುವರಿಯಾಗಿ 41 ಲಕ್ಷ ರೂ. ಸಂಗ್ರಹಗೊಂಡಿದೆ ಎಂದು ದೇವಾಲಯದ ಇಓ ರವೀಂದ್ರ ಮಾಹಿತಿ ನೀಡಿದರು. ಎಣಿಕೆ ಕಾರ್ಯದಲ್ಲಿ ಸ್ತ್ರೀಶಕ್ತಿ ಸ್ವಸಹಾಯ ಸಂಘದ ಮಹಿಳೆಯರು ಭಾಗವಹಿಸಿದ್ದರು. ಈ ವೇಳೆ ದೇವಾಲಯದ ಇಓ ರವೀಂದ್ರ, ಎಇಓ ವೆಂಕಟೇಶ್ ಪ್ರಸಾದ್ ಹಾಗೂ ದೇವಾಲಯದ ಸಿಬ್ಬಂದಿ ಹಾಜರಿದ್ದರು.



ಬನ್ನೂರು ಸಮೀಪದ ಬೆಟ್ಟಹಳ್ಳಿಯಲ್ಲಿ ಶ್ರೀರಾಮಾನುಜಾಚಾರ್ಯರ 1005ನೇ ಜನ್ಮ ದಿನಾಚರಣೆಯನ್ನು ಅದ್ದೂರಿಯಾಗಿ ಆಚರಿಸಲಾಯಿತು.

ಹಣಕ್ಕಾಗಿ ಪತ್ನಿಯನ್ನೇ ಕೊಂದ ಪತಿ

ನಂಜನಗೂಡು, ಮೇ 7(ಸುದರ್ಶನ್)– ಹಣಕ್ಕಾಗಿ ಪೀಡಿಸುತ್ತಿದ್ದ ಪತಿರಾಯ ಪತ್ನಿಯನ್ನೇ ಉಸಿರುಗಟ್ಟಿಸಿ ಹತ್ಯೆ ಮಾಡಿರುವ ಘಟನೆ ನಂಜನಗೂಡು ತಾಲೂಕಿನ ರಾಂಪುರ ಗ್ರಾಮದಲ್ಲಿ ನಡೆದಿದೆ. ರಾಂಪುರ ಗ್ರಾಮದ ನಿವಾಸಿ ದೇವಿರಮ್ಮ(45) ಹತ್ಯೆಗೊಳಗಾದವರು. ಪತಿ ವೆಂಕಟೇಶ್‌ನನ್ನು ಪೊಲೀಸರು ಬಂಧಿಸಿ ವಶಕ್ಕೆ ಪಡೆದಿದ್ದಾರೆ.


ವಿವರ: ರಾಂಪುರ ಗ್ರಾಮದ ನಿವಾಸಿ ಕಾಳಯ್ಯನವರ ಪುತ್ರಿ ದೇವಿರಮ್ಮ ಅವರನ್ನು ಹಂಪಾಪುರದ ವೆಂಕಟೇಶ್ ಎಂಬುವವರಿಗೆ ಮದುವೆ ಮಾಡಿಕೊಡಲಾಗಿತ್ತು. ಇಬ್ಬರು ಮಕ್ಕಳೊಂದಿಗೆ ಸಂಸಾರ ನಡೆಸುತ್ತಿದ್ದ ವೆಂಕಟೇಶ್ ಹಣಕ್ಕಾಗಿ ಪತ್ನಿ ಜೊತೆ ಆಗಾಗ್ಗೆ ಗಲಾಟೆ ನಡೆಸುತ್ತಿದ್ದ ಎನ್ನಲಾಗಿದೆ. ಅಲ್ಲದೇ ಕೆಲ ವರ್ಷಗಳ ಹಿಂದೆ ಗಲಾಟೆ ಮಾಡಿಕೊಂಡು ಪತ್ನಿಯಿಂದ ಬೇರೆಯಾಗಿ ಹೆಚ್.ಡಿ.ಕೋಟೆ ತಾಲೂಕಿನ ಹಂಪಾಪುರದಲ್ಲಿ ನೆಲೆಸಿದ್ದ. ಇತ್ತೀಚೆಗೆ ರಾಂಪುರ ಗ್ರಾಮಕ್ಕೆ ಬಂದು ಮತ್ತೆ ಪತ್ನಿ ಜೊತೆ ಸೇರಿಕೊಂಡಿದ್ದ. ಹೀಗಿದ್ದೂ ಹಳೇ ಚಾಳಿ ಬಿಡದ ವೆಂಕಟೇಶ್ ಪತ್ನಿ ಜತೆ ಹಣಕ್ಕಾಗಿ ಆಗಾಗ ಗಲಾಟೆ ಮಾಡುತ್ತಿದ್ದ ಎನ್ನಲಾಗಿದೆ.

ಮೇ 6 ರಂದು ರಾತ್ರಿ ಇದೇ ವಿಚಾರದಲ್ಲಿ ದಂಪತಿ ನಡುವೆ ಜಗಳ ಆಗಿದೆ. ದಂಪತಿಗಳ ಮಗ ಮನು ಮಧ್ಯ ಪ್ರವೇಶಿಸಿ ತಂದೆಯನ್ನು ಸಮಾಧಾನಪಡಿಸಿ ಕೆಲಸಕ್ಕೆ ತೆರಳಿದ್ದ. ಶುಕ್ರವಾರ ಕೆಲಸ ಮುಗಿಸಿ ಬೆಳಗ್ಗೆ ಮನೆಗೆ ಬಂದಾಗ ತಾಯಿ ದೇವೀರಮ್ಮ ಮೃತಪಟ್ಟಿರುವುದು ಬೆಳಕಿಗೆ ಬಂದಿದೆ. ಮೃತ ದೇವಿರಮ್ಮ ಮುಖದ ಮೇಲೆ ಗಾಯದ ಗುರುತು, ಕುತ್ತಿಗೆಯನ್ನು ಸೀರೆಯಿಂದ ಬಿಗಿದಿರುವ ಗುರುತುಗಳು ಪತ್ತೆಯಾಗಿದ್ದು, ಈ ಹಿನ್ನೆಲೆಯಲ್ಲಿ ತಂದೆ ವೆಂಕಟೇಶನೇ ತನ್ನ ತಾಯಿಯನ್ನು ಕೊಲೆ ಮಾಡಿದ್ದಾನೆಂದು ಮಗ ಮನು ಹುಲ್ಲಹಳ್ಳಿ ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ.

ಸ್ಥಳಕ್ಕೆ ಡಿವೈಎಸ್ಪಿ ಗೋವಿಂದರಾಜು, ವೃತ್ತ ನಿರೀಕ್ಷಕ ಲಕ್ಷ್ಮೀಕಾಂತ್ ತಳವಾರ್, ಹುಲ್ಲಹಳ್ಳಿ ಎಸ್‌ಐ ಮಹೇಶ್ ಕುಮಾರ್ ಭೇಟಿ ನೀಡಿ ಪರಿಶೀಲಿಸಿದರು. ಅಲ್ಲದೇ ಶವವನ್ನು ಮೈಸೂರಿನ ಕೆ.ಆರ್.ಆಸ್ಪತ್ರೆಗೆ ರವಾನಿಸಿ ಮರಣೋತ್ತರ ಪರೀಕ್ಷೆ ಬಳಿಕ ವಾರಸುದಾರರಿಗೆ ಹಸ್ತಾಂತರಿಸಿದರು. ಕೃತ್ಯವೆಸಗಿ ತಲೆಮರೆಸಿಕೊಂಡಿದ್ದ ಆರೋಪಿ ವೆಂಕಟೇಶ್‌ನನ್ನು ಅಪರಾಧ ವಿಭಾಗದ ಎಸ್‌ಐ ನಂಜುಂಡರಾಜ್ ಅರಸ್ ಮತ್ತು ಸಿಬ್ಬಂದಿ ಕಾರ್ಯಾಚರಣೆ ನಡೆಸಿ ವಶಕ್ಕೆ ಪಡೆದಿದ್ದಾರೆ. ಈ ಸಂಬಂಧ ಹುಲ್ಲಹಳ್ಳಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಕೇತಹಳ್ಳಿ ಮಹದೇವಪ್ಪ ನಿಧನ

ತಿ.ನರಸೀಪುರ ಮೇ 7 (ಎಸ್‌ಕೆ)– ಕಾಂಗ್ರೆಸ್‌ನ ಹಿರಿಯ ರಾಜಕಾರಣಿ, ತಾಪಂ ಮಾಜಿ ಸದಸ್ಯ, ಕರೋಹಟ್ಟಿ ಗ್ರಾಪಂ ಮಾಜಿ ಅಧ್ಯಕ್ಷರೂ ಆದ ಮಾಜಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಆಪ್ತ ಕೇತಹಳ್ಳಿ ಮಹದೇವಪ್ಪ (68) ಶನಿವಾರ ಮಧ್ಯಾಹ್ನ ನಿಧನರಾದರು. ಮೃತರು ಪತ್ನಿ, ಓರ್ವ ಪುತ್ರ, ಇಬ್ಬರು ಪುತ್ರಿಯರು ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಭಾನುವಾರ ಮಧ್ಯಾಹ್ನ ಸ್ವಗ್ರಾಮದ ವೀರಶೈವ ರುದ್ರಭೂಮಿಯಲ್ಲಿ ನೆರವೇರಿಸಲಾಗುವುದು. ಮೃತರ ನಿಧನಕ್ಕೆ ಮಾಜಿ ಶಾಸಕ ಡಾ. ಹೆಚ್.ಸಿ.ಮಹದೇವಪ್ಪ, ಶಾಸಕ ಎಂ.ಅಶ್ವಿನ್ ಕುಮಾರ್, ಮಾಜಿ ಶಾಸಕ ಡಾ.ಭಾರತಿ ಶಂಕರ್, ಕಾಂಗ್ರೆಸ್ ಮುಖಂಡ ಸುನೀಲ್ ಬೋಸ್, ವೈದ್ಯಾಧಿಕಾರಿ ಡಾ.ರೇವಣ್ಣ, ಪುರಸಭಾಧ್ಯಕ್ಷ ಎಸ್.ಮದನ್ ರಾಜ್, ಉಪಾಧ್ಯಕ್ಷೆ ಪ್ರೇಮ, ಜೆಡಿಎಸ್ ಕ್ಷೇತ್ರಾಧ್ಯಕ್ಷ ಚಿನ್ನಸ್ವಾಮಿ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಎಂ.ಡಿ. ಬಸವರಾಜು, ಮೈಮುಲ್ ನಿರ್ದೇಶಕ ಚೆಲುವರಾಜು ಸಂತಾಪ ಸೂಚಿಸಿದ್ದಾರೆ.



ಕೋಟೆಯಲ್ಲಿ ಕಸಾಪ ಸಂಸ್ಥಾಪನಾ ದಿನಾಚರಣೆ

ಹೆಚ್.ಡಿ.ಕೋಟೆ, ಮೇ 7(ಮಂಜು)– ಗ್ರಾಮೀಣ ಜನರು ಕನ್ನಡ ಉಳಿಸಿ ಬೆಳೆಸಿಕೊಂಡು ಬರುತ್ತಿದ್ದು, ಅವರಿಗೆ ಸರಿಯಾದ ಮನ್ನಣೆ ಕೊಡದಿದ್ದರೆ ಕನ್ನಡಕ್ಕೆ ಕುತ್ತು ಬರುವ ಸಾಧ್ಯತೆ ಇದೆ ಎಂದು ಉಪನ್ಯಾಸಕ ಡಾ.ಎಂ.ಎನ್.ರವಿಶಂಕರ್ ತಿಳಿಸಿದರು.

ಪಟ್ಟಣದ ಹಳೇ ತಾಲೂಕು ಕಚೇರಿ ಆವರಣದಲ್ಲಿ ತಾಲೂಕು ಕನ್ನಡ ಸಾಹಿತ್ಯ ಪರಿಷತ್‌ನಿಂದ ನಡೆದ ಕಸಾಪ 108ನೇ ಸಂಸ್ಥಾಪನಾ ದಿನಾಚರಣೆಯಲ್ಲಿ ವಿಶೇಷ ಉಪನ್ಯಾಸ ನೀಡಿ ಮಾತನಾಡಿದ ಅವರು, ಇಂದು ಗಲಾಟೆ ಗದ್ದಲದ ನಡುವೆ ಕನ್ನಡ ಕಟ್ಟುವ ಕೆಲಸ ಮಾಡಬೇಕಾಗಿದೆ. ಎಂಟತ್ತು ಜನ ಸೇರಿ ಕಟ್ಟಿದ ಸಂಸ್ಥೆ ಕನ್ನಡ ಸಾಹಿತ್ಯ ಪರಿಷತ್ತು. ಮೈಸೂರು ಮಹಾರಾಜರ ದೇಣಿಗೆಯಿಂದ ಕಟ್ಟಿದ ಕನ್ನಡದ ಸಂಸ್ಥೆ. ಕನ್ನಡ ಕಟ್ಟುವ ಕಾಯಕ ಮಾಡಬೇಕು, ಮಾತೃಭಾಷೆ ಬೆಳೆಸಬೇಕು ಎಂದು ಕನ್ನಡ ಮನಸ್ಸುಗಳು ಕಟ್ಟಿದ ಸಂಸ್ಥೆ ಕನ್ನಡ ಸಾಹಿತ್ಯ ಪರಿಷತ್ತು ಕನ್ನಡ ಸಾಹಿತ್ಯ ಪರಿಷತ್ ಮೊದಲು ಕರ್ನಾಟಕ ಸಾಹಿತ್ಯ ಪರಿಷತ್ತಾಗಿತ್ತು. ನಂತರ ಜನಸಾಮಾನ್ಯರ ಪರಿಷತ್ತಾಗಿ ಬೆಳೆದಿದೆ. ನಗರದ ಜನರು ಕನ್ನಡವನ್ನು ಕಲುಷಿತಗೊಳಿಸಿದ್ದಾರೆ. ಆದರೆ ಗ್ರಾಮೀಣ ಜನರಲ್ಲಿ ಕನ್ನಡ ಉಳಿದಿದೆ. ಹಣ ಮುಖ್ಯ ಅಲ್ಲ, ನಾನು ಸಮಾಜಕ್ಕೆ ಏನು ಕೊಟ್ಟಿದ್ದೇನೆ ಎಂಬುದು ಮುಖ್ಯವಾಗುತ್ತದೆ. ಭಾಷೆ ನಾಲಿಗೆಯಿಂದ ಬರದೆ ಮನಸ್ಸಿನಿಂದ ಬಂದರೆ ಕನ್ನಡ ಭಾಷೆ ಬೆಳೆಯಲು ಸಾಧ್ಯ ಎಂದರು.



ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಬಿಇಓ ಎಂ.ಚಂದ್ರಕಾಂತ್, ನಾಲ್ವಡಿ ಕೃಷ್ಣರಾಜ ಒಡೆಯರ ಪರಿಕಲ್ಪನೆಯಲ್ಲಿ ಕಟ್ಟಿದ ಕಸಾಪ ಇಂದಿಗೆ 108 ವಸಂತ ಕಾಣುವ ಮೂಲಕ ಗಟ್ಟಿಯಾಗಿ ನೆಲೆ ನಿಂತಿದೆ ಎಂದರು.

ಕಾರ್ಯಕ್ರಮದಲ್ಲಿ ತಾಲೂಕು ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಮಹದೇವು, ತಾಲೂಕು ವಕೀಲರ ಸಂಘದ ಅಧ್ಯಕ್ಷ ಎ.ಸಿ.ರವಿಕುಮಾರ್, ತಾಲೂಕು ಕಸಾಪ ಅಧ್ಯಕ್ಷ ಪ್ರಮೋದ್, ಗಿರೀಶ್‌ಮೂರ್ತಿ, ಸಿ.ಎನ್.ನಾಗಣ್ಣ, ಎಸ್.ಪಿ.ಪ್ರಕಾಶ್, ಪ್ರಾಧ್ಯಾಪಕ ಕಾಳೇಗೌಡ, ಶ್ರೀಕಾಂತ್, ಸಿದ್ದರಾಜು, ಕೆಂಪರಾಜು, ಪರಶಿವಮೂರ್ತಿ, ಮಹದೇವಸ್ವಾಮಿ, ಕೃಷ್ಣ, ಕೆ.ಎನ್.ಮಹೇಶ್, ಜಯಂತ್, ಹೆಚ್.ಎಸ್.ಕುಮಾರ್, ಚನ್ನ, ಸರಸ್ವತಿ, ಎಂ.ಪಿ.ರಾಜೇಶ್ವರಿ, ಅನ್ನಪೂರ್ಣ, ರಾಜಕುಮಾರ್, ದೇವನಾಯಕ ಇದ್ದರು.

ದೊಡ್ಡೇಕೊಪ್ಪಲು ಗ್ರಾಪಂಗೆ ನಂಜುಂಡ ಅಧ್ಯಕ್ಷ

ಕೆ.ಆರ್.ನಗರ, ಮೇ 7– ತಾಲೂಕಿನ ದೊಡ್ಡೇಕೊಪ್ಪಲು(ಡೋರ್ನಹಳ್ಳಿ) ಗ್ರಾಪಂ ಅಧ್ಯಕ್ಷರಾಗಿ ನಂಜುಂಡ ಅವಿರೋಧವಾಗಿ ಆಯ್ಕೆಯಾದರು. ಈ ಹಿಂದಿನ ಅಧ್ಯಕ್ಷ ಕೃಷ್ಣ ಅವರ ರಾಜೀನಾಮೆಯಿಂದ ತೆರವಾದ ಸ್ಥಾನಕ್ಕೆ ಗ್ರಾಪಂನಲ್ಲಿ ನಡೆದ ಚುನಾವಣೆಯಲ್ಲಿ ನಂಜುಂಡ ಅವರನ್ನು ಹೊರತುಪಡಿಸಿ ಬೇರೆ ಯಾರೂ ನಾಮಪತ್ರ ಸಲ್ಲಿಸದ ಕಾರಣ ಅವಿರೋಧ ಆಯ್ಕೆಯನ್ನು ಚುನಾವಣಾಧಿಕಾರಿ ಸಮಾಜ ಕಲ್ಯಾಣ ಇಲಾಖೆ ಸಹಾಯಕ ನಿರ್ದೇಶಕ ಅಶೋಕ್ ಪ್ರಕಟಿಸಿದರು. ಈ ವೇಳೆ ಉಪಾಧ್ಯಕ್ಷೆ ಭಾಗ್ಯ, ಸದಸ್ಯರಾದ ಕೆ.ಪಿ.ಜಗದೀಶ್, ಬಿ.ಎಂ.ಗಿರೀಶ್, ಸುನೀತಾ, ಎ.ಎಸ್.ಯೋಗೀಶ್, ಎಂ.ಕಾವ್ಯ, ಡಿ.ಆರ್.ಲಕ್ಷ್ಮಿ, ಮಹದೇವಮ್ಮ, ರಾಜೇಶ್ವರಿ, ಮಹೇಶ್ ಗೌಡ, ಜೆ.ಸುಮ, ಕೆ.ಎಸ್.ಶೇಖರ್, ಎ.ಶ್ವೇತಾ, ಕೆ.ಎಂ.ಸವಿತಾ, ಕೆ.ಕುಮಾರ್, ರಾಮನಾಯಕ ಹಾಜರಿದ್ದರು.



ಕೃಷ್ಣ, ಕೆ.ಬಿ.ಪಲ್ಲವಿ, ಸಾವಿತ್ರಮ್ಮ ಗೈರು ಹಾಜರಾಗಿದ್ದರು. ಅಧ್ಯಕ್ಷರ ಆಯ್ಕೆ ಪ್ರಕಟಗೊಳ್ಳುತ್ತಿದ್ದಂತೆ ಕಾಂಗ್ರೆಸ್ ಮುಖಂಡರು ಮತ್ತು ಕಾರ್ಯಕರ್ತರು ಪಟಾಕಿ ಸಿಡಿಸಿ ಸಿಹಿ ಹಂಚಿ ಸಂಭ್ರಮಿಸಿದರಲ್ಲದೆ ಕಾಂಗ್ರೆಸ್ ಮುಖಂಡ ಡಿ.ರವಿಶಂಕರ್ ಮತ್ತು ಕಾಂಗ್ರೆಸ್ ಪಕ್ಷಕ್ಕೆ ಜೈಕಾರ ಕೂಗಿದರು.

ತಾಲೂಕು ಕಾಂಗ್ರೆಸ್ ವಕ್ತಾರ ಸೈಯದ್ ಜಾಬೀರ್, ತಾಪಂ ಮಾಜಿ ಸದಸ್ಯ ನಂಜುಂಡ, ಕಾಂಗ್ರೆಸ್ ಮುಖಂಡರಾದ ಮಹದೇವ್, ವೆಂಕಟೇಗೌಡ, ಜಯರಾಮು, ಶಶಾಂಕ್, ಶಿವರಾಜು, ನಂಜುಂಡ, ಗುಡಪ್ಪ, ರೇವಣ್ಣ, ಬಲರಾಮು, ಸಿದ್ದಾರ್ಥ್ ಸೇರಿದಂತೆ ಇನ್ನಿತರರಿದ್ದರು.

ಕಪ್ಪನಕಟ್ಟೆಯಲ್ಲಿ ಬಾಲ್ಯವಿವಾಹ ನಿಷೇಧ ಕಾಯ್ದೆ ಕುರಿತು ಅರಿವು

ಹನಗೋಡು, ಮೇ 7 (ಮಹೇಶ್)– ಕಾನೂನಿನ ಅರಿವಿಲ್ಲದೆ ಗ್ರಾಮೀಣ ಪ್ರದೇಶದಲ್ಲಿ ತಪ್ಪುಗಳು ಹೆಚ್ಚುತ್ತಿವೆ ಎಂದು ಹುಣಸೂರು ಗ್ರಾಮಾಂತರ ಪೊಲೀಸ್ ಠಾಣೆ ಎಸ್‌ಐ ರಾಧಾ ತಿಳಿಸಿದ್ದಾರೆ.

ತಾಲೂಕಿನ ಕಪ್ಪನಕಟ್ಟೆ ಹಾಡಿಯಲ್ಲಿ ಬಾಲ್ಯವಿವಾಹ ನಿಷೇಧ ಕಾಯ್ದೆ ಮತ್ತು ಲೈಂಗಿಕ ಅಪರಾಧಗಳಿಂದ ಮಕ್ಕಳ ರಕ್ಷಣೆ, ಸೈಬರ್ ಅಪರಾಧಗಳ ಅರಿವು ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಜನರಿಗೆ ಕಾನೂನಿನಲ್ಲಿರುವ ಸೌಲಭ್ಯಗಳ ಮಾಹಿತಿ ಕೊರತೆ ಇದೆ. ಕಾನೂನಿನ ಬಗ್ಗೆ ಜಾಗೃತಿ ಅತ್ಯವಶ್ಯಕವಾಗಿದೆ ಎಂದರು.

ಅಪಘಾತ ಪ್ರಕರಣಗಳು, ಮಹಿಳೆ ಮತ್ತು ಮಕ್ಕಳ ಮೇಲೆ ಶೋಷಣೆ, ಜೀತ ಪದ್ಧತಿ, ಗರ್ಭಪಾತ, ಭ್ರೂಣಹತ್ಯೆ, ಲೈಂಗಿಕ ದೌರ್ಜನ್ಯ, ರಸ್ತೆ ಸುರಕ್ಷತೆ, ಮೊದಲಾದ ಹಲವಾರು ಪ್ರಕರಣಗಳಿಗೆ ಕಾನೂನು ಅಡಿಯಲ್ಲಿ ಇರುವ ಶಿಕ್ಷೆ, ಪರಿಹಾರದ ಬಗ್ಗೆ ಜನರಲ್ಲಿ ಜಾಗೃತಿ ಮೂಡಿಸುವ ಕೆಲಸ ಆಗಬೇಕಾಗಿದೆ ಎಂದರು.



ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಅಧಿಕಾರಿ ರಶ್ಮಿ ಮಾತನಾಡಿ, ಇತ್ತೀಚಿನ ದಿನಗಳಲ್ಲಿ ಬಾಲ್ಯವಿವಾಹ ಹೆಚ್ಚುತ್ತಿದೆ. ಇದರ ಬಗ್ಗೆ ಅರಿವು ಮೂಡಿಸುವ ಸಲುವಾಗಿ ಸರ್ಕಾರ ಪ್ರಯತ್ನ ನಡೆಸುತ್ತಿದೆ. ಅಧಿಕಾರಿಗಳ ಜೊತೆ ಪೋಷಕರು ಮತ್ತು ಸಾರ್ವಜನಿಕರು ಸಹಕಾರ ನೀಡಿದಲ್ಲಿ ಬಾಲ್ಯವಿವಾಹ ತಡೆಯಲು ಸಾಧ್ಯ ಎಂದರು.

ದೊಡ್ಡಹೆಜ್ಜೂರು ಗ್ರಾಪಂ ಅಧ್ಯಕ್ಷ ಶಿವಶಂಕರ್, ಪಿಡಿಓ ಮಂಜುನಾಥ್, ಪ್ರೊಬೇಷನರಿ ಸಬ್ ಇನ್ಸ್‌ಪೆಕ್ಟರ್ ವರ್ಷಿತಾ, ಜಿಲ್ಲಾ ಜೇನು ಕುರುಬರ ಸಂಘದ ಅಧ್ಯಕ್ಷ ಜೆ.ಟಿ.ರಾಜಪ್ಪ, ದಸಂಸ ಮುಖಂಡ ಕಿರಂಗೂರು ಸ್ವಾಮಿ, ಅಂಬೇಡ್ಕರ್ ಸ್ವಾಭಿಮಾನಿ ಸೇನೆ ತಾಲೂಕು ಅಧ್ಯಕ್ಷ ನಾಗೇಶ್ ಹೆಜ್ಜೂರು, ಲಿಖಿತ್ ಮತ್ತಿತರರು ಹಾಜರಿದ್ದರು.

ಕನ್ನಡ ನಾಡು, ನುಡಿ, ಸಾಹಿತ್ಯ, ಸಂಸ್ಕೃತಿ ಅರಿವು ಮೂಡಿಸಿ

ಹುಣಸೂರು, ಮೇ 7(ಕೆಕೆ)– ಕನ್ನಡ ನಾಡು, ನುಡಿ, ಸಾಹಿತ್ಯ, ಸಂಸ್ಕೃತಿ ಬಗ್ಗೆ ಅರಿವು ಮೂಡಿಸಿ ಕನ್ನಡದ ಬಗ್ಗೆ ಹೆಮ್ಮೆ ಬೆಳೆಸಿಕೊಳ್ಳುವಲ್ಲಿ ಕನ್ನಡ ಸಾಹಿತ್ಯ ಪರಿಷತ್‌ನ ಪಾತ್ರ ಅಪಾರ ಎಂದು ಬಿಇಓ ಎಸ್.ಪಿ.ನಾಗರಾಜು ಅಭಿಪ್ರಾಯಪಟ್ಟರು.

ನಗರದ ರೋಟರಿ ಭವನದಲ್ಲಿ ಕನ್ನಡ ಸಾಹಿತ್ಯ ಪರಿಷತ್ ಹಾಗೂ ರೋಟರಿ ಸಂಸ್ಥೆ ಸಹಯೋಗದಲ್ಲಿ ನಡೆದ ಕನ್ನಡ ಸಾಹಿತ್ಯ ಪರಿಷತ್ ಸಂಸ್ಥಾಪನಾ ದಿನಾಚರಣೆಯಲ್ಲಿ ಮಾತನಾಡಿದ ಅವರು, ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ 1915 ರ ಮೇ 5 ಐತಿಹಾಸಿಕ ದಿನವಾಗಿದೆ. ಅಂದು ಕನ್ನಡ ಸಾಹಿತ್ಯ ಪರಿಷತ್ತು ಉದಯವಾದ ದಿನ. ಕನ್ನಡತನ ಮತ್ತು ಕನ್ನಡಿಗರೆಂಬ ಹೆಮ್ಮೆ ತರುವಲ್ಲಿ ಪ್ರಮುಖ ಪಾತ್ರವಹಿಸಿದೆ ಎಂದರು.



ಕಸಾಪ ಸ್ಥಾಪನೆಯಲ್ಲಿ ನಾಲ್ವಡಿ ಕೃಷ್ಣರಾಜ ಒಡೆಯರ್, ಸರ್ ಎಂ.ವಿಶ್ವೇಶ್ವರಯ್ಯ, ನಂಜುಂಡಯ್ಯ, ಆಲೂರು ವೆಂಕಟರಾಯ, ಕರ್ಪೂರದ ಶ್ರೀನಿವಾಸರಾಯರ ಪಾತ್ರ ಪ್ರಮುಖವಾದುದು. ಬ್ರಿಟಿಷರ ಆಳ್ವಿಕೆಯಲ್ಲಿ ನಾವು ನಮ್ಮತನ ಕಳೆದುಕೊಂಡಿದ್ದೆವು. ಸ್ವಾತಂತ್ರ್ಯ ಚಳವಳಿ ದೇಶದಾದ್ಯಂತ ವ್ಯಾಪಿಸಿದರೂ, ಕನ್ನಡಿಗರು ಒಗ್ಗೂಡಿ ಹೋರಾಡಲು ಸಾಧ್ಯವಾಗಿರಲಿಲ್ಲ. ಇಂತಹ ಸಂದರ್ಭದಲ್ಲಿ ಹಲವಾರು ಸಂಸ್ಥಾನಗಳಲ್ಲಿ ವಿಭಜನೆಯಾಗಿದ್ದ ಕನ್ನಡದ ಮನಸ್ಸುಗಳನ್ನು ಕನ್ನಡ ಸಾಹಿತ್ಯ ಪರಿಷತ್ತು ಒಗ್ಗೂಡಿಸಿತು ಎಂದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ತಾಲೂಕು ಕಸಾಪ ಅಧ್ಯಕ್ಷ ಹೆಚ್.ಕೆ.ಮಹದೇವ, ಕಸಾಪ ಕನ್ನಡಿಗರ ಹೆಮ್ಮೆ ಸಂಸ್ಥೆ. ಜನಸಾಮಾನ್ಯರಿಗೆ ಕಸಾಪ ಹುಟ್ಟು, ಉದ್ದೇಶ, ಬೆಳವಣಿಗೆ, ಹೋರಾಟ, ಕಾರ್ಯಗಳನ್ನು ತಿಳಿಸುವ ಕಾರ್ಯವನ್ನು ಸಂಸ್ಥಾಪನಾ ದಿನ ಆಚರಿಸುವ ಮೂಲಕ ಮಾಡಲಾಗುತ್ತಿದೆ. ತಾಲೂಕು ಕಸಾಪ ಗ್ರಾಮೀಣ ಶಾಲೆ, ಕಾಲೇಜುಗಳಲ್ಲೂ ಪ್ರತಿಭೆಗಳನ್ನು ಗುರುತಿಸುವ ಕೆಲಸ ಮಾಡಲಿದ್ದು, ಯುವ ಬರಹಗಾರರು, ಕಲಾವಿದರನ್ನು ಗುರುತಿಸಿ ಪ್ರೋತ್ಸಾಹಿಸುವ ಜೊತೆಗೆ ಗೌರವಿಸುವ ಕೆಲಸ ಮಾಡಲಿದೆ. ಕವಿಗಳು, ಲೇಖಕರು, ಕನ್ನಡಕ್ಕಾಗಿ ಹೋರಾಡಿದ ಮಹನೀಯರ ಜೀವನ ಸಾಧನೆ ತಿಳಿಸಲು ಕಾರ್ಯಕ್ರಮ ಏರ್ಪಡಿಸುತ್ತೇವೆ ಎಂದರು.

ರೋಟರಿ ಸಂಸ್ಥೆ ಅಧ್ಯಕ್ಷ ಡಾ.ಬಸವರಾಜು ಕಾರ್ಯಕ್ರಮ ಉದ್ಘಾಟಿಸಿ, ಭುವನೇಶ್ವರಿ ದೇವಿ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿದರು. ಇದೇ ವೇಳೆ ತಾಲೂಕು ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ನೂತನ ಅಧ್ಯಕ್ಷ ನರಸಿಂಹ ಅವರನ್ನು ಸನ್ಮಾನಿಸಲಾಯಿತು.

ಕಸಾಪ ಮಾಜಿ ಅಧ್ಯಕ್ಷ ಪ್ರೊ.ಎಚ್.ಆರ್.ಸಿದ್ದೇಗೌಡ ಮಾತನಾಡಿದರು. ಕಸಾಪ ನಿಕಟಪೂರ್ವ ಅಧ್ಯಕ್ಷ ಸೋಮಶೇಖರ, ಮಾಜಿ ಅಧ್ಯಕ್ಷ ಎಸ್.ಜಯರಾಮು, ಸಮಾಜ ಸೇವಕ ಆನಂದಸ್ವಾಮಿ, ರಾಜ್ಯ ಸರ್ಕಾರಿ ನೌಕರರ ಸಂಘದ ತಾಲೂಕು ಅಧ್ಯಕ್ಷ ಎಸ್.ಗೋವಿಂದೇಗೌಡ, ಕವಿ ಟಿ.ಲೋಕೇಶ್, ಡಾ.ಲೋಹಿತ್, ಶಿಕ್ಷಕರ ಸಂಘದ ಗೌರವಾಧ್ಯಕ್ಷ ಟಿ.ರಂಗಸ್ವಾಮಿ, ಗಾಯಕರಾದ ಸಿ.ಎಸ್.ಮಹೇಶ್, ದಿವಾಕರ, ಶಿಕ್ಷಣ ಸಂಯೋಜಕ ರುದ್ರಪ್ಪ, ನಾಗಪ್ರಕಾಶ್, ನಂಜುಂಡಸ್ವಾಮಿ.ಕೆ, ಕುಮಾರ್ ಅಜಾದ್ ನಗರ, ಕಸಾಪ ಸದಸ್ಯರು ಉಪಸ್ಥಿತರಿದ್ದರು.

ಪಂಜಾಬ್ ವಿರುದ್ಧ ರಾಜಸ್ಥಾನ್‌ಗೆ ಭರ್ಜರಿ ಜಯ

ಮುಂಬೈ, ಮೇ 7– ಯಶಸ್ವಿ ಜೈಸ್ವಾಲ್ ಅವರ ಆಕರ್ಷಕ ಅರ್ಧಶತಕ ಮತ್ತು ಯಜುವೇಂದ್ರ ಚಹಲ್ ಅವರ ಸ್ಪಿನ್ ಮೋಡಿ ನೆರವಿನಿಂದ ರಾಜಸ್ಥಾನ್ ರಾಯಲ್ಸ್ ಪಂಜಾಬ್ ಕಿಂಗ್ಸ್ ವಿರುದ್ಧ 6 ವಿಕೆಟ್‌ಗಳ ಜಯ ಸಾಧಿಸಿದೆ. ಇದರೊಂದಿಗೆ ಗೆಲುವಿನ ಹಾದಿಗೆ ಮರಳಿರುವ ರಾಜಸ್ಥಾನ್ ಪ್ಲೇಆಫ್‌ನತ್ತ ದಿಟ್ಟ ಹೆಜ್ಜೆಯನ್ನಿಟ್ಟಿದ್ದು, ಮಯಾಂಕ್ ಪಡೆಯ ಪ್ಲೇಆಫ್ ಹಾದಿ ಮತ್ತಷ್ಟು ಕಠಿಣವಾಗಿದೆ.




ಇಲ್ಲಿನ ವಾಂಖೇಡೆ ಮೈದಾನದಲ್ಲಿ ನಡೆದ ಪಂದ್ಯದಲ್ಲಿ ಟಾಸ್ ಗೆದ್ದು ಮೊದಲು ಬ್ಯಾಟಿಂಗ್ ಮಾಡಿದ ಪಂಜಾಬ್ ನಿಗದಿತ 20 ಓವರ್‌ಗಳಲ್ಲಿ 5 ವಿಕೆಟ್ ನಷ್ಟಕ್ಕೆ 189 ರನ್ ಗಳಿಸಿತು. ತಂಡದ ಪರ ಜಾನಿ ಬೆಸ್ಟೊ 56, ಶಿಖರ್ ಧವನ್ 12, ಭಾನುಕ ರಾಜಪಕ್ಷ 27, ಮಯಾಂಕ್ ಅಗರ್ವಾಲ್ 15, ಜಿತೇಶ್ ಶರ್ಮಾ 38, ಲಿಯಾಮ್ ಲಿವಿಂಗ್‌ಸ್ಟೋನ್ 22 ರನ್ ಗಳಿಸಿದರು. ರಾಜಸ್ಥಾನ್ ಪರ ಚಹಲ್ 3, ಅಶ್ವಿನ್, ಪ್ರಸಿದ್ಧ ಕೃಷ್ಣ ತಲಾ ಒಂದೊಂದು ವಿಕೆಟ್ ಪಡೆದರು.

ನಂತರ 190 ರನ್‌ಗಳ ಗುರಿ ಬೆನ್ನತ್ತಿದ ರಾಜಸ್ಥಾನ್ 2 ಎಸೆತ ಬಾಕಿ ಇರುವಂತೆಯೇ 19.4 ಓವರ್‌ಗಳಲ್ಲಿ 4 ವಿಕೆಟ್ ನಷ್ಟಕ್ಕೆ ಗೆಲುವು ಸಾಧಿಸಿತು. ತಂಡದ ಪರ ಯಶಸ್ವಿ ಜೈಸ್ವಾಲ್ 68, ಜೋಸ್ ಬಟ್ಲರ್ 30, ನಾಯಕ ಸಂಜು ಸ್ಯಾಮ್ಸನ್ 23, ದೇವದತ್ ಪಡಿಕ್ಕಲ್ 31, ಶಿಮ್ರಾನ್ ಹೆಟ್ಮೆಯರ್ 31 ರನ್ ಗಳಿಸಿದರು. ಪಂಜಾಬ್ ಪರ ಅರ್ಶದೀಪ್ ಸಿಂಗ್ 2, ರಬಾಡ, ರಿಷಿ ಧವನ್ ತಲಾ ಒಂದೊಂದು ವಿಕೆಟ್ ಉರುಳಿಸಿದರು. ಯಶಸ್ವಿ ಜೈಸ್ವಾಲ್ ಪಂದ್ಯಶ್ರೇಷ್ಠ ಪ್ರಶಸ್ತಿಗೆ ಭಾಜನರಾದರು.

ಕೆಕೆಆರ್ ವಿರುದ್ಧ ಗೆದ್ದ ರಾಹುಲ್ ಪಡೆ

ಮುಂಬೈ, ಮೇ 7– ಲಖನೌ ಸೂಪರ್ ಜೈಂಟ್ಸ್ ಕೋಲ್ಕತ್ತಾ ನೈಟ್ ರೈಡರ್ಸ್ ವಿರುದ್ಧ 75 ರನ್ ಭಾರೀ ಅಂತರದ ಗೆಲುವು ಸಾಧಿಸಿದೆ. ಇದರೊಂದಿಗೆ ಲಕ್ನೋ ಅಂಕಪಟ್ಟಿಯಲ್ಲಿ ಗುಜರಾತ್ ಟೈಟನ್ಸ್ ಅನ್ನು ಹಿಂದಿಕ್ಕಿ ಅಗ್ರಸ್ಥಾನಕ್ಕೇರಿದೆ.



ಇಲ್ಲಿನ ಎಂಸಿಎ ಮೈದಾನದಲ್ಲಿ ನಡೆದ ಪಂದ್ಯದಲ್ಲಿ ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ಲಕ್ನೋ ನಿಗದಿತ 20 ಓವರ್‌ಗಳಲ್ಲಿ 7 ವಿಕೆಟ್ ನಷ್ಟಕ್ಕೆ 176 ರನ್ ಗಳಿಸಿತು. ತಂಡದ ಪರ ಕ್ವಿಂಟನ್ ಡಿಕಾಕ್ 50, ದೀಪಕ್ ಹೂಡಾ 41, ಕೃನಾಲ್ ಪಾಂಡ್ಯ 25, ಮಾರ್ಕಸ್ ಸ್ಟೋಯಿನಿಸ್ 28, ಹೋಲ್ಡರ್ 13, ಆಯುಷ್ ಬಡೋನಿ 15ರನ್ ಗಳಿಸಿದರು. ಕೆಕೆಆರ್ ಪರ ಆಂಡ್ರೆ ರಸೆಲ್ 2, ಟೀಮ್ ಸೌಥಿ, ಶಿವಂ ಮಾವಿ ಹಾಗೂ ಸುನೀಲ್ ನರೇನ್ ತಲಾ ಒಂದೊಂದು ವಿಕೆಟ್ ಕಬಳಿಸಿದರು.

ಬಳಿಕ ಗುರಿ ಬೆನ್ನತ್ತಿದ ಕೋಲ್ಕತ್ತಾ 14.3 ಓವರ್‌ಗಳಲ್ಲಿ 101 ರನ್‌ಗಳಿಗೆ ಆಲೌಟ್ ಆಯಿತು. ತಂಡದ ಪರ ಆಂಡ್ರೆ ರಸೆಲ್ 45, ಸುನೀಲ್ ನರೇನ್ 22, ಆರೋನ್ ಫಿಂಚ್ 14 ರನ್ ಗಳಿಸಿದರು. ಲಕ್ನೋ ಪರ ಆವೇಶ್ ಖಾನ್, ಜೇಸನ್ ಹೋಲ್ಡರ್ ತಲಾ 3, ಮೊಹಸೀನ್ ಖಾನ್, ಚಮೀರಾ ಹಾಗೂ ರವಿ ಬಿಷ್ಣೋಯಿ ತಲಾ ಒಂದೊಂದು ವಿಕೆಟ್ ಪಡೆದರು. ಆವೇಶ್ ಖಾನ್ ಪಂದ್ಯಶ್ರೇಷ್ಠ ಪ್ರಶಸ್ತಿಗೆ ಭಾಜನರಾದರು.

ವಿದ್ಯಾರ್ಥಿನಿಲಯಗಳಿಗೆ ಪ್ರವೇಶಕ್ಕೆ ಅರ್ಜಿ ಆಹ್ವಾನ

ಮೈಸೂರು, ಮೇ 7– ಸಮಾಜ ಕಲ್ಯಾಣ ಇಲಾಖೆ ವತಿಯಿಂದ 2022–23ನೇ ಸಾಲಿಗೆ ವಿದ್ಯಾರ್ಥಿನಿಲಯಗಳಲ್ಲಿ ನಿಲಯವಾರು ಅರ್ಜಿಗಳನ್ನು ಸ್ವೀಕರಿಸುವ ಬದಲು ತಾಲೂಕುವಾರು ಅರ್ಜಿಗಳನ್ನು ಆಹ್ವಾನಿಸಿ, ಸಿ.ಇ.ಟಿ. ಕೌನ್ಸಿಲಿಂಗ್ ಮಾದರಿಯಲ್ಲಿ ಪ್ರವೇಶಕ್ಕೆ ಅರ್ಜಿ ಆಹ್ವಾನಿಸಿದೆ. ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಹಾಗೂ ಹಿಂದುಳಿದ ವರ್ಗಗಳ ವಿದ್ಯಾರ್ಥಿನಿಲಯಗಳಲ್ಲಿ ಬೇಡಿಕೆ ಮತ್ತು ಹಂಚಿಕೆಯನ್ನು ಸರಿದೂಗಿಸುವ ಉದ್ದೇಶದಿಂದ ನಿಲಯವಾರು www.sw.kar.nic.in ಮೂಲಕ ಅರ್ಜಿ ಸಲ್ಲಿಸಬಹುದು. ಭರ್ತಿ ಮಾಡಿದ ಅರ್ಜಿಗಳನ್ನು ಮೇ 25ರೊಳಗೆ ಸಲ್ಲಿಸಲು ತಿಳಿಸಿದೆ. ದೂ.ಸಂ: 08227–260672 ಸಂಪರ್ಕಿಸಬಹುದು.

ಸಹಾಯಕರು ಬೇಕಾಗಿದ್ದಾರೆ
ಶ್ರಾದ್ಧದ ಮನೆಗೆ ಬ್ರಾಹ್ಮಣ ಅಡುಗೆ ಸಹಾಯಕರು ಬೇಕಾಗಿದ್ದಾರೆ. ಸಂಪರ್ಕಿಸಿ:
9845725317

SITE FOR SALE
Ready to Construct
MUDA APPROVED
30x50, East Facing, behind S.V.E.I, Vijayanagar 4th Stage, 2nd Phase.
WhatsApp for Location & Details. **8151056881**

25ನೇ ವರ್ಷದ ವಿವಾಹ ವಾರ್ಷಿಕೋತ್ಸವ



ಶ್ರೀಮತಿ ಸುಚಿತ್ರಾ.ಎಸ್ ಮತ್ತು ಶ್ರೀ ಶ್ರೀನಿವಾಸ್.ಡಿ
ಶುಭಕೋರುವವರು: ಶ್ರೀವತ್ಸಕುಮಾರ್ (ಅಳಿಯಕಟ್ಟು)
ಕ.ರಾ.ಮು.ಓ.ಮುಕ್ತ ಗಂಗೋತ್ರಿ, ಮೈಸೂರು -06

FOR SALE



Two Bedroom Villas
Starting @ Just 55 lakhs
on Bogadi Road,
5 Kms from Ring Road
BOOKINGS OPEN
CALL: 98453 55122



ORANGE CITY-MYSORE
Residential plots @ Just Rs.525/SQFT, Near To New KIADB Land
DIMENSIONS
30x40, 30x50, 40x60
Madikeri-Mysore Highway
8553727271

HYLAND PROPERTIES
Hunsur-Mysore Highway, Mysuru
NISARGA PARADISE
DEVELOPED PLOTS
FULLY DEVELOPED
READY FOR REGISTRATION



BANK LOAN Available
HDFC BANK
LIC HFL
ICICI Bank
HURRY!! FEW LEFT
EXCITING OFFERS CALL US
9513301855
9513301854

Urgent Job Openings
at a Reputed Company
Business Development Manager
Graduation + 2 years work experience.
Salary: 2.4L P.A. to 5 L P.A + Incentives.
Call: 9620478133 / 8904170229
Email: lakshmi.jraj@gmail.com

ಮೈಸೂರು ಮಿತ್ರ
ಜಾಹೀರಾತಿಗಾಗಿ ಸಂಪರ್ಕಿಸಿ:
Ph: 0821-2496522 / 23
Email: ad@mysurumithra.com

READY TO CONSTRUCT DEVELOPED PLOTS
Bogadi Road (5 Min from Ring Road)
Hunsur Road (New National Highway 275)
80% Bank Loan
Yesh 9538885570

ಮೂಡಾ/ಮೂಡಾ ಅನುಮೋದಿತ ನೈಟುಗಳು ಮಾರಾಟಕ್ಕಿವೆ
30x40, 60x40, 20x30
ವಿಜಯನಗರ 4ನೇ ಹಂತ ಹಾಗೂ ಸುತ್ತಮುತ್ತ. ಸಂಪರ್ಕಿಸಿ:
9845807453

10ನೇ ವರ್ಷದ ಪುಣ್ಯಸ್ಮರಣೆ



ನೀವು ನಮ್ಮನ್ನಗಲಿ ಇಂದಿಗೆ ಹತ್ತು ವರ್ಷವಾದರೂ ನಿಮ್ಮ ನಿಸ್ವಾರ್ಥ ಸೇವೆಯಿಂದ ಎಲ್ಲರ ಮನಸ್ಸಿನಲ್ಲಿ ನೆಲೆಸಿರುವಿರಿ
ಇಂತಿ: ಕುಟುಂಬವರ್ಗ ಮಾದಾಪುರ
ಶತಾಯುಷಿ ಶ್ರೀ ಗೌಡರ ಕುಳ್ಳಪ್ಪ
ಮಾದಾಪುರ, ತಿ.ನರಸೀಪುರ ತಾಲ್ಲೂಕು ಮೈಸೂರು ಜಿಲ್ಲೆ.

ಶಿಕ್ಷಕರು ಬೇಕಾಗಿದ್ದಾರೆ
ಗ್ರೇಸ್ ವಿದ್ಯಾ ಸಂಸ್ಥೆ
ಮಹದೇಶ್ವರ ಬಡಾವಣೆ, ಕುಂಬಾರಕೊಪ್ಪಲು, ಮೈಸೂರು
B.Sc., B.Ed. (CBZ) - 1
PUC, D.Ed. - 1
ಸಮಯ: ಬೆಳಿಗ್ಗೆ 11 ಗಂಟೆಗೆ. ಸಂಪರ್ಕಿಸಿ:
9686982951

HOUSE FOR RENT
20'x32' - 2 BHK,
Jayalakshmipuram,
near BMH / Premier Studio, Mysuru.
Mob: 88610-35862

SITE FOR SALE
40x60, North Facing, near Ring Road, Opp. Shubhodini Choultry, Hebbal, Mysore-570016.
Call: **9880422154**
Brokers Excuse


SITES FOR SALE
20 x 30 - 13.20 Lakhs
30 x 40 - 26.40 Lakhs
Bank Loan upto 75%, Ready for Registration, near Gurur Bus Stop, Ramabainagar, Mysore. DTCP approved (Corporation limits)
1.5 Kms from JP Nagar Ring Road
8660105902

ಮೊದಲನೇ ವರ್ಷದ ಪುಣ್ಯಸ್ಮರಣೆ



ಜನನ: 08-03-1962 ನಿಧನ: 10-05-2021
ಎಂ.ಪಿ.ಶ್ರೀನಿವಾಸ್ ಮಾರ್ಚಳ್ಳಿ
ಪ್ರಥಮ ದರ್ಜೆ ಗುತ್ತಿಗೆದಾರರು, ಕೆ.ಆರ್.ನಗರ ತಾಲ್ಲೂಕು
ದುಃಖತಪ್ತರು: ಶ್ರೀಮತಿ ಸುಧಾಮಣಿ, ಮಕ್ಕಳಾದ: ಸುನೀಲ್, ಸೌಮ್ಯ, ಸಂಧ್ಯಾ
ಅಳಿಯಂದಿರಾದ: ಚಿಕ್ಕಸ್ವಾಮಿ, ವಿಜಯ್‌ಕುಮಾರ್, ಸೊಸೆ: ಪ್ರೀತಿ,
ಅಕ್ಕ-ತಂಗಿಯರು, ಅಣ್ಣ-ತಮ್ಮಂದಿರು, ಮೊಮ್ಮಕ್ಕಳು ಹಾಗೂ ಕುಟುಂಬವರ್ಗ.
ದಿನಾಂಕ: 08-05-2022 ರ ಭಾನುವಾರ ಮೃತರ ಸ್ವಗ್ರಾಮದಲ್ಲಿ
ಮೊದಲನೇ ವರ್ಷದ ಪುಣ್ಯಸ್ಮರಣೆ ಕಾರ್ಯಕ್ರಮ ಹಮ್ಮಿಕೊಂಡಿದ್ದು ಆತ್ಮೀಯರು, ಹಿತೈಷಿಗಳು, ಸ್ನೇಹಿತರು, ಬಂಧು ಬಳಗದವರು ಬಂದು ಕಾರ್ಯಕ್ರಮದಲ್ಲಿ ಭಾಗಿಯಾಗಿ ಮೃತರ ಆತ್ಮಕ್ಕೆ ಚಿರಶಾಂತಿ ಕೋರಬೇಕಾಗಿ ಕೋರುವ ಕುಟುಂಬ ವರ್ಗ

First Death Anniversary of



Mr. Charley Richard
Born: 22.09.1956 Died: 06.05.2021
I am the resurrection and the life; He who belives in me, though he dies, yet shall he live, and whoever lives And belives in me shall never die.
A tribute of love from Wife and Family

HIRING
Kannada / Hindi speaking Telecaller.
Mob: 9480185407
teemles.aimysore@badabusiness.com

ಬೇಕಾಗಿದ್ದಾರೆ
ಡೆಲಿವರಿ ಬಾಯ್ಸ್
ದ್ವಿಚಕ್ರ ವಾಹನದ ಲೈಸೆನ್ಸ್ ಹೊಂದಿರಬೇಕು
ನೇರ ಸಂದರ್ಶನದ ಸಮಯ : ಬೆಳಿಗ್ಗೆ 11.00 ರಿಂದ ಮಧ್ಯಾಹ್ನ 1.00 ರವರೆಗೆ ಕೆಳಗೆ ನಮೂದಿಸಿದ ವಿಳಾಸದಲ್ಲಿ
ಮೋಹನ್ ಭಂಡಾರ್ ®
ಸಯ್ಯಾಜಿ ರಾವ್ ರಸ್ತೆ, ಮೈಸೂರು - 01

ಮೊದಲನೇ ವರ್ಷದ ಪುಣ್ಯಸ್ಮರಣೆ



ಅಶೋಕ.ಎಂ.ಎ
ದುಃಖತಪ್ತರು: ತಂದೆ-ಆನಂದ್,ತಾಯಿ-ಪ್ರೇಮ ಅಕ್ಕಂದಿರು, ಭಾವಂದಿರು ಮತ್ತು ಎಲ್ಲಾ ಮಕ್ಕಳುಗಳು

ಉಚಿತ ವೃದ್ಧಾಶ್ರಮ ಸೇವೆ
ನಮ್ಮಲ್ಲಿ ವೃದ್ಧರು, ರೋಗಿಗಳು, ಹಾಸಿಗೆ ಹಿಡಿದವರಿಗೆ, ಅಂಗವಿಕಲರಿಗೆ ಉಚಿತವಾಗಿ ಪ್ರವೇಶಾವಕಾಶವಿದೆ. T&C apply.
ಹೋಮ್ ನರ್ಸಿಂಗ್ ಸೇವೆ ಸಹ ಲಭ್ಯ.
Mob: 9513253747

LEADS KENDRIYA VIDYALAYA
Gayathripuram, Mysore. Ph.No. 0821 - 2476644,
Mob: 99806 12363 & 96111 19622
Email: leadskvmysore@gmail.com
STAFF REQUIRED
The Trained teachers who are ready to work with dedication and service minded with fluency in English to teach below subjects can apply.
P.U.C lecturers : Computer Science, Accountancy, Business, Economics, Geography, Kannada, English, Hindi.
High School & Primary Teachers : Maths, Science, Social, Kannada, English, Physical Education, Dance & Drawing
Working Hours : 9.30 am to 4.30 pm Sd/- Principal
Admissions are open for 2022-23 for L.K.G, U.K.G, 1st Std. and Baby Sitting

15ನೇ ವರ್ಷದ ಸವಿನೆನಪು **40ನೇ ವರ್ಷದ ಸವಿನೆನಪು**



ಶ್ರೀಮತಿ ಚಿಕ್ಕನಿಂಗಮ್ಮ ಶ್ರೀ ಕ್ಯಾತಪ್ಪನ ಬಂಡೆಪ್ಪ
ದುಃಖತಪ್ತರು: ಮಕ್ಕಳು, ಸೊಸೆಯಂದಿರು, ಅಳಿಯಂದಿರು, ಮೊಮ್ಮಕ್ಕಳು ಮತ್ತು ಕುಟುಂಬವರ್ಗದವರು

ಕರ್ನಾಟಕ ಸರ್ಕಾರ
ಅರಣ್ಯ ಇಲಾಖೆ
ಅರಣ್ಯ ಸಂರಕ್ಷಣಾಧಿಕಾರಿಯವರ ಕಚೇರಿ, ಕಾರ್ಯಯೋಜನೆ ವೃತ್ತ
ಅರಣ್ಯ ಭವನ, ಅಶೋಕಪುರಂ, ಮೈಸೂರು–570008
ದೂ.ಕಛೇರಿ:0821–2483917 ಫ್ಯಾಕ್ಸ್: 0821–2483917
ಸಂಖ್ಯೆ:ಎ2/ಬಿಯುಡಿ/ಇ–ಟೆಂಡರ್/ಸಿಆರ್–1/2021–22 ದಿ: 04.05.2022

ಅಲ್ಪಾವಧಿ ಮರು ಇ–ಟೆಂಡರ್ ಪ್ರಕಟಣೆ–02/2022–23

ಈ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ಕಾರ್ಯಯೋಜನೆ, ಮೈಸೂರು ರವರ ಕಛೇರಿಗೆ ಅಗತ್ಯವಿರುವ ಆಕೃತಿ ರಚನಾಕಾರರು/ ಗಣಕಯಂತ್ರ ನಿರ್ವಾಹಕರು/ ವಾಹನ ಚಾಲಕರು/ ಕಾವಲುಗಾರರು/ ಶುಚಿಗಾರರು ಇತ್ಯಾದಿಯವರ ಸೇವೆಯನ್ನು ದಿನಾಂಕ: 01.04.2022 ರಿಂದ 31.03.2023ರವರೆಗೆ ಹೊರ ಸಂಪನ್ಮೂಲ ಏಜೆನ್ಸಿಯವರಿಂದ ಪಡೆಯಲು ಅರ್ಹ ಗುತ್ತಿಗೆದಾರರಿಂದ ಕರ್ನಾಟಕ ಸರ್ಕಾರದ ಇ–ಪ್ರೋಕ್ಯೂರ್‌ಮೆಂಟ್ ಪೋರ್ಟಲ್ www.eproc.karnataka.gov.in ಮುಖಾಂತರ ಟೆಂಡರ್ ಆಹ್ವಾನಿಸಲಾಗಿದೆ. ಆಸಕ್ತಿವುಳ್ಳ ಸಂಸ್ಥೆ/ ಗುತ್ತಿಗೆದಾರರು ಟೆಂಡರ್‌ನಲ್ಲಿ ಭಾಗವಹಿಸಿ ಟೆಂಡರ್ ದರಗಳನ್ನು ನಮೂದಿಸಬಹುದಾಗಿರುತ್ತದೆ. ಅಲ್ಪಾವಧಿ ಮರು ಇ–ಟೆಂಡರ್ ಸ್ವೀಕರಿಸುವ ದಿ: 18.05.2022 ರಂದು ಅಪರಾಹ್ನ 04.00 ಗಂಟೆಯವರೆಗೆ, ತಾಂತ್ರಿಕ ಬಿಡ್‌ಗಳನ್ನು ತೆರೆಯಲು ದಿ: 20.05.2022 ರಂದು ಬೆಳಿಗ್ಗೆ 11.00 ಗಂಟೆಗೆ ಮತ್ತು ಆರ್ಥಿಕ ಬಿಡ್‌ಗಳನ್ನು ತೆರೆಯಲು ದಿ: 23.05.2022 ರಂದು ಅಪರಾಹ್ನ 04.00 ಗಂಟೆಯವರೆಗೆ ನಿಗದಿಪಡಿಸಲಾಗಿರುತ್ತದೆ. ಹೆಚ್ಚಿನ ಮಾಹಿತಿಗಳನ್ನು ಹಾಗೂ ಷರತ್ತುಗಳನ್ನು ಅಂತರ್ಜಾಲದ ಮೂಲಕ ಪಡೆಯಬಹುದಾಗಿರುತ್ತದೆ.

ಸಹಿ/– ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ಹಾಗೂ ಅರಣ್ಯ ಸಂರಕ್ಷಣಾಧಿಕಾರಿಗಳವರ, ತಾಂತ್ರಿಕ ಸಹಾಯಕರು, ಕಾರ್ಯಯೋಜನೆ, ಮೈಸೂರು
DIPR/DDMYS/MCA/67/2022-23

REQUIRED
An experienced lady who can take care of kids 5 and 9 year old and carry out household works. Handsome salary. Timings: 8 am to 5 pm. Sunday Holiday.
Mob: 8310405371

MUDA SITE FOR SALE
Auction 20x30 East facing, Vijayanagar 2nd stage, near KD Circle,
Price - Rs. 7200/- sft.,
Contact: +919845680609

BOOKINGS OPEN FOR
Construction of Brand New Architecture Designed Houses
Architect Designed New Houses
MUDA APPROVED
20'x40' - 27.5 Lakhs
30'x40' - 40 Lakhs
Near St. Joseph's Central School, Hunsur Road, Mysore.
88840-01233 /9740767576

ಬೇಕಾಗಿದ್ದಾರೆ
ಆರೋಗ್ಯಕರ (Part time) ಕೆಲಸ ಹಾಗೂ ಪೆಟ್ರೋಲ್ ಬಂಕ್‌ನಲ್ಲಿ ಕೆಲಸ ನಿರ್ವಹಿಸಲು ಬೇಕಾಗಿದ್ದಾರೆ.
ಕೆಲಸದ ವೇಳೆ: ಬೆಳಿಗ್ಗೆ 6 ರಿಂದ 10 ಗಂಟೆಯವರೆಗೆ.
ಸಾಯಂಕಾಲ: 5 ರಿಂದ 9 ಗಂಟೆವರೆಗೆ.
SSLC / PUC ವಿದ್ಯಾಭ್ಯಾಸ ಮಾಡಿರುವ 20 ರಿಂದ 30 ವಯಸ್ಸಿನ ಯುವಕರು ಬೇಕಾಗಿದ್ದಾರೆ. ಆಸಕ್ತರು ಸಂಪರ್ಕಿಸಿ
9606222435 or 9886209339

SARADA VILAS EDUCATIONAL INSTITUTIONS(R)
KRISHNAMURTHYPURAM, MYSORE
SARADA VILAS PRE-UNIVERSITY COLLEGE
ADMISSION OPEN FOR I PU INTEGRATED COURSE- 2022-23
Registration Open for Integrated PUC
Science Combinations
PCMB, PCME, PCMCs
Excellence in KCET/NEET Coaching
Highlights of Programme:-
- Admission on merit basis with Scholarships for deserving students.
- Personalized attention by experienced faculties for Board and competitive exams like K-CET and NEET.
- Learning through digital classrooms and well-equipped laboratories.
- Research Based Innovative Study Materials.
- Independent Assessment Centre
  - Digital access for parents to track student performance.
- Skill development programme.
- Co-Curricular activities in science: -
  - Science Expo
  - Science educational tour
  - Science Club and Quiz activities

Advisory committee
Physics
Prof. S.R Char M.Sc., B.E., M.S.,
Dr. Y.N Vaidyanath M.Sc., Ph.D.,
Chemistry
Dr. Gurudath M.Sc., Ph.D.,
Mathematics
Prof. S.R. Char M.Sc., B.E. M.S.,
(Author of MATH MAGIC for KCET/JEE)
Biology
Dr. M Devika M.Sc., Ph.D.,
Dr. Ashok M.Sc., Ph.D.,
FOR ADMISSION CONTACT: 9900147863|9113818206
Management, Sarada Vilas Educational Institutions

ಮನೆ ಮಾರಾಟಕ್ಕಿದೆ
20x30 ಗ್ರೌಂಡ್ ಫ್ಲೋರ್ ಅಂಡ್ ಫಸ್ಟ್ ಫ್ಲೋರ್ ನಾರ್ತ್ ಫೇಸ್ ಆರ್ಕಿಟೆಕ್ಟ್ ಬಿಲ್ಡಿಂಗ್ ಆಲ್ ಟೈಪ್ ಶ್ರೀರಾಂಪುರ ಸೆಕೆಂಡ್ ಸ್ಟೇಜ್, ಮೈಸೂರು ನಿಯರ್ ಹುಣಸೆಮರ ಬಸ್ ಸ್ಟಾಪ್. ಸಂಪರ್ಕಿಸಿ:
9845713284, 9141353309
ಮಧ್ಯವರ್ತಿಗಳಿಗೆ ಅವಕಾಶವಿಲ್ಲ.

NOTICE
IN THE COURT OF THE IV ADDL. CIVIL JUDGE AND J.M.F.C. AT MYSURU
O.S. No. 609/2021
Plaintiff: STATE BANK OF INDIA, N.R.Mohalla Branch, By its Small and Medium Enterprise Credit Centre, Represented by its Chief Manger Anuradha T. Office at Bamboo Bazar, New Sayyaji Rao Road, Mysore
V/s
Defendants: 1. Mohammed Zabi, S/o. Mohammed Wajin Major, R/ at No.278, HUDCO, 1st Stage, Bannimantap, Mysuru-570005
2. Krishna, S/o Late Chikkathammaiah Major, R/ at No.51, 8th Cross, C.V. Road, Mandi Mohalla, Mysuru
SUIT SUMMONS TO THE DEFENDANTS
U/O 5 RULE 20 R/W SECTION 151 OF C.P.C
Whereas the above plaintiff Bank has instituted a suit against above both defendants for recovery of Rs.2,53,270/- with interest lent by the above plaintiff to the defendants. hence both of you are hereby summoned to appear in this court in person or by a pleader on **06-06-2022** at 11.00 A.M. to answer the claim and you are directed to produce on that day all the documents upon which you intend to relay in support of your defence. Failing which the suit will be disposed of Exparte.
Given under my hand and seal of the court on this 13th April 2022 at Mysore
BY ORDER OF THE COURT
CHIEF ADMINISTRATIVE OFFICER, PRINCIPAL CIVIL JUDGE AND J.M.F.C, MYSURU
M.K.JAGADEESH
Advocate for the Plaintiff,
No.104, 1st Floor, Boraiah Building New Kantharaje Urs Road, Basaveshwaranagar, Mysuru

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ
ಮೈಸೂರು ವಿಭಾಗ, ಮೈಸೂರು
ಸಂ: ಕರಾಸಾ/ಮೈಗ್ರಾವಿ/ಸಂ/ವಾ/334/335/336/2022–23 ದಿನಾಂಕ: 07.05.2022

ಮ್ಯಾನ್ಯುಲ್ ಟೆಂಡರ್ ಪ್ರಕಟಣೆ 01/2022–23, ಇ–ಟೆಂಡರ್ ಹಾಗೂ ಸಂಧಾನ ಪ್ರಕಟಣೆ ಸಂ: 01/2022–23 (ಇ–ಟೆಂಡರ್ ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಮಾತ್ರ)

ಕ.ರಾ.ರ.ಸಾ. ನಿಗಮ, ಮೈಸೂರು ವಿಭಾಗಕ್ಕೆ ಸೇರಿದ ಮೈಸೂರು ನಗರ ಬಸ್ ನಿಲ್ದಾಣ, ಗ್ರಾಮಾಂತರ ಬಸ್ ನಿಲ್ದಾಣಗಳು ಹಾಗೂ ಇದರ ವ್ಯಾಪ್ತಿಗೆ ಬರುವ ಇತರೆ ಬಸ್ ನಿಲ್ದಾಣಗಳಲ್ಲಿ ಖಾಲಿಯಿರುವ, ಮುಂದೆ ಖಾಲಿಯಾಗುವ ಉಪಾಹಾರಗೃಹ, ದ್ವಿಚಕ್ರವಾಹನ ನಿಲ್ದಾಣ ಹಾಗೂ ಜನರಲ್–ಮಳಿಗೆಗಳನ್ನು ಹಾಗೂ ಪ್ಯಾಕೇಜ್ ಜಾಹೀರಾತು ಹಾಕಲು ಸ್ಥಳಗಳನ್ನು ನೀಡಲು **ಮ್ಯಾನ್ಯುಲ್ ಟೆಂಡರ್, ಇ–ಟೆಂಡರ್ ಹಾಗೂ ಸಂಧಾನ ಪ್ರಕಟಣೆಗಳನ್ನು ಹೊರಡಿಸಲಾಗಿದೆ. ಡಿಜಿಟಲ್–ಕೀ ಹೊಂದಿರುವ ಆಸಕ್ತರು ಮಾತ್ರ ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಇ–ಟೆಂಡರ್‌ನಲ್ಲಿ ಭಾಗವಹಿಸಬಹುದಾಗಿದೆ. ದಿನಾಂಕ 07–05–2022 ರಿಂದ 27–05–2022, 15.00 ಗಂಟೆವರೆಗೆ ಇ–ಟೆಂಡರ್ ದಸ್ತಾವೇಜುಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಮೂಲಕ ವೆಬ್‌ಸೈಟ್ http://www.eproc.karnataka.gov.in** ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. **ಇ–ಟೆಂಡರ್‌ನ್ನು ದಿನಾಂಕ: 31.05.2022, 15:30** ಗಂಟೆಗೆ ತೆರೆಯಲು ನಿಗದಿಗೊಳಿಸಲಾಗಿದೆ (ತಾಂತ್ರಿಕ ತೊಂದರೆ ಇಲ್ಲದೆ ಇದ್ದಲ್ಲಿ).

ಸಂಧಾನದ ಮೂಲಕ ನೀಡುವ ವಾಣಿಜ್ಯ ಮಳಿಗೆಗಳಿಗೆ, ಅರ್ಜಿಗಳನ್ನು ದಿನಾಂಕ 07.05.2022 ರಿಂದ 28.05.2022 15 ಗಂಟೆವರೆಗೆ ಪಡೆದು ದಿನಾಂಕ: 31.05.2022, 12.30 ಗಂಟೆಗೆ ಸಂಧಾನ ಸಭೆಯಲ್ಲಿ ಭಾಗವಹಿಸಬಹುದಾಗಿದೆ. ಮ್ಯಾನ್ಯುಲ್ ಟೆಂಡರ್ ಅರ್ಜಿಗಳನ್ನು ದಿನಾಂಕ: 07.05.2022 ರಿಂದ 30.05.2022 15 ಗಂಟೆವರೆಗೆ ವಿಭಾಗೀಯ ಕಛೇರಿಯಲ್ಲಿ ನೀಡಲಾಗುತ್ತದೆ ಹಾಗೂ ಮ್ಯಾನ್ಯುಲ್ ಟೆಂಡರ್‌ನ್ನು ದಿನಾಂಕ: 01.06.2022 12.00 ಗಂಟೆಗೆ ನಡೆಸಲಾಗುತ್ತದೆ. ಇ–ಟೆಂಡರ್/ಮ್ಯಾನ್ಯುಲ್ ಟೆಂಡರ್ ಹಾಗೂ ಸಂಧಾನಕ್ಕೆ ಗೊತ್ತುಪಡಿಸಿರುವ ವಾಣಿಜ್ಯ ಮಳಿಗೆಗೆ ಭಾಗವಹಿಸಲು ಉದ್ದೇಶಿಸಿರುವ ಆಸಕ್ತರು ವಿಭಾಗೀಯ ಕಛೇರಿಯಿಂದ ಅರ್ಜಿಯನ್ನು ಪಡೆದು ಈ ಕೆಳಗೆ ಸಹಿ ಮಾಡಿರುವವರ ಪದನಾಮಕ್ಕೆ ಇ.ಎಂ.ಡಿ ಮೊತ್ತವನ್ನು ಡಿ.ಡಿ ಮುಖೇನ ಸಲ್ಲಿಸುವುದು ಜೊತೆಗೆ ವಿಳಾಸ ದೃಢೀಕರಣ ಪತ್ರ ಹಾಗೂ ಮೊಬೈಲ್ ಸಂಖ್ಯೆಯನ್ನು ನೀಡಿ ಭಾಗವಹಿಸಬಹುದಾಗಿದೆ. ಅರ್ಜಿ ಪಡೆಯುವ ವಿಚಾರವಾಗಿ, ಹಾಗೂ ಇತರೆ ವಿಚಾರವಾಗಿ ಹೆಚ್ಚಿನ ವಿವರಗಳಿಗೆ ವಿಭಾಗೀಯ ಕಛೇರಿ, ಕರಾರಸಾಸಂ, ಮೈಸೂರು ವಿಭಾಗ, ಹನುಮಂತನಗರ, ಮೈಸೂರು ಇಲ್ಲಿ ಕಛೇರಿ ಅವಧಿಯಲ್ಲಿ ಸಂಪರ್ಕಿಸಲು ಕೋರಲಾಗಿದೆ.

ಹೆಚ್ಚಿನ ವಿವರಗಳಿಗೆ ಸ.ಸಂ.ವ್ಯರ ದೂ.ಸಂ: 7760990811, ಹಾಗೂ ವಿಷಯ ನಿರ್ವಾಹಕರ ದೂ.ಸಂ: 9740661585/9916722462ಗಳನ್ನು ಸಂಪರ್ಕಿಸಬಹುದು.

ಸಹಿ/–
ವಿಭಾಗೀಯ ನಿಯಂತ್ರಣಾಧಿಕಾರಿ
ಕ.ರಾ.ರ.ಸಾ. ನಿಗಮ, ಮೈಸೂರು ವಿಭಾಗ, ಮೈಸೂರು.
ವಾ.ಸಾ.ಸಂ.ಇ/ವಾತ್ರ/424/ಆಕಾರ್/22–23

ಕೋವಿಡ್-19. ಆತಂಕ ಬೇಡ: ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ಸಾಮಾಜಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

